prajavani.net prajavani · www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ದಿವ್ಯಾಗೆ ವಿಶ್ವಕಪ್ ಕಿರೀಟ

ಭಾರತದ ಯುವ ತಾರೆ ದಿವ್ಯಾ ದೇಶಮುಖ್ ಸೋಮವಾರ ಫಿಡೆ ಚೆಸ್ ಮಹಿಳಾ ವಿಶ್ವಕಪ್ ಫೈನಲ್‌ನಲ್ಲಿ ಕೋನೇರು ಹಂಪಿ ಅವರನ್ನು ಸೋಲಿಸಿ, ಪ್ರಶಸ್ತಿಯ ಜೊತೆಗೆ 'ಗ್ರ್ಯಾಂಡ್‌ಮಾಸ್ಟರ್' ಬಿರುದಿಗೂ ಪಾತ್ರರಾದರು



ಶುಭಾಶಯ

ನಾಗಪಂಚಮಿಯ ಹಾರ್ದಿಕ ಶುಭಾಶಯಗಳು

ಸೆನ್ಸೆಕ್ಸ್ 80,891 | ನಿಫ್ಟಿ 24,680 | $/₹ 86.70 | ಚಿನ್ನ (Std. 10g) ₹1,03,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,20,400 (ಬೆಂಗಳೂರು)

ಸರ್ಕಾರ– ವಿಪಕ್ಷ 'ಸಿಂಧೂರ' ಸಂಘರ್ಷ

ತಡ ರಾತ್ರಿವರೆಗೆ ನಡೆದ ವಿಶೇಷ ಚರ್ಚೆ

- 'ಲೋಪದ ಹೊಣೆ ಶಾ ಹೊತ್ತುಕೊಳ್ಳಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆಪರೇಷನ್ ಸಿಂಧೂರ ಕುರಿತು ಲೋಕಸಭೆಯಲ್ಲಿ ಸೋಮವಾರ ಆರಂಭವಾದ ವಿಶೇಷ ಚರ್ಚೆಯು ಸೋಮವಾರ ತಡರಾತ್ರಿಯವರೆಗೆ ನಡೆದು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಡುವಿನ ಮಾತಿನ 'ಸಮರ'ದ ಅಖಾಡವಾಗಿ ಪರಿಣಮಿಸಿತು.

ಸಶಸ್ತ್ರ ಪಡೆಗಳು ರಾಜಕೀಯ–ಮಿಲಿಟರಿ ಉದ್ದೇಶಗಳನ್ನು ಸಾಧಿಸಿದ ಕಾರಣ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆಯೇ ಹೊರತು ಅದಕ್ಕೆ ಪೂರ್ಣ ವಿರಾಮ ಹಾಕಿಲ್ಲ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸ್ಪಷ್ಟಪಡಿಸಿದರೆ, ಪಹಲ್ಗಾಮ್ ಭಯೋತ್ಪಾದಕರ ದಾಳಿಯ ಸಂದರ್ಭದಲ್ಲಾಗಿರುವ ಲೋಪದ ಹೊಣೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೊರಬೇಕು ಎಂದು ಕಾಂಗ್ರೆಸ್ ಸಂಸದರು ಒತ್ತಾಯಿಸಿದರು.

ಮೊದಲು ಮಾತನಾಡಿದ ರಾಜನಾಥ್, 'ಕದನ ವಿರಾಮ ಘೋಷಣೆಗೆ ಯಾವುದೇ ಒತ್ತಡ ಇರಲಿಲ್ಲ. ಪಾಕಿಸ್ತಾನ ದುಸ್ಸಾಹಸ ತೋರಿದರೆ ಕಾರ್ಯಾಚರಣೆ ಮತ್ತೆ ಆರಂಭವಾಗಲಿದೆ' ಎಂದು ಎಚ್ಚರಿಸಿದರು.

▶11

ಒತ್ತಡಕ್ಕೆ ಮಣಿದಿಲ್ಲ: ರಾಜನಾಥ್ ಸಿಂಗ್



- ಯಾವುದೇ ಒತ್ತಡಕ್ಕೆ ಮಣಿದು ಆಪರೇಷನ್ ಸಿಂಧೂರ ಕಾರ್ಯಾಚರಣೆ ನಿಲ್ಲಿಸಲಾಗಿದೆ ಎಂದು ಹೇಳುವುದು ಅಥವಾ ನಂಬುವುದು ಆಧಾರರಹಿತ ಮತ್ತು ಸಂಪೂರ್ಣವಾಗಿ ತಪ್ಪು.
- ಕಾರ್ಯಾಚರಣೆ ನಿಲ್ಲಿಸುವಂತೆ ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಯ ಮಹಾ ನಿರ್ದೇಶಕರು ವಿನಂತಿಸಿದರು. ಆ ಬಳಿಕವಷ್ಟೇ ಕದನ ವಿರಾಮ ಘೋಷಣೆ ಮಾಡಲಾಗಿದೆ. ಇಲ್ಲಿ ಯಾರೂ ಮಧ್ಯಸ್ಥಿಕೆ ವಹಿಸಿಲ್ಲ.

▶11

ಶರಣಾಗಿದ್ದು ಯಾರಿಗೆ: ಗೊಗೊಯ್ ವಾಗ್ದಾಳಿ



- ಕಾರ್ಯಾಚರಣೆ ಸಂದರ್ಭದಲ್ಲಿ ಇಡೀ ದೇಶ ಹಾಗೂ ವಿರೋಧ ಪಕ್ಷಗಳು ನರೇಂದ್ರ ಮೋದಿ ಅವರ ಬೆಂಬಲಕ್ಕೆ ನಿಂತಿದ್ದವು. ಪಾಕಿಸ್ತಾನ ಮಂಡಿಯೂರಲು ಸಿದ್ಧವಾಗಿದ್ದರೆ, ಏಕಾಏಕಿ ಯುದ್ಧ ನಿಲ್ಲಿಸಿದ್ದು ಏಕೆ ಹಾಗೂ ನೀವು ಶರಣಾಗಿದ್ದು ಯಾರಿಗೆ ಎಂಬುದನ್ನು ಮೋದಿ ಅವರಿಂದ ತಿಳಿದುಕೊಳ್ಳಲು ಬಯಸಿದ್ದೇವೆ.
- ರಕ್ಷಣಾ ಸಿಬ್ಬಂದಿ ಮುಖ್ಯಸ್ಥರು, 'ನಮ್ಮ ಯುದ್ಧ ವಿಮಾನಗಳು ಮೊದಲ ದಿನ ತಪ್ಪು ಮಾಡಿದವು. ನಾವು ನಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡೆವು. ದೂರದಿಂದಲೇ ಗುಂಡು ಹಾರಿಸಿದೆವು' ಎಂದು ಹೇಳಿಕೆ ನೀಡಿದರು. ಇದರ ಅರ್ಥ ಏನು? ನಾವು ಕಡಿಮೆ ದೂರದಿಂದ ಗುಂಡು ಹಾರಿಸಲು ಸಾಧ್ಯವಿಲ್ಲವೇ?

▶11

ಪಹಲ್ಗಾಮ್: ಶಂಕಿತ ಸಂಚುಕೋರನ ಹತ್ಯೆ

ಶ್ರೀನಗರ (ಪ್ರಜಾವಾಣಿ ವಾರ್ತೆ/ ಪಿಟಿಐ): ನಗರದ ಹೊರವಲಯದ ದಾಚೀಗಾಮ್‌ನಲ್ಲಿ 'ಆಪರೇಷನ್ ಮಹಾದೇವ' ಹೆಸರಿನಲ್ಲಿ ಭದ್ರತಾ ಪಡೆ ಸಿಬ್ಬಂದಿ ಸೋಮವಾರ ಕಾರ್ಯಾಚರಣೆ ನಡೆಸಿ, ಪಹಲ್ಗಾಮ್ ದಾಳಿಯ ಶಂಕಿತ ಸಂಚುಕೋರ ಸೇರಿದಂತೆ ಪಾಕಿಸ್ತಾನದ ಮೂವರು ಉಗ್ರರನ್ನು ಹೊಡೆದುರುಳಿಸಿದ್ದಾರೆ. ಮೃತ ಉಗ್ರರನ್ನು ಹಸೀಮ್ ಮೂಸಾ ಅಲಿಯಾಸ್ ಸುಲೇಮಾನ್, ಯಾಸಿರ್ ಹಾಗೂ ಅಬು ಹಮ್ಜಾ ಎಂದು ಗುರುತಿಸಲಾಗಿದೆ.



▶11

ಮೋದಿ–ಟ್ರಂಪ್ ಮಾತನಾಡಿರಲಿಲ್ಲ: ಜೈಶಂಕರ್



- ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು ಮೋದಿ ಅವರಿಗೆ ಮೇ 9ರಂದು ಕರೆ ಮಾಡಿ ಮುಂದಿನ ಕೆಲವು ಗಂಟೆಗಳಲ್ಲಿ ಪಾಕಿಸ್ತಾನವು ಭಾರಿ ದಾಳಿ ನಡೆಸಲಿದೆ ಎಂದು ಎಚ್ಚರಿಸಿದರು. ಅಂತಹ ದಾಳಿ ನಡೆದರೆ, ಅದಕ್ಕೆ ಸೂಕ್ತ ಪ್ರತಿಕ್ರಿಯೆ ನೀಡಲಾಗುವುದು ಎಂದು ಪ್ರಧಾನಿ ಮೋದಿ ಪ್ರತಿಕ್ರಿಯಿಸಿದರು. ನಮ್ಮ ಸಶಸ್ತ್ರ ಪಡೆಗಳು ಆ ದಾಳಿಯನ್ನು ವಿಫಲಗೊಳಿಸಿದವು.
- ಪಾಕಿಸ್ತಾನವು ಹೋರಾಟ ನಿಲ್ಲಿಸಲು ಸಿದ್ಧವಾಗಿದೆ ಎಂದು ಮೇ 10ರಂದು ಇತರ ದೇಶಗಳಿಂದ ಕರೆಗಳು ಬಂದವು. ಪಾಕಿಸ್ತಾನ ಕದನ ವಿರಾಮಕ್ಕೆ ಸಿದ್ಧವಾಗಿದ್ದರೆ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ ಮೂಲಕವೇ ಪ್ರಸ್ತಾವ ಬರಬೇಕು ಎಂದು ಸ್ಪಷ್ಟಪಡಿಸಿದೆವು. ಆ ಬಳಿಕ ಅವರಿಂದ ಕರೆ ಬಂತು.

▶11

ಪೊಲೀಸ್ ಅಧಿಕಾರಿಗಳ ಅಮಾನತು ವಾಪಸ್

ಬೆಂಗಳೂರು: ಪೊಲೀಸ್ ಕಮಿಷನರ್ ಬಿ.ದಯಾನಂದ ಸೇರಿ ಐವರು ಅಧಿಕಾರಿಗಳನ್ನು ಅಮಾನತುಗೊಳಿಸಿ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.

ವಿವರ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



13 ಜಾಗ ತೋರಿಸಿದ ದೂರುದಾರ

- ಪ್ರವೀಣ್ ಕುಮಾರ್ ಪಿ.ವಿ.

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತುಹಾಕಿದ್ದಾಗಿ ದಾಖಲಾಗಿರುವ ಪ್ರಕರಣದ (ಸಂಖ್ಯೆ 39/2025) ಸಾಕ್ಷಿ ದೂರುದಾರ, ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಸಮೀಪದಲ್ಲಿ 13 ಜಾಗಗಳನ್ನು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳಿಗೆ ಸೋಮವಾರ ತೋರಿಸಿದ್ದಾರೆ.

ಮುಖಕ್ಕೆ ಮುಸುಕು ಹಾಕಿದ್ದ ಸಾಕ್ಷಿ ದೂರುದಾರ ತೋರಿಸಿದ ಒಂದೊಂದೂ ಜಾಗದ ಜಿಪಿಎಸ್ ಗುರುತುಗಳನ್ನು ದಾಖಲಿಸಿಕೊಂಡ ಎಸ್‌ಐಟಿ ಅಧಿಕಾರಿಗಳು ಅಲ್ಲಿ ಕೆಂಪು ರಿಬ್ಬನ್ ಕಟ್ಟಿದರು. ಆತ ತೋರಿಸುತ್ತಾ ಹೋದ ಪ್ರತಿ ಜಾಗವನ್ನೂ ನಿರ್ದಿಷ್ಟ ಸಂಖ್ಯೆಯ ಮೂಲಕ ಗುರುತು ಮಾಡಿದರು.

ಎಸ್‌ಐಟಿ ಅಧಿಕಾರಿಗಳು, ವಿಧಿ ವಿಜ್ಞಾನ ತಜ್ಞರು (ಸೀನ್ ಆಫ್ ಕ್ರೈಂ ಅಧಿಕಾರಿಗಳು) ಹಾಗೂ ಭದ್ರತಾ ಸಿಬ್ಬಂದಿ ಸಾಕ್ಷಿ ದೂರುದಾರನ ಜೊತೆ ಸುಮಾರು ಎರಡು ಕಿ.ಮೀ ದೂರದ ಮುಂಡಾಜೆ ಮೀಸಲು ಅರಣ್ಯಕ್ಕೆ ಸೇರಿದ ಕಾಡಿನಲ್ಲಿ ಅಲೆದರು. ಎಸ್‌ಐಟಿಯ ಸಿಬ್ಬಂದಿ ಆತ ತೋರಿಸಿದ ಜಾಗಗಳ ವಿಡಿಯೊ ಚಿತ್ರೀಕರಣ ಮಾಡಿಕೊಂಡರು.

▶10

ಭದ್ರತೆಗೆ ಕಮಾಂಡೊ ಪಡೆ

ಮೃತದೇಹಗಳನ್ನು ಹೂತು ಹಾಕಲಾಗಿದೆ ಎನ್ನಲಾದ ಜಾಗವನ್ನು ತೋರಿಸಲು ಸಾಕ್ಷಿ ದೂರುದಾರರನ್ನು ಕರೆದೊಯ್ಯುವಾಗ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಗರುಡ ಪಡೆ ಹಾಗೂ ವಿಶೇಷ ಕಾರ್ಯಪಡೆಯ ತರಬೇತಾದ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಭದ್ರತೆಗಾಗಿ ಬಳಸಲಾಗಿತ್ತು. ಸಾಕ್ಷಿ ದೂರುದಾರನನ್ನು ಕಾಡಿನ ಒಳಗೆ ಕರೆದೊಯ್ಯುವಾಗ ಮಾಧ್ಯಮದವರಿಗೆ ಪ್ರವೇಶ ನಿರ್ಬಂಧಿಸಲಾಯಿತು. ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಒಂದು ತುಕಡಿಯನ್ನು ಭದ್ರತೆಗಾಗಿ ಸ್ಥಳದಲ್ಲಿ ನಿಯೋಜಿಸಲಾಗಿತ್ತು. ಸ್ನಾನಘಟ್ಟದ ಬಳಿ ಇದ್ದ ಸಾರ್ವಜನಿಕರನ್ನು ಪೊಲೀಸರು ಆಚೆಗೆ ಕಳುಹಿಸಿದರು. ಶವಗಳನ್ನು ಹೂಳಲಾಗಿದೆ ಎನ್ನಲಾದ ಜಾಗದತ್ತ ಸಾರ್ವಜನಿಕರು ಹೋಗುವುದನ್ನು ತಡೆಯಲು ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಅನುಮತಿ ಪಡೆದು ಅಗೆತ: ಸಂಬಂಧಿತ ಅನುಮತಿ ಪಡೆದು ಈ ಸ್ಥಳಗಳನ್ನು ಅಗೆಯುವ ಕೆಲಸವನ್ನು ಎಸ್‌ಐಟಿ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

11 ಕೆರೆಗಷ್ಟೇ 30 ಮೀಟರ್ ಬಫರ್ ಝೋನ್!

ಬಿಬಿಎಂಪಿ ವ್ಯಾಪ್ತಿಯಲ್ಲಿ 172 ಜಲಮೂಲಗಳ 'ಸಂರಕ್ಷಿತ ಪ್ರದೇಶ' ಕಡಿತ

● ಆರ್. ಮಂಜುನಾಥ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತಿಹೆಚ್ಚು ಒತ್ತುವರಿ ಆಗಿರುವ ಕೆರೆಗಳ ಪೈಕಿ, 11 ಕೆರೆಗಳು ಮಾತ್ರ 30 ಮೀಟರ್ 'ಸಂರಕ್ಷಿತ ಪ್ರದೇಶ'ವನ್ನು (ಬಫರ್ ಝೋನ್) ಉಳಿಸಿಕೊಳ್ಳುವ ಸಾಧ್ಯತೆ ಇದೆ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ-2024ರ (ಕೆಟಿಸಿಡಿಎ) ಅಡಿ ಇರುವ 'ಎಲ್ಲ ಕೆರೆಗಳಿಗೆ 30 ಮೀಟರ್ ಬಫರ್ ಝೋನ್' ಎಂಬ ನಿಯಮಕ್ಕೆ ತಿದ್ದುಪಡಿ ತಂದು, ಕೆರೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ 'ಸಂರಕ್ಷಿತ ಪ್ರದೇಶ'ವನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಪ್ರಸ್ತಾವನೆ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ 172 ಕೆರೆಗಳ ಬಫರ್ ಝೋನ್ 30 ಮೀಟರ್‌ಗಿಂತ ಕಡಿಮೆಯಾಗಲಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 11 ಕೆರೆಗಳು ಮಾತ್ರ 100 ಎಕರೆಗಿಂತ ಹೆಚ್ಚು ವಿಸ್ತೀರ್ಣವನ್ನು ದಾಖಲೆಯಲ್ಲಿ ಹೊಂದಿವೆ. ಈ ಕೆರೆಗಳ ಸುತ್ತಲೂ 30 ಮೀಟರ್ 'ಸಂರಕ್ಷಿತ ಪ್ರದೇಶ' ಉಳಿಯಲಿದೆ. ಉಳಿದ ಕೆರೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಬಫರ್ ಝೋನ್ 6 ಮೀಟರ್‌ವರೆಗೂ ಕಡಿತವಾಗಲಿದೆ.

ಸುಪ್ರೀಂ ಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ), ಹೈಕೋರ್ಟ್ ಹಲವು ಬಾರಿ ಆದೇಶ ನೀಡಿದ್ದರೂ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಿ, ಕಂದಾಯ ಇಲಾಖೆ, ಬಿಬಿಎಂಪಿ, ಬಿಡಿಎ ತೆರವು ಮಾಡಿಲ್ಲ. ಬಫರ್ ಝೋನ್ ಅಂತೂ ಇಲ್ಲವೇ ಇಲ್ಲ ಎನ್ನುವಂತಾಗಿದೆ. ಈ ಸಂದರ್ಭದಲ್ಲೇ 'ಸಂರಕ್ಷಿತ ವಲಯ'ವನ್ನು ಕಡಿಮೆ ಮಾಡುವ ಸರ್ಕಾರದ ತೀರ್ಮಾನಕ್ಕೆ ನಾಗರಿಕರ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಬಿಬಿಎಂಪಿ ದಾಖಲೆಯಲ್ಲಿರುವ 202 ಕೆರೆಗಳಲ್ಲಿ 851 ಎಕರೆಗೂ ಹೆಚ್ಚು ಒತ್ತುವರಿಯಾಗಿದೆ. ಇದರಲ್ಲಿ ಬಿಡಿಎ, ನೈಸ್, ಕೊಳೆಗೇರಿ ಅಭಿವೃದ್ಧಿ ಮಂಡಳಿ, ಸರ್ಕಾರಿ-ಬಿಬಿಎಂಪಿ ಶಾಲೆ, ಉದ್ಯಾನ, ಕೇಂದ್ರ ಕಾರಾಗೃಹ, ಸ್ಮಶಾನ, ಕರ್ನಾಟಕ ಗೃಹ ಮಂಡಳಿ ಕ್ವಾಟ್ರಸ್, ಮಿಲಿಟರಿ, ರೈಲ್ವೆ ಇಲಾಖೆ, ಕೆಐಎಡಿಬಿ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಟಿಸಿ, ಪೊಲೀಸ್ ಠಾಣೆ, ತಹಶೀಲ್ದಾರ್ ಕಚೇರಿಗಳೂ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿವೆ. ಬೆಂಗಳೂರಿನಲ್ಲಿ 10 ವರ್ಷಗಳಿಂದ ಈಚೆಗೆ ಅಭಿವೃದ್ಧಿಗೊಂಡಿರುವ ಕೆರೆಗಳೂ ಒತ್ತುವರಿಯಾಗಿವೆ. ಗೋವು ಆಶ್ರಮ, ಕೃಷಿ, ಸೈಕಲ್ ಶಾಪ್, ಪೆಟ್ರೋಲ್ ಬಂಕ್, ರಸ್ತೆ... ಹೀಗೆ ಹಲವು ರೀತಿಯಲ್ಲಿ ಅಷ್ಟೇ ಅಲ್ಲದೆ, ಖಾಸಗಿ ವ್ಯಕ್ತಿಗಳ ಹೆಸರಿನಲ್ಲೂ ಒತ್ತುವರಿ ಆಗಿರುವ ಪ್ರಮಾಣವನ್ನು ಬಿಬಿಎಂಪಿ ದಾಖಲು ಮಾಡಿದೆ. ಆದರೆ, ಇದನ್ನು ಹಲವು ವರ್ಷಗಳಿಂದ ತೆರವು ಮಾಡಿಲ್ಲ.

'ಕೆರೆಗಳ ಅಂಗಳದ ಒತ್ತುವರಿ ತೆರವು ಮಾಡದೆ, ನ್ಯಾಯಾಲಯಗಳು ನಿಗದಿಪಡಿಸಿದ್ದ ಬಫರ್ ಝೋನ್ ವ್ಯಾಪ್ತಿಯನ್ನೂ ಕಡಿಮೆ ಮಾಡಿ ಪರಿಸರಕ್ಕೆ ಧಕ್ಕೆಯಾಗುವಂತಹ ಕೆಲಸ ಮಾಡಲಾಗುತ್ತಿದೆ. ಕೆರೆಗಳು ಕಲುಷಿತಗೊಳ್ಳಲು ಇನ್ನಷ್ಟು ಅವಕಾಶ ಮಾಡಿಕೊಟ್ಟಂತಾಗಿದೆ' ಎಂದು ಪರಿಸರ ಕಾರ್ಯಕರ್ತರು ದೂರಿದರು.

ಬಿಬಿಎಂಪಿ ಕೆರೆಗಳಲ್ಲಿ ಉಳಿಯುವ ಪ್ರಸ್ತಾವಿತ ಬಫರ್ ಝೋನ್

ಕೆರೆಗಳ ಸಂಖ್ಯೆ	ವಿಸ್ತೀರ್ಣ	ಬಫರ್ ಝೋನ್
11	100 ಎಕರೆಗಿಂತ ಹೆಚ್ಚು	30 ಮೀಟರ್
61	25 ಎಕರೆಯಿಂದ 100 ಎಕರೆ	24 ಮೀಟರ್
80	10 ಎಕರೆಯಿಂದ 25 ಎಕರೆ	12 ಮೀಟರ್
50	1 ಎಕರೆಯಿಂದ 10 ಎಕರೆ	6 ಮೀಟರ್

202 ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆಗಳು

19 ನಶಿಸಿಹೋಗಿರುವ ಕೆರೆಗಳು | **183** ಅಸ್ತಿತ್ವದಲ್ಲಿ ಇರುವ ಕೆರೆಗಳು | **29** ಕೆರೆಗಳಲ್ಲಿ ಬಿಡಿಎ ಸೇರಿದಂತೆ ಸರ್ಕಾರಿ ಇಲಾಖೆಗಳ ಒತ್ತುವರಿ | **92** ಕೆರೆಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಒತ್ತುವರಿ

17 ಕೆರೆಗಳಲ್ಲಿ ಖಾಸಗಿ ಒತ್ತುವರಿ | **17** ಕೆರೆಗಳಲ್ಲಿ ಒತ್ತುವರಿ ಸರ್ವೆಯಾಗಬೇಕಿದೆ | **28** ಕೆರೆ ಒತ್ತುವರಿಯಿಂದ ಮುಕ್ತ

837 ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳು

28,264 ಎಕರೆ ಒಟ್ಟು ವಿಸ್ತೀರ್ಣ | **4,551** ಎಕರೆ ಒತ್ತುವರಿಯಾಗಿರುವ ವಿಸ್ತೀರ್ಣ | **2,145** ಎಕರೆ ತೆರವಾಗಿರುವ ಪ್ರದೇಶ



ಅಭಿವೃದ್ಧಿ ಪಥದಲ್ಲಿರುವ ಕಗ್ಗದಾಸಪುರ ಕೆರೆ



ಬೆಲೆ ಕಟ್ಟಲಾಗದ ಜಲಮೂಲಗಳನ್ನು ಸೃಷ್ಟಿಸಲು ಸಾಧ್ಯವಿಲ್ಲದಂತಹ ಸಂದರ್ಭದಲ್ಲಿಯೂ ಭೂ ಮಾಫಿಯಾಗೆ ಮಣೆ ಹಾಕಿ ಬಫರ್ ಝೋನ್ ಕಡಿತಗೊಳಿಸುತ್ತಿರುವುದು ಸರಿಯಲ್ಲ.
ಎಚ್.ಕೆ. ಗೌಡಯ್ಯ, ಪರಿಸರ ಕಾರ್ಯಕರ್ತ



ಬಫರ್ ಝೋನ್ ಕಡಿಮೆ ಮಾಡುವುದರಿಂದ ಕೆರೆಗಳನ್ನು ಸಂರಕ್ಷಿಸುತ್ತಿರುವ ಮಾನವ ಪ್ರಯತ್ನಗಳನ್ನು ನಿರ್ಲಕ್ಷಿಸಿದಂತಾಗುತ್ತದೆ. ಇದರಿಂದ ದೀರ್ಘಕಾಲದಲ್ಲಿ ತೀವ್ರ ದುಷ್ಪರಿಣಾಮ ಎದುರಿಸಬೇಕಾಗುತ್ತದೆ.
ಮಾಧುರಿ ಸುಬ್ಬರಾವ್, ಫ್ರೆಂಡ್ಸ್ ಆಫ್ ಲೇಕ್ಸ್‌ನ ಸಹ-ಸಂಸ್ಥಾಪಕಿ

ತುರ್ತು ನಿರ್ವಹಣಾ ಕಾಮಗಾರಿ: ನಾಳೆ ನಗರದ ಹಲವೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ 220/66/11ಕೆವಿ ವಿದ್ಯುತ್ ಉಪಕೇಂದ್ರದ ವ್ಯಾಪ್ತಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಕಾರಣ, ಬುಧವಾರ ಬೆಳಿಗ್ಗೆ 11 ರಿಂದ ಸಂಜೆ 5 ಗಂಟೆವರೆಗೆ ಈ ಕೆಳಗೆ ಸೂಚಿಸಿರುವ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಗಂಗಾನಗರ, ಲಕ್ಷ್ಮಯ್ಯ ಬ್ಲಾಕ್, ವೀವರ್ ಕಾಲೊನಿ, ಸಿ.ಬಿ.ಐ ಕ್ವಾಟ್ರಸ್, ಆರ್.ಬಿ.ಐ ಕಾಲೊನಿ, ಸಿ.ಪಿ.ಡಬ್ಲ್ಯೂ ಬ್ಲಾಕ್, ಡಿ.ಜಿ. ಕ್ಯೂ ಕ್ವಾಟ್ರಸ್, ಮುನಿರಾಮಯ್ಯ ಬ್ಲಾಕ್, ಯುಎಎಸ್ ಕ್ಯಾಂಪಸ್, ದಿನ್ನೂರು ಮುಖ್ಯ ರಸ್ತೆ, ಆರ್.ಟಿ. ನಗರ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಮಾನಸ ಕಾಲೊನಿ, ಎಚ್.ಎಂ.ಟಿ. ಲೇಔಟ್, ಚಾಮುಂಡಿ ನಗರ, ಮಾಜಿ ಸೈನಿಕರ ಕಾಲೊನಿ, ಆರ್.ಟಿ. ನಗರ ಪೊಲೀಸ್ ಠಾಣೆ ಪ್ರದೇಶ ಸುತ್ತಮುತ್ತಲಿನ ಪ್ರದೇಶ.

ನ್ಯೂತನ್ ಬಡಾವಣೆ, ಕೃಷ್ಣಪ್ಪ ಬ್ಲಾಕ್, ಸಿಬಿಐ ಮುಖ್ಯರಸ್ತೆ, ಎಂಎಲ್‌ಎ ಲೇಔಟ್‌ನ ಭಾಗಗಳು, ಶಾಂತಿಸಾಗರ ಮುಖ್ಯ ರಸ್ತೆ, ಆರ್.ಟಿ.ನಗರ, ವೇಣುಗೋಪಾಲ ಲೇಔಟ್, ಜಡ್ಜಸ್ ಕಾಲೊನಿ, 80ಅಡಿ ರಸ್ತೆ, ವಿಶ್ವೇಶ್ವರಯ್ಯ ಬ್ಲಾಕ್, ಮತ್ತುಲಿ ರಸ್ತೆ, ನೇತಾಜಿ ನಗರ, ಸರ್ಲಿಂಗ್ ಗಾರ್ಡನ್ ಲೇಔಟ್, ಐ.ಎ.ಆರ್.ಐ, ಗಂಗಾನಗರ ಮಾರುಕಟ್ಟೆ, ಬ್ರಿಜ್ ಅಪಾರ್ಟ್‌ಮೆಂಟ್ ಸುತ್ತಲಿನ ಪ್ರದೇಶ.

ಚೋಳನಾಯಕನಹಳ್ಳಿ, ಎಜಿಎಸ್ ಕಾಲೊನಿ, ಎಸ್‌ಬಿಎಂ ಕಾಲೊನಿ, ವಿನಾಯಕ ಲೇಔಟ್, ಆನಂದಗಿರಿ ಎಕ್ಸ್‌ಟೆನ್ಷನ್, ಪೊಲೀಸ್ ಕ್ವಾಟ್ರಸ್, ಹೆಬ್ಬಾಳ ಎಸ್.ಎಸ್. ಬ್ಲಾಕ್, ಕೆಂಪಣ್ಣ ಲೇಔಟ್, ಗುಡ್ಡದಹಳ್ಳಿ ರಸ್ತೆ, ಸುಲ್ತಾನ್ ಕಾಲೊನಿ, ಕುಂಟಿಗ್ರಾಮ, ಕೆಂಪಿ ಲೇಔಟ್ ಸುತ್ತಮುತ್ತಲಿನ ಪ್ರದೇಶ.

ಸಂಜಯನಗರ, ಗೆದ್ದಲಹಳ್ಳಿ, ಅಶ್ವತ್ಥನಗರ, ಭೂಪಸಂದ್ರ ಸುತ್ತಮುತ್ತ, ವಿಐಎಸ್‌ಎಲ್ ವೈಟ್ ಹೌಸ್, ದಿನ್ನೂರು ರಸ್ತೆಯ ಭಾಗಗಳು, ಚೋಳನಗರ, ಎಂ.ಎಸ್.ಎಲ್ ಲೇಔಟ್, ಶ್ರೀಮತಿ ಲೇಔಟ್, ಅಮರಜ್ಯೋತಿ ಲೇಔಟ್, ಸೀತಪ್ಪ ಲೇಔಟ್, ಗುಡ್ಡದಹಳ್ಳಿ ವೃತ್ತ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜಯಮಹಲ್ ವಿಸ್ತರಣೆ, ನಂದಿದುರ್ಗ ರಸ್ತೆ, ದೂರದರ್ಶನ ಕೇಂದ್ರ, ಜಯಮಹಲ್ ರಸ್ತೆ, ಮುನಿರೆಡ್ಡಿ ಪಾಳ್ಯ, ಜೆ.ಸಿ.ನಗರ, ಮಾರಪ್ಪ ಗಾರ್ಡನ್, ಚಿನ್ನಪ್ಪ ಗಾರ್ಡನ್ ಸುತ್ತಮುತ್ತಲಿನ ಪ್ರದೇಶಗಳು.

ಲುಲು ಮಾಲ್: ಕಾರ್ಗಿಲ್ ಯುದ್ಧ ವೀರರಿಗೆ ಗೌರವ ಸಲ್ಲಿಕೆ

ಬೆಂಗಳೂರು: ಕಾರ್ಗಿಲ್ ಯುದ್ಧದಲ್ಲಿ ಭಾರತದ ಸಶಸ್ತ್ರ ಪಡೆಗಳು ತೋರಿದ ಶೌರ್ಯ, ಸಾಹಸದ ಸ್ಮರಣೆಗಾಗಿ ನಗರದ ಪ್ರಸಿದ್ಧ ಲುಲು ಮಾಲ್ 'ಕಾರ್ಗಿಲ್ ವಿಜಯ್ ದಿವಸ್', ಕಾರ್ಗಿಲ್ ಯುದ್ಧ ವೀರರಿಗೆ ಗೌರವ ಅರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಜು.26 ಮತ್ತು 27 ರಂದು ನಡೆದ ರೋಮಾಂಚನಕಾರಿ ಗೌರವ ಸಲ್ಲಿಕೆ ಕಾರ್ಯಕ್ರಮದಲ್ಲಿ 1999ರ ಕಾರ್ಗಿಲ್ ಯುದ್ಧದಲ್ಲಿ ನಾಯಕತ್ವ ವಹಿಸಿದ್ದ 17 ಗರ್ವಾಲ್ ರೈಫಲ್ಸ್‌ನ ಕರ್ನಲ್ ಪಿ. ರಾಜನಾರಾಯಣ್ ಅವರನ್ನು ಸನ್ಮಾನಿಸಲಾಯಿತು. ಲುಲು ಮಾಲ್ ನಾರ್ತ್ ಆಟ್ರಿಯಮ್‌ನಲ್ಲಿ ನಡೆದ ಈ ವಿಶೇಷ ಸಮಾರಂಭದಲ್ಲಿ ನಾಗರಿಕರು, ಮಾಜಿ ಸೈನಿಕರು ಮತ್ತು ಕುಟುಂಬಗಳು ಪಾಲ್ಗೊಂಡು ಭಾರತೀಯ ಸೈನಿಕರ ಅದಮ್ಯ ಚೇತನವನ್ನು ಸಂಭ್ರಮಿಸಿದರು.

ಯುದ್ಧದ ವೀರರಿಗೆ ಗೌರವ ಸಲ್ಲಿಸುವ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮ ಹೃದಯಸ್ಪರ್ಶಿ ವೇದಿಕೆಯಾಗಿ ಮಾರ್ಪಟ್ಟಿತು. ಧೈರ್ಯ, ಶಿಸ್ತು ಮತ್ತು ಶೌರ್ಯದ ಆಚರಣೆಯಾಗಿದ್ದ ಈ ಸಂದರ್ಭ ಜನಸಮೂಹವನ್ನು ಸೆಳೆದಿದ್ದಲ್ಲದೆ, ಸಶಸ್ತ್ರ ಸೇನಾ ಪಡೆಯ ವಿಜಯ ಮತ್ತು ತ್ಯಾಗವನ್ನು ಸ್ಮರಣೀಯವಾಗಿಸಿತು.

ಕರ್ನಲ್ ಪಿ. ರಾಜನಾರಾಯಣ್ ಅವರು ಮಾತನಾಡಿ, ಆಪರೇಷನ್ ವಿಜಯ್ ಸಮಯದಲ್ಲಿ ಅವರು ವಹಿಸಿದ್ದ ನಾಯಕತ್ವ ಇತಿಹಾಸದಲ್ಲಿ ಅಳಿಸಲಾಗದ ಛಾಪು. ಕಾರ್ಗಿಲ್ ಯುದ್ಧದ ಸಮಯದಲ್ಲಿ ಎದುರಿಸಿದ ಸವಾಲುಗಳ ಬಗ್ಗೆ, ಶತ್ರುಗಳ ತೀವ್ರತರ ಗುಂಡಿನ ದಾಳಿ, ಸ್ನೈಪರ್ ದಾಳಿಗಳು, ಭದ್ರಪಡಿಸಲಾದ ಸ್ಥಾನಗಳು, ಪ್ರತಿಕೂಲ ಹವಾಮಾನ ಮತ್ತು ಇತರ ಹಲವಾರು ಸಂಗತಿಗಳನ್ನು ವಿವರಿಸಿದರು. ಜುಲೈ 7, 1999 ರಂದು ಭಾರತೀಯ ತ್ರಿವರ್ಣ ಧ್ವಜದ ಹಾರಾಟದ ಐತಿಹಾಸಿಕ ಕ್ಷಣವನ್ನು ನೆನಪಿಸಿಕೊಂಡರು.

ಲುಲು ಮಾಲ್ ಬೆಂಗಳೂರಿನ ಪ್ರಾದೇಶಿಕ ನಿರ್ದೇಶಕ ಶೆರೀಫ್ ಕೆ.ಕೆ. "ಕರ್ನಲ್ ಪಿ ರಾಜನಾರಾಯಣ್ ಅವರಂತಹ ನಾಯಕರೊಂದಿಗೆ ಈ ಕಾರ್ಯಕ್ರಮ ಆಯೋಜಿಸಿರುವುದು ನಮಗೆ ಸೌಭಾಗ್ಯ ಸಿಕ್ಕಂತಾಗಿದೆ. ಈ ಸ್ಮರಣಾರ್ಥ ದಿನ ಮತ್ತು ದೇಶಭಕ್ತಿಯ ಹೆಮ್ಮೆಯ ಮನೋಭಾವದ ಆಚರಣೆಯಾಗಿ ದೀರ್ಘಕಾಲ ನೆನಪಿನಲ್ಲಿ ಉಳಿಯಲಿದೆ. ಇನ್ನೂ ಎರಡು ತಿಂಗಳ ಕಾಲ ರಾಜಾಜಿನಗರದ ಲುಲು ಮಾಲ್‌ನಲ್ಲಿ ಈ ಪ್ರದರ್ಶನವು ಸಾರ್ವಜನಿಕರಿಗೆ ತೆರೆದಿರುತ್ತದೆ ಎಂದು ಹೇಳಿದರು.



ಲುಲು ಮಾಲ್ ಆಯೋಜಿಸಿದ್ದ 'ಕಾರ್ಗಿಲ್ ವಿಜಯ್ ದಿವಸ್' ಗೌರವ ಅರ್ಪಣೆ ಕಾರ್ಯಕ್ರಮದಲ್ಲಿ 17 ಗರ್ವಾಲ್ ರೈಫಲ್ಸ್‌ನ ಕರ್ನಲ್ ಪಿ. ರಾಜನಾರಾಯಣ್‌ಗೆ ಭಾಗವಹಿಸಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

₹800 ಕೋಟಿ ಆಸ್ತಿ ತೆರಿಗೆ ಪಾವತಿಸದ ಸುಸ್ತಿದಾರರು

ಆಸ್ತಿ ತೆರಿಗೆ: 3.75 ಲಕ್ಷ ಮಂದಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು ₹800 ಕೋಟಿ ಆಸ್ತಿ ತೆರಿಗೆ ಪಾವತಿಸದ 3.75 ಲಕ್ಷ ಸುಸ್ತಿದಾರರಿಗೆ ನೋಟಿಸ್ ಜಾರಿ ಮಾಡಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಅಧಿಕಾರಿಗಳ ಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಆಸ್ತಿ ತೆರಿಗೆ ಸಂಗ್ರಹಿಸಲು ಹೆಚ್ಚು ಆದ್ಯತೆ ನೀಡಬೇಕು. ಇನ್ನೂ ಪರಿಣಾಮಕಾರಿಯಾಗಿ ಸಂಗ್ರಹವಾಗಬೇಕು. ಎಸ್‌ಎಂಎಸ್ ಹಾಗೂ ಇ-ಮೇಲ್ ಮೂಲಕ ನೋಟೀಸ್ ಜಾರಿ ಮಾಡಬೇಕು' ಎಂದು ಸೂಚಿಸಿದರು.

ಹೊಸ ಖಾತಾ ನೀಡುವಂತೆ ಕೋರಿ 50 ಸಾವಿರಕ್ಕೂ ಹೆಚ್ಚು ಅರ್ಜಿಗಳು ಪಾಲಿಕೆಗೆ ಸಲ್ಲಿಕೆಯಾಗಿವೆ. ಅವುಗಳನ್ನು ಆದ್ಯತೆ ಮೇರೆಗೆ ಅನುಮೋದಿಸಬೇಕು. ಇದರಿಂದ ಪಾಲಿಕೆಗೆ ಹೆಚ್ಚು ಆಸ್ತಿ ತೆರಿಗೆ ಸಂಗ್ರಹವಾಗಲಿದೆ ಎಂದರು.

ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿ ಆದ್ಯತೆಯ ಮೇಲೆ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ವಾರ್ಡ್ ರಸ್ತೆಗಳಲ್ಲಿಯೂ ತ್ವರಿತವಾಗಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದರು.



ಮಹೇಶ್ವರ್ ರಾವ್

ಡೆಂಗಿ ಪ್ರಕರಣ: ನಗರದಲ್ಲಿ ಒಂದು ವಾರದಲ್ಲಿ 69 ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಜುಲೈನಲ್ಲಿ 442 ಪ್ರಕರಣಗಳು, 2025ರ ಜನವರಿಯಿಂದ ಇಲ್ಲಿಯವರೆಗೆ 1,685 ಪ್ರಕರಣಗಳು ಪತ್ತೆಯಾಗಿವೆ. ಲಾರ್ವಾ ಉತ್ಪತ್ತಿ ಆಗುವ ತಾಣಗಳನ್ನು ಗುರುತಿಸಿ ಔಷಧಿ ಸಿಂಪಡಣೆ ಮಾಡಿ ಡೆಂಗಿ ನಿರ್ಮೂಲನೆ ಮಾಡಬೇಕು ಎಂದು ಮಹೇಶ್ವರ್ ರಾವ್ ಸೂಚಿಸಿದರು.

ಸೊಳ್ಳೆಗಳನ್ನು ನಿಯಂತ್ರಿಸಲು ಮನೆಗಳಲ್ಲಿ ಓವಿ ಟ್ರ್ಯಾಪ್‌ಗಳನ್ನು ಅಳವಡಿಸಿಕೊಳ್ಳಲು ಜನರಲ್ಲಿ ಜಾಗೃತಿ ಮೂಡಿಸಬೇಕು. ಹೆಚ್ಚು ಪ್ರಕರಣಗಳು ಕಂಡುಬರುವ ಕಡೆ ಸಮೀಕ್ಷೆ ನಡೆಸಿ ಸೊಳ್ಳೆಗಳ ನಿರ್ಮೂಲನೆ ಮಾಡಬೇಕು. ನಿರಂತರವಾಗಿ ಫಾಗಿಂಗ್ ಔಷಧ ಸಿಂಪಡಣೆ ನಡೆಸಬೇಕು ಎಂದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕರೀಗೌಡ, ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಪ್ರೀತಿ ಗೆಹ್ಲೋಟ್ ಉಪಸ್ಥಿತರಿದ್ದರು.

'ಎಲ್ಲರಿಗೂ ಎ ಖಾತಾ: ಲಂಚ ನೀಡಬೇಡಿ'

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ನಿವೇಶನಗಳಿಗೆ ಎ ಖಾತಾ ನೀಡುವ ಪ್ರಕ್ರಿಯೆಯನ್ನು 15 ದಿನದಲ್ಲಿ ಆನ್‌ಲೈನ್‌ನಲ್ಲೇ ಆರಂಭಿಸಲಾಗುವುದು. ಬಿಬಿಎಂಪಿ ಕಚೇರಿಗೆ ಹೋಗಬೇಡಿ, ಯಾರಿಗೂ ಲಂಚ ನೀಡಬೇಡಿ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಮನವಿ ಮಾಡಿದ್ದಾರೆ.

'ಸರ್ಕಾರದ ಆದೇಶದ ಪ್ರಕಾರ, ನಾಗರಿಕರು ಎ-ಖಾತಾಗೆ ಅರ್ಜಿ ಸಲ್ಲಿಸಲು ಮತ್ತು ಖಾತಾ ಪಡೆದುಕೊಳ್ಳಲು ಆನ್‌ಲೈನ್ ವ್ಯವಸ್ಥೆ ಆರಂಭಿಸಲಾಗುತ್ತದೆ. ಅದು ಜಾರಿಯಾದ ನಂತರ ನಾಗರಿಕರು ಅರ್ಜಿ ಸಲ್ಲಿಸಬಹುದು. ಬಿ-ಖಾತಾವನ್ನು ಎ-ಖಾತಾಕ್ಕೆ ಪರಿವರ್ತನೆ ಮಾಡುವುದು ಅಥವಾ ಈಗ ಯಾವುದೇ ಖಾತಾ ಇಲ್ಲದಿದ್ದರೆ ಹೊಸ ಎ-ಖಾತಾ ಕೋರಿ ಅರ್ಜಿ ಸಲ್ಲಿಸಬಹುದು. ಅದಕ್ಕಾಗಿ ಸಂಪೂರ್ಣ ಮಾಹಿತಿ ನೀಡಲಾಗುತ್ತದೆ' ಎಂದು ಹೇಳಿದರು.

ಯುವ ರಂಗೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಫೋನ್ ಬಳಕೆ, ಸಾಮಾಜಿಕ ಜಾಲತಾಣಗಳಿಂದಾಗಿ ಮಕ್ಕಳಲ್ಲಿ ಸೃಜನಶೀಲತೆ ಕಡಿಮೆ ಆಗುತ್ತಿದೆ ಎಂದು ಪಟೇಲ್ ಗುಳ್ಳಪ್ಪ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಬಿ.ಎಂ.ಪಟೇಲ್ ಪಾಂಡು ತಿಳಿಸಿದರು.

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಪಟೇಲ್ ಗುಳ್ಳಪ್ಪ ಶೈಕ್ಷಣಿಕ ಸಂಸ್ಥೆ ಆಯೋಜಿಸಿದ್ದ ಎರಡು ದಿನಗಳ ಯುವ ರಂಗೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಕ್ಕಳಿಗೆ ಕಲೆಗಳ ಬಗ್ಗೆ ಪರಿಚಯ ಮಾಡಿಸುವುದು ಪೋಷಕರು ಹಾಗೂ ಶಿಕ್ಷಕರ ಜವಾಬ್ದಾರಿಯಾಗಿದೆ. ನಾಟಕದಲ್ಲಿ ಅಭಿನಯಿಸುತ್ತಿರುವ ವಿದ್ಯಾರ್ಥಿಗಳು ರಾಜಸ್ಥಾನ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ಬೇರೆ ರಾಜ್ಯದ ಮಕ್ಕಳು ಇದ್ದು, ನಾಟಕದ ತಾಲೀಮಿನಿಂದಾಗಿ ಕನ್ನಡ ಭಾಷೆ ಹಾಗೂ ಉಚ್ಚಾರಣೆಯಲ್ಲಿ ಉತ್ತಮ ಬದಲಾವಣೆ ಕಂಡು ಬಂದಿದೆ ಎಂದರು.

ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಕೆ.ರಾಮಕೃಷ್ಣಯ್ಯ, ಪ್ರದರ್ಶನ ಕಲಾ ವಿಭಾಗದ ಮುಖ್ಯಸ್ಥೆ ಪ್ರೊ. ಹಂಸಿನಿ ನಾಗೇಂದ್ರ, ಸಹಾಯಕ ಪ್ರಾಧ್ಯಾಪಕ ಎಸ್.ಶಿವಣ್ಣ, ಪಟೇಲ್ ಗುಳ್ಳಪ್ಪ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಕೆ.ಬಿ. ಚಿಕ್ಕಮ್ಮ, ಅಕಾಡೆಮಿಯ ಸದಸ್ಯರಾದ ರವೀಂದ್ರನಾಥ್ ಸಿರಿವರ, ಎ.ಎಸ್. ಚಂದ್ರಶೇಖರ್, ಗೀತಾಸಿದ್ಧಿ ಹಾಜರಿದ್ದರು. ರವೀಂದ್ರ ಸೊರಗಾಂವಿ ಅವರು ರಂಗಗೀತೆಗಳನ್ನು ಹಾಡಿದರು.

ಚಿಟಿಕೆ ಸುದ್ದಿ

ಬಿ–ಸ್ಮೈಲ್: ‘ಪ್ರಚಾರ ಸಿನಿಮಾ’ಗೆ ₹83 ಲಕ್ಷ

ಬೆಂಗಳೂರು: ನಗರದಲ್ಲಿ ಕೈಗೊಳ್ಳಲಿರುವ ಮೆಗಾ ಮತ್ತು ದೀರ್ಘಕಾಲದ ಯೋಜನೆಗಳ ಕುರಿತು ತಯಾರಿಸುವ ‘ಪ್ರಚಾರ ಸಿನಿಮಾ’ ನಿರ್ಮಾಣಕ್ಕೆ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಟ್ (ಬಿ–ಸ್ಮೈಲ್) ₹83 ಲಕ್ಷ ವೆಚ್ಚ ಮಾಡಲು ನಿರ್ಧರಿಸಿದೆ.



ಸಿನಿ ಕ್ಯಾಮೆರಾಗಳನ್ನು ಬಳಸಿ ಕಂಪ್ಯೂಟರ್ ಗ್ರಾಫಿಕ್ಸ್ ನೊಂದಿಗೆ ಪ್ರೀ– ಪ್ರೊಡಕ್ಷನ್ ಹಾಗೂ ಪೋಸ್ಟ್– ಪ್ರೊಡಕ್ಷನ್, ವಿಎಫ್‌ಎಕ್ಸ್, ಸಿಜಿಐ ಕಾರ್ಯಗಳೊಂದಿಗೆ ಮೆಗಾ ಯೋಜನೆಗಳ ಆರು ನಿಮಿಷದ ‘ಪ್ರಚಾರ ಸಿನಿಮಾ’ ತಯಾರಿಸಿಕೊಡಲು ಟೆಂಡರ್ ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಆಗಸ್ಟ್ 8ರಂದು ಅಂತಿಮ ದಿನವಾಗಿದ್ದು, ಕಾರ್ಯಾದೇಶ ನೀಡಿದ ನಂತರದ ಎರಡು ತಿಂಗಳಲ್ಲಿ ‘ಪ್ರಚಾರ ಸಿನಿಮಾ’ ನಿರ್ಮಿಸಿಕೊಡಬೇಕು ಎಂದು ಟೆಂಡರ್‌ನಲ್ಲಿ ತಿಳಿಸಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು (ಯುವಿಸಿಇ) 2025–26ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ವಿವಿಧ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದೆ.



ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ ಅತಿಥಿ ಉಪನ್ಯಾಸಕರ ಹುದ್ದೆಗೆ ಆಸಕ್ತರು ಆಗಸ್ಟ್ 2ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ https://uvce.karnataka.gov.in/en ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕುಲಸಚಿವರು, ಯುವಿಸಿಇ, ಕೆ.ಆರ್ ವೃತ್ತ, ಬೆಂಗಳೂರು–560 001.

ಎಂ.ಟೆಕ್‌ಗೆ ಪ್ರವೇಶ

ಬೆಂಗಳೂರು: ಬೆಂಗಳೂರು ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಂ.ಟೆಕ್ ಇನ್ ಟೂಲ್ ಎಂಜಿನಿಯರಿಂಗ್ ಕೋರ್ಸಿಗೆ ಅರ್ಜಿ ಆಹ್ವಾನಿಸಲಾಗಿದೆ.




ಬಿಇ ಮೆಕ್ಯಾನಿಕಲ್ ಎಂಜಿನಿಯರಿಂಗ್, ಆಟೊ ಮೊಬೈಲ್ ಎಂಜಿನಿಯರಿಂಗ್, ಆಟೊಮ್ಯಾಟಿಕ್ ಆ್ಯಂಡ್ ರೊಬೋಟಿಕ್ಸ್ ಎಂಜಿನಿಯರಿಂಗ್, ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್ ಎಂಜಿನಿಯರಿಂಗ್, ಟೂಲ್ ಎಂಜಿನಿಯರಿಂಗ್‌ನಲ್ಲಿ ತೇರ್ಗಡೆಯಾದ ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ವಿಳಾಸ: ಪ್ರಾಂಶುಪಾಲರು ಪಿಜಿ, ಪಿಡಿ ಸ್ಟಡೀಸ್ ಕೇಂದ್ರ, ರಾಜಾಜಿನಗರ, ಬೆಂಗಳೂರು.

ಮಾಹಿತಿಗೆ: 91416 29584, 98802 17473.

ಪತ್ರಿಕೋದ್ಯಮ: ಅರ್ಜಿ ಆಹ್ವಾನ

ಬೆಂಗಳೂರು: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್‌ನಿಂದ ‘ಅಭಿವ್ಯಕ್ತಿ’ ಹೆಸರಿನ ಒಂಬತ್ತು ತಿಂಗಳ ಪತ್ರಿಕೋದ್ಯಮ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಲಾಗಿದೆ.



ಪದವಿ, ಸ್ನಾತಕೋತ್ತರ ಪದವಿ ಮುಗಿಸಿದ ಅಭ್ಯರ್ಥಿಗಳು ಜುಲೈ 31ರೊಳಗೆ ಅರ್ಜಿ ಸಲ್ಲಿಸಬಹುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಆಸಕ್ತರು https://forms.gle/JFSS5Kzvs4DhVoco9 ಈ ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ: 99450 65060, 90366 02022.

‘ಕ್ರಿಮಿಕೀಟ’ ಖಾತೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಗಣ್ಯರ ವಿರುದ್ಧ ಅವಹೇಳನಕಾರಿ ವಿಡಿಯೊ ಸೃಷ್ಟಿಸಿ ಸಾಮಾಜಿಕ ತಾಲತಾಣಗಳಲ್ಲಿ ಹಾಕುತ್ತಿರುವ ವ್ಯಕ್ತಿಯ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕುಶಾಲ್ ಹರವೇಗೌಡ ಅವರು ನೀಡಿರುವ ದೂರು ಆಧರಿಸಿ ‘ಕ್ರಿಮಿಕೀಟ’ ಹೆಸರಿನ ಖಾತೆದಾರನ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



‘ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಅನೇಕ ಸಚಿವರ ವಿರುದ್ಧ ಆಧಾರವಿಲ್ಲದೇ ಅವಹೇಳನಕಾರಿ ವಿಡಿಯೊ ಹಾಗೂ ನಕಲಿ ಧ್ವನಿ ಸುರುಳಿಯನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡುತ್ತಿರುವ ‘ಕ್ರಿಮಿಕೀಟ’ ಎಂಬ ಫೇಸ್‌ಬುಕ್ ಖಾತೆಯ ಹಿಂದಿರುವ ವ್ಯಕ್ತಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಕುಶಾಲ್ ಹರವೇಗೌಡ ದೂರಿನಲ್ಲಿ ತಿಳಿಸಿದ್ದಾರೆ.

ಪಾರ್ಕಿಂಗ್ ಸಮಸ್ಯೆಗೆ ಸಿಗಲಿದೆ ಮುಕ್ತಿ

ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ ₹22 ಕೋಟಿ ವೆಚ್ಚದಲ್ಲಿ ಬಹು ಮಹಡಿ ಕಾರು ಪಾರ್ಕಿಂಗ್ ಕಟ್ಟಡ ನಿರ್ಮಾಣ

ಪ್ರಮುಖ ಅಂಶಗಳು

- 1,469 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣ
- ಎರಡು ಅಂತಸ್ತಿನಲ್ಲಿ ವ್ಯಾಪಾರಕ್ಕಾಗಿ 51 ಮಳಿಗೆ
- 124 ಕಾರುಗಳ ನಿಲುಗಡೆಗೆ ಅವಕಾಶ

• ಖಲೀಲಅಹ್ಮದ ಶೇಖ

ಬ್ರ್ಯಾಂಡ್ ಬೆಂಗಳೂರು



ಬಸವನಗುಡಿಯ ಗಾಂಧಿಬಜಾರ್‌ನಲ್ಲಿ ನಿರ್ಮಿಸಿರುವ ಬಹುಮಹಡಿ ಕಾರು ಪಾರ್ಕಿಂಗ್ ಕಟ್ಟಡದ ಹೊರನೋಟ ಪ್ರಜಾವಾಣಿ ಚಿತ್ರ:ರಂಜು ಪಿ.

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ಬಸವನಗುಡಿಯ ಗಾಂಧಿಬಜಾರ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಾಹನ ನಿಲುಗಡೆ ಸಮಸ್ಯೆಗೆ ಪರಿಹಾರ ನೀಡುವ ಉದ್ದೇಶದಿಂದ ಬಹು ಮಹಡಿ ಕಾರು ಪಾರ್ಕಿಂಗ್ ಕಟ್ಟಡ ಸಿದ್ಧಗೊಂಡಿದ್ದು, ಕೆಲವೇ ದಿನಗಳಲ್ಲಿ ಸಾರ್ವಜನಿಕರಿಗೆ ಮುಕ್ತವಾಗಲಿದೆ.

ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ ₹22 ಕೋಟಿ ವೆಚ್ಚದಲ್ಲಿ ಐದು ಅಂತಸ್ತಿನ ಬಹು ಮಹಡಿ ಕಟ್ಟಡ ನಿರ್ಮಿಸಲಾಗಿದೆ. ಪಾರಂಪರಿಕವಾದ ಗಾಂಧಿ ಬಜಾರ್‌ನ 80 ಅಡಿ ಅಗಲವಿದ್ದ ರಸ್ತೆಯನ್ನು 20 ಅಡಿಗೆ ಇಳಿಸಿ, ಪಾದಚಾರಿ ಮಾರ್ಗ ಹಾಗೂ ವ್ಯಾಪಾರ ಮಾಡಲು ಸ್ಥಳಾವಕಾಶ ನೀಡಲಾಗಿದೆ. ಗಾಂಧಿ ಬಜಾರ್‌ಗೆ ಬರುವ ಸಾರ್ವಜನಿಕರು ರಸ್ತೆಯಲ್ಲಿಯೇ ವಾಹನ ನಿಲುಗಡೆ ಮಾಡುತ್ತಿದ್ದು ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಈಗ ಬಹು ಮಹಡಿ ಕಾರು ಪಾರ್ಕಿಂಗ್ ಕಟ್ಟಡ ನಿರ್ಮಿಸಿರುವುದರಿಂದ ವಾಹನ ನಿಲುಗಡೆ ಸಮಸ್ಯೆಗೆ ಪರಿಹಾರ ಸಿಗುವ ವಿಶ್ವಾಸವಿದೆ.

‘ಬಿಬಿಎಂಪಿಗೆ ಸೇರಿದ್ದ ಹಳೆಯ ಕಟ್ಟಡವನ್ನು ನೆಲಸಮಗೊಳಿಸಿ, 1,469 ಚದರ ಅಡಿ ವಿಸ್ತೀರ್ಣದಲ್ಲಿ ಕಾರುಗಳ ನಿಲುಗಡೆಗೆ ಬಹು ಮಹಡಿ ಕಟ್ಟಡ ನಿರ್ಮಿಸಲಾಗಿದೆ. ಕಾರು ಪಾರ್ಕಿಂಗ್ ಜೊತೆಗೆ ವಾಣಿಜ್ಯ ಉದ್ದೇಶಕ್ಕೂ ಅನುಕೂಲವಾಗುವಂತೆ ಕಟ್ಟಡ ನಿರ್ಮಿಸಲಾಗಿದೆ. ತಳ ಹಾಗೂ ನೆಲ ಮಹಡಿಯಲ್ಲಿ ಒಟ್ಟು 51 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗಿದೆ. ಉಳಿದ ಅಂತಸ್ತುಗಳಲ್ಲಿ ಕಾರುಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

‘2022ರ ಏಪ್ರಿಲ್‌ನಲ್ಲಿಯೇ ಕಟ್ಟಡ ನಿರ್ಮಾಣಕ್ಕೆ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿತ್ತು. ಆದರೆ, ಆರಂಭದಲ್ಲಿ ಬಹುಮಹಡಿ ಕಾರು ನಿಲುಗಡೆ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯರಿಂದ ವಿರೋಧ ವ್ಯಕ್ತವಾಯಿತು. ವಿವಾದವು ನ್ಯಾಯಾಲಯದ ಮೆಟ್ಟಿಲೇರಿತ್ತು. ಆದ್ದರಿಂದ ಈ ಸ್ಥಳವನ್ನು ಸ್ಮಾರ್ಟ್ ಸಿಟಿ ಕಂಪನಿಗೆ ಹಸ್ತಾಂತರಿಸುವುದು ತಡವಾಯಿತು. ಗುತ್ತಿಗೆದಾರರಿಗೆ ನೀಡಿದ್ದ ಕಾರ್ಯಾದೇಶವೂ ರದ್ದಾಯಿತು. 2023ರಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ, ಗುತ್ತಿಗೆದಾರರಿಗೆ ಕಟ್ಟಡ ನಿರ್ಮಿಸಲು ಗುತ್ತಿಗೆ ನೀಡಲಾಯಿತು. ಈಗ ಬಹುತೇಕ ಕಾಮಗಾರಿ ಪೂರ್ಣಗೊಂಡಿದ್ದು, ಅಂತಿಮ ಸ್ಪರ್ಶ ನೀಡಲಾಗುತ್ತಿದೆ’ ಎಂದರು.

> ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆ ಅಡಿ ಗಾಂಧಿ ಬಜಾರ್‌ನಲ್ಲಿ ನಿರ್ಮಿಸಿರುವ ಬಹು ಅಂತಸ್ತಿನ ಕಾರು ನಿಲುಗಡೆ ಕಟ್ಟಡ ಸಿದ್ಧಗೊಂಡಿದ್ದು, ಶೀಘ್ರವೇ ಬಳಕೆಗೆ ಲಭ್ಯವಾಗಲಿದೆ
>
> **ಮಹೇಶ್ವರ್ ರಾವ್**
> ಬಿಬಿಎಂಪಿ ಮುಖ್ಯ ಆಯುಕ್ತ

‘ಗಾಂಧಿ ಬಜಾರ್‌ಗೆ ಬರುವ ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿ ವಾಹನಗಳನ್ನು ನಿಲುಗಡೆ ಮಾಡಿ, ಹೂವು, ಹಣ್ಣುಗಳನ್ನು ಖರೀದಿ ಮಾಡುತ್ತಾರೆ. ಇದರಿಂದ ಇಡೀ ರಸ್ತೆಯಲ್ಲಿ ಸಂಚಾರ ದಟ್ಟಣೆ ಆಗುತ್ತದೆ. ಈಗ ಕಾರು ಪಾರ್ಕಿಂಗ್ ಕಟ್ಟಡ ನಿರ್ಮಿಸಿರುವುದರಿಂದ ಗ್ರಾಹಕರು ಸೇರಿದಂತೆ ಎಲ್ಲರಿಗೂ ಅನುಕೂಲ ಆಗಲಿದೆ. ಆದರೆ, ಪಾದಚಾರಿ ಮಾರ್ಗದಲ್ಲಿ ಹೂವು–ಹಣ್ಣು ಇತ್ಯಾದಿ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳಿಗೆ ಯಾವುದೇ ತೊಂದರೆ ನೀಡಬಾರದು. ಅನುಕೂಲವಿದ್ದ ವ್ಯಾಪಾರಿಗಳು ಪಾರ್ಕಿಂಗ್ ಕಟ್ಟಡದಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ಪಡೆದು ವ್ಯಾಪಾರ–ವಹಿವಾಟು ನಡೆಸಲಿ. ಈ ಮಳಿಗೆಗಳನ್ನು ಬಾಡಿಗೆ ಪಡೆದುಕೊಳ್ಳುವಂತೆ ನಮಗೆ ಒತ್ತಾಯ ಮಾಡಬಾರದು. ನಾವು ಬೀದಿ ಬದಿಯಲ್ಲಿ ವ್ಯಾಪಾರ ಮಾಡುತ್ತೇವೆ’ ಎಂದು ಹೂವಿನ ವ್ಯಾಪಾರಿ ಕಮಲಮ್ಮ ಮನವಿ ಮಾಡಿದರು.

‘124 ವಾಹನಗಳ ನಿಲುಗಡೆಗೆ ಅವಕಾಶ’



‘ಮೊದಲನೇ ಅಂತಸ್ತಿನಿಂದ ನಾಲ್ಕನೇ ಅಂತಸ್ತಿನವರೆಗೆ ಪ್ರತಿ ಅಂತಸ್ತಿಗೆ 31 ವಾಹನಗಳಂತೆ, ಒಟ್ಟು 124 ವಾಹನಗಳ ನಿಲುಗಡೆಗೆ ಅವಕಾಶವಿದೆ. ಲಿಫ್ಟ್ ಇದೆ, ಆರು ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಸದ್ಯ ಗಾಂಧಿ ಬಜಾರ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಹನ ನಿಲುಗಡೆಗೆ ಹೆಚ್ಚಿನ ಸ್ಥಳಾವಕಾಶವಿಲ್ಲ. ಆದ್ದರಿಂದ ಮಾರುಕಟ್ಟೆಗೆ ಬರುವ ವಾಹನ ಸವಾರರು ರಸ್ತೆಯ ಎಲ್ಲೆಂದರಲ್ಲಿ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದರು. ಇದರಿಂದ ಬೆಳಿಗ್ಗೆ ಮತ್ತು ಸಂಜೆ ಈ ಪ್ರದೇಶದಲ್ಲಿ ವಾಹನ ದಟ್ಟಣೆ ಆಗುತ್ತಿತ್ತು. ಈ ಪಾರ್ಕಿಂಗ್ ಕಟ್ಟಡದಲ್ಲಿ ಏಕಕಾಲಕ್ಕೆ ಒಟ್ಟು 124 ಕಾರುಗಳನ್ನು ನಿಲುಗಡೆ ಮಾಡಬಹುದಾಗಿದೆ. ಇದರಿಂದ ವಾಹನ ನಿಲುಗಡೆ ಸಮಸ್ಯೆ ಬಗೆಹರಿಯಲಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಸಾರ್ವಜನಿಕರು ಏನಂತಾರೆ?

ಬಸವನಗುಡಿಯ ಗಾಂಧಿ ಬಜಾರ್‌ನ ಪಾದಚಾರಿ ಮಾರ್ಗದಲ್ಲಿ 20 ವರ್ಷಗಳಿಂದ ಹೂವಿನ ವ್ಯಾಪಾರ ಮಾಡುತ್ತಿದ್ದೇನೆ. ಈಗ ಬೃಹತ್ ಕಟ್ಟಡವೊಂದನ್ನು ನಿರ್ಮಿಸಲಾಗಿದೆ. ಇದರಲ್ಲಿ ಕಾರು ಪಾರ್ಕಿಂಗ್ ಜೊತೆಗೆ ವಾಣಿಜ್ಯ ಮಳಿಗೆಗಳಿಗೂ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಈ ಭಾಗದ ಸಂಚಾರ ದಟ್ಟಣೆ ನಿವಾರಣೆ ಆಗಲಿದೆ

ರಾಜು, ಹೂವಿನ ವ್ಯಾಪಾರಿ

ಗಾಂಧಿ ಬಜಾರ್‌ನಲ್ಲಿ ನಿರ್ಮಿಸಿರುವ ಕಾರು ಪಾರ್ಕಿಂಗ್ ಕಟ್ಟಡದಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಇಲ್ಲಿ ಹೂವು, ಹಣ್ಣು, ಬಟ್ಟೆ ಅಂಗಡಿಗಳು, ಹೋಟೆಲ್‌ಗಳಿಗೆ ಬರುವ ಗ್ರಾಹಕರು ತಮ್ಮ ವಾಹನಗಳನ್ನು ರಸ್ತೆಯಲ್ಲಿ ನಿಲುಗಡೆ ಮಾಡುತ್ತಿದ್ದರು. ಈಗ ಕಾರು ಪಾರ್ಕಿಂಗ್ ಕಟ್ಟಡದಲ್ಲಿ ನಿಲುಗಡೆಗೆ ಅವಕಾಶ ಕಲ್ಪಿಸುವುದರಿಂದ ಎಲ್ಲರಿಗೂ ಅನುಕೂಲವಾಗಲಿದೆ.

ಶಂಕರ್, ಹಣ್ಣಿನ ವ್ಯಾಪಾರಿ

ವಾಹನ ಸವಾರರಿಗೆ ಹೊರೆಯಾಗದಂತೆ ಕಾರು ಪಾರ್ಕಿಂಗ್ ಶುಲ್ಕ ನಿಗದಿಪಡಿಸಬೇಕು. ಇಲ್ಲದಿದ್ದರೆ ಈ ಕಟ್ಟಡದಲ್ಲಿ ಯಾರೂ ವಾಹನಗಳ ನಿಲುಗಡೆ ಮಾಡುವುದಿಲ್ಲ. ಈ ಬಗ್ಗೆ ಸಾರ್ವಜನಿಕರೊಂದಿಗೆ ಚರ್ಚಿಸಿ, ಶುಲ್ಕ ನಿಗದಿಪಡಿಸುವುದು ಉತ್ತಮ.

ಪ್ರಮೋದ್, ವಾಹನ ಸವಾರ



ಖಾಸಗಿ ಬಸ್‌ನಲ್ಲಿ ತಪಾಸಣೆ ನಡೆಸಿದ ಶ್ವಾನದಳ

ಡ್ರಗ್ಸ್ ಸಾಗಣೆ ಶಂಕೆ, ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಹಾಗೂ ಖಾಸಗಿ ಬಸ್, ಆಟೊ, ಕ್ಯಾಬ್‌ಗಳಲ್ಲಿ ಲಗೇಜ್‌ಗಳ ಒಳಗೆ ನೈಸರ್ಗಿಕ ಹಾಗೂ ಸಿಂಥೆಟಿಕ್ ಡ್ರಗ್ಸ್ ಅನ್ನು ಆರೋಪಿಗಳು ಬಚ್ಚಿಟ್ಟು ಸಾಗಣೆ ಮಾಡುತ್ತಿರುವ ಶಂಕೆಯ ಮೇರೆಗೆ ಪಶ್ಚಿಮ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪೊಲೀಸರು ಶ್ವಾನ ದಳದೊಂದಿಗೆ ಸೋಮವಾರ ಶೋಧ ಕಾರ್ಯಾಚರಣೆ ನಡೆಸಿದರು.

ಖಾಸಗಿ ವಾಹನಗಳಲ್ಲಿ ಆರೋಪಿಗಳು ಎಂಡಿಎಂಎ ಕ್ರಿಸ್ಟಲ್, ಕೊಕೇನ್, ಗಾಂಜಾವನ್ನು ಲಗೇಜ್ ಬ್ಯಾಗ್‌ಗಳಲ್ಲಿ ಬಟ್ಟೆಯ ಮಧ್ಯೆ ಬಚ್ಚಿಟ್ಟು ಸಾಗಣೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಾತ್ಮೀದಾರದಿಂದ ಸಿಕ್ಕಿತ್ತು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ. ಸದ್ಯಕ್ಕೆ ಯಾವುದೇ ರೀತಿಯ ವಸ್ತುಗಳು ಪತ್ತೆಯಾಗಿಲ್ಲ. ಬಸ್‌ಗಳಲ್ಲಿ ಲಗೇಜ್ ಇಡುವ ಸ್ಥಳದಲ್ಲಿದ್ದ ಮೂಟೆಗಳು, ಬ್ಯಾಗ್, ಟ್ರಾಲಿ ಬ್ಯಾಗ್‌ಗಳನ್ನು ತಪಾಸಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

‘ಖಾಸಗಿ ಬಸ್ ನಿಲ್ದಾಣಗಳಲ್ಲಿ ಲಗೇಜ್ ಕೊಠಡಿಗಳಿವೆ. ಅಲ್ಲಿಯೂ ತಪಾಸಣೆ ನಡೆಸಲಾಗಿದೆ. ಮೆಜೆಸ್ಟಿಕ್ ಸುತ್ತಮುತ್ತ, ಆನಂದ್‌ರಾವ್ ವೃತ್ತದಲ್ಲಿ ನಿಲುಗಡೆ ಮಾಡಿದ್ದ ವಾಹನಗಳಲ್ಲಿ ತಪಾಸಣೆ ನಡೆಸಲಾಗಿದೆ. ಈ ಕಾರ್ಯಾಚರಣೆಯನ್ನು ಇನ್ನೂ ಒಂದುವಾರ ಮುಂದುವರಿಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಗಗನಯಾನ’ ಉಡಾವಣೆಗೂ ಮುನ್ನ ಬಾಹ್ಯಾಕಾಶಕ್ಕೆ ‘ರೋಬೊ’



ನಾರಾಯಣನ್

ಪ್ರಜಾವಾಣಿ ವಾರ್ತೆ

ಚೆನ್ನೈ: ‘ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಗಗನಯಾತ್ರಿಗಳನ್ನು ಕರೆದೊಯ್ಯುವ ಮುನ್ನ ಅಲ್ಲಿನ ವ್ಯವಸ್ಥೆಗಳನ್ನು ತಿಳಿಯಲು ರೋಬೊ ಕಳುಹಿಸಿಕೊಡಲಿದೆ’ ಎಂದು ಸಂಸ್ಥೆಯ ಮುಖ್ಯಸ್ಥ ವಿ.ನಾರಾಯಣನ್ ತಿಳಿಸಿದರು.

ಬುಧವಾರ ನಡೆಯಲಿರುವ ‘ನಿಸಾರ್’ ಉಪಗ್ರಹ ಉಡಾವಣೆಗಾಗಿ ಶ್ರೀಹರಿಕೋಟಾಕ್ಕೆ ತೆರಳುವ ಮುನ್ನ ಈ ವಿಷಯ ಪ್ರಸ್ತಾಪಿಸಿದರು.

‘ಪೂರ್ವ ನಿಗದಿಯಂತೆ 2027ರ ಮಾರ್ಚ್ ತಿಂಗಳಲ್ಲಿ ಇಸ್ರೊ ಗಗನಯಾನ ಹಮ್ಮಿಕೊಂಡಿದೆ. ಅದಕ್ಕೂ ಮುನ್ನ ಪರೀಕ್ಷಾರ್ಥವಾಗಿ ಈ ವರ್ಷ ಡಿಸೆಂಬರ್‌ನಲ್ಲಿ ರೋಬೊ ಅನ್ನು ಬಾಹ್ಯಾಕಾಶಕ್ಕೆ ಕಳುಹಿಸಿಕೊಡಲಾಗುವುದು. ‘ವ್ಯೋಮ್‌ಮಿತ್ರ’ ರೋಬೊ ಕಳುಹಿಸುವ ಯೋಜನೆ ಯಶಸ್ವಿಯಾದರೆ, 2027ರಲ್ಲಿ ನಿಗದಿಯಂತೆ ಗಗನಯಾನವು ನಡೆಯಲಿದೆ’ ಎಂದು ತಿಳಿಸಿದರು.

ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯ: ಆರು ಆರೋಪಿಗಳ ಬಂಧನ

ಕೊಠಡಿಗೆ ಕರೆದೊಯ್ದು ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇಟಿಂಗ್ ಆ್ಯಪ್‌ನ ಮೂಲಕ ಪರಿಚಯವಾಗಿದ್ದ ಉದ್ಯೋಗಿಯನ್ನು ಭೇಟಿಗೆ ಆಹ್ವಾನಿಸಿ, ಸುಲಿಗೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಮಂದಿಯನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಂಗೀತಾ ಸಹಾನಿ (36), ಬೀರಬಲ್ ಮಜ್ಜಗಿ(21), ಅಭಿಷೇಕ್(19), ಶ್ಯಾಮ್ ಸುಂದರ್ ಪಾಂಡೆ(20), ರಾಜು ಮಾನೆ (34) ಹಾಗೂ ಶರಣಬಸಪ್ಪ ಬಾಳಿಗೇರ್ (50) ಬಂಧಿತರು.

ತೆಲಂಗಾಣ ರಾಜ್ಯದ ರಾಕೇಶ್ ರೆಡ್ಡಿ ಅವರು ನೀಡಿದ ದೂರು ಆಧರಿಸಿ ನಗರದ ವಿವಿಧ ಸ್ಥಳಗಳಲ್ಲಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

15 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ರಾಕೇಶ್ ರೆಡ್ಡಿ ಅವರು ಮಹದೇವಪುರದಲ್ಲಿ ಇರುವ ಬೋಯಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಂದ ಆರೋಪಿಗಳು ₹2 ಲಕ್ಷ ಸುಲಿಗೆ ಮಾಡಿದ್ದರು ಎಂದು ಪೊಲೀಸರು ತಿಳಿಸಿದರು.

‘ದೂರುದಾರರಿಗೆ ಡೇಟಿಂಗ್ ಆ್ಯಪ್‌ವೊಂದರ ಮೂಲಕ ತಿಂಗಳ ಹಿಂದೆ ಆರೋಪಿ ಸಂಗೀತಾ ಪರಿಚಯವಾಗಿತ್ತು. ಆಕೆ ತನ್ನನ್ನು ರಾಜಸ್ಥಾನದ ರಾಕಿ ಎಂದು ಪರಿಚಯಿಸಿಕೊಂಡಿದ್ದಳು. ತಾನು ಅವಿವಾಹಿತ-ಳಾಗಿದ್ದು, ಎಲೆಂಟು ವರ್ಷಗಳಿಂದ ಬೆಂಗಳೂರಿನಲ್ಲಿ ಬ್ಯುಸಿನೆಸ್ ಅನಾಲಿಸ್ಟ್ ಆಗಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ್ದಳು. ಇಬ್ಬರೂ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ವಿನಿಮಯ ಮಾಡಿಕೊಳ್ಳುತ್ತಿದ್ದರು. ಜುಲೈ 17ರಂದು ಭೇಟಿಗೆ ಆಹ್ವಾನಿಸಿದ್ದಳು. ಆದರೆ, ದೂರುದಾರರಿಗೆ ಆಕೆಯನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಮರುದಿನ ಸಂಜೆ 5.30ರ ಸುಮಾರಿಗೆ ಯಲಹಂಕದ ಗ್ಯಾಲರಿಯಾ ಮಾಲ್‌ನಲ್ಲಿರುವ ಸ್ಟಾರ್ ಬಂಗ್ಸ್‌ನಲ್ಲಿ ಇಬ್ಬರೂ ಭೇಟಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

‘ಬಳಿಕ ಇಬ್ಬರೂ ಆಟೊದಲ್ಲಿ ಸಂಗೀತಾಳ ಮನೆಗೆ ತೆರಳಿದ್ದರು. ಮನೆಯಲ್ಲಿ ಮದ್ಯಪಾನ ಮಾಡುತ್ತಾ ಕುಳಿತಿದ್ದಾಗ ಉಳಿದ ಆರೋಪಿಗಳು ಆ ಮನೆಗೆ ಪ್ರವೇಶಿಸಿದ್ದರು. ‘ನಾವು ಮನೆಯ ಮಾಲೀಕರು. ಮನೆಯಲ್ಲಿ ಮದ್ಯಪಾನ ಮಾಡುವಂತಿಲ್ಲ’ ಎನ್ನುತ್ತಾ ಸಂಗೀತಾ ಹಾಗೂ ದೂರುದಾರರ ಬ್ಯಾಗ್‌ಗಳನ್ನು ಪರಿಶೀಲಿಸಲು ಮುಂದಾಗಿದ್ದರು. ಆಗ ಬ್ಯಾಗ್‌ನಲ್ಲಿ ಬಿಳಿ ಬಣ್ಣದ ಪೌಡರ್ ಸಿಕ್ಕಿತ್ತು. ಆ ಪೌಡರ್ ಅನ್ನು ಡ್ರಗ್ಸ್ ಎಂದು ತೋರಿಸಿ ಹಣ ಸುಲಿಗೆ ಮಾಡಲು ಪ್ರಯತ್ನಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಬಂಧಿತರ ಪೈಕಿ, ಒಬ್ಬ ಆರೋಪಿಯ ವಿರುದ್ಧ 2023ರಲ್ಲಿ ಪುಟ್ಟೇನಹಳ್ಳಿ ಠಾಣೆಯಲ್ಲಿ ಇಂಥಹದ್ದೇ ಪ್ರಕರಣ ದಾಖಲಾಗಿತ್ತು. ಆರೋಪಿ ಸಂಗೀತಾ ಸಹಾನಿ ಉತ್ತರ ಪ್ರದೇಶ ಮೂಲದವಳಾಗಿದ್ದು, ಈ ಹಿಂದೆ ಡಾನ್ಸ್ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದಳು’ ಎಂದು ಪೊಲೀಸರು ಹೇಳಿದರು.

₹15 ಲಕ್ಷಕ್ಕೆ ಬೇಡಿಕೆ, ₹2 ಲಕ್ಷ ಸುಲಿಗೆ

‘ಈ ವಿಷಯವನ್ನೂ ಯಾರಿಗೂ ತಿಳಿಸುವುದಿಲ್ಲ ಎಂದು ಹೇಳಿದ್ದ ಆರೋಪಿಗಳು, ₹15 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಆಗ ದೂರುದಾರರು, ತಮ್ಮ ಬಳಿ ಅಷ್ಟು ಹಣವಿಲ್ಲ ಎಂದು ಹೇಳಿದ್ದರು. ಕೊನೆಗೆ ₹2 ಲಕ್ಷ ಕೊಡುವುದಾಗಿ ರಾಕೇಶ್ ರೆಡ್ಡಿ ಹೇಳಿದರು. ಆರೋಪಿಗಳ ಮಾತಿನಂತೆ ಹಂತ ಹಂತವಾಗಿ ದೂರುದಾರರು ಒಟ್ಟು ₹2 ಲಕ್ಷ ವರ್ಗಾಯಿಸಿದ್ದರು. ಬಳಿಕ ರಾಕೇಶ್ ಅವರನ್ನು ಬೈಕ್‌ನಲ್ಲಿ ಕರೆದೊಯ್ದು ವೀರಸಂದ್ರ ಬಳಿ ನಿರ್ಜನ ಪ್ರದೇಶದಲ್ಲಿ ಬಿಟ್ಟು ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.


ಪೂರ್ವನಿಯೋಜಿತ ಕೃತ್ಯ



‘ಬ್ಯಾಗ್‌ನಲ್ಲಿ ಅಡುಗೆ ಸೋಡಾವನ್ನು ಸಂಗೀತಾ ಸಹಾನಿ ಮೊದಲೇ ಬಚ್ಚಿಟ್ಟುಕೊಂಡಿದ್ದಳು. ದೂರುದಾರರನ್ನು ಕೊಠಡಿಗೆ ಕರೆತಂದಾಗ ನಾಟಕವಾಡುವಂತೆ ಪ್ರಕರಣದ ಸೂತ್ರಧಾರ ಶರಣಬಸಪ್ಪ ಬಾಳಿಗೇರ್ ಸೂಚಿಸಿದ್ದ. ಬ್ಯಾಗ್‌ನಲ್ಲಿದ್ದ ಬಿಳಿ ಪೌಡರ್ ತೋರಿಸಿ ‘ಎಂಡಿಎಂಎ ಸೇವನೆ ಮಾಡುತ್ತಿದ್ದೀರಿ, ಪೊಲೀಸರಿಗೆ ಮಾಹಿತಿ ನೀಡುತ್ತೇವೆ’ ಎಂದು ಆರೋಪಿಗಳು ಬೆದರಿಸಿದ್ದರು. ಇದರಿಂದ ದೂರುದಾರ ಆಘಾತಕ್ಕೆ ಒಳಗಾಗಿದ್ದರು. ಆಗ ಸಂಗೀತಾ ಸಹಾನಿ ಈ ವಿಷಯ ಹೊರಗೆ ಗೊತ್ತಾದರೆ ನನ್ನ ಮರ್ಯಾದೆ ಹೋಗುತ್ತದೆ ಎಂದು ಕಣ್ಣೀರು ಹಾಕಿದ್ದಳು’ ಎಂದು ಪೊಲೀಸರು ಹೇಳಿದರು.

ಪೂರ್ವನಿಯೋಜಿತವಾಗಿ ಆರೋಪಿಗಳು ಕೃತ್ಯ ಎಸಗಿದ್ದರು. ಮಹಿಳೆಯ ಬ್ಯಾಗ್‌ನಲ್ಲಿ ಅಡುಗೆ ಸೋಡಾವನ್ನು ಇಟ್ಟು ಎಂಡಿಎಂಎ ಎಂದು ಬೆದರಿಸಲಾಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ



ಸಂಗೀತಾ



ಬೀರಬಲ್ ಮಜ್ಜಗಿ



ರಾಜು ಮಾನೆ



ಶರಣಬಸಪ್ಪ ಬಾಳಿಗೇರ್



ಅಭಿಷೇಕ್

17 ವರ್ಷದ ಬಳಿಕ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 33 ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ 17 ವರ್ಷಗಳಿಂದ ಪೊಲೀಸರಿಗೆ ಸಿಗದೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಯಲಹಂಕ ಉಪನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮುರುಗೇಶ್ (55) ಬಂಧಿತ ಆರೋಪಿ. ತಮಿಳುನಾಡಿನಲ್ಲಿ ಆರೋಪಿ ತಲೆಮರೆಸಿಕೊಂಡಿದ್ದ. ಖಚಿತ ಮಾಹಿತಿ ಆಧರಿಸಿ ತಮಿಳುನಾಡಿಗೆ ತೆರಳಿ, ಆರೋಪಿಯನ್ನು ಬಂಧಿಸಲಾಯಿತು. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಮುರುಗೇಶ

ಆರೋಪಿಯ ವಿರುದ್ಧ ತಮಿಳುನಾಡು ಹಾಗೂ ರಾಜ್ಯದ ಬೆಂಗಳೂರು, ಕೋಲಾರ, ಕೊಡಗು ಸೇರಿ ವಿವಿಧ ಪೊಲೀಸ್ ಠಾಣೆಗಳಲ್ಲಿ 33 ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಹೇಳಿದರು.

ಯಲಹಂಕ ಪೊಲೀಸ್ ಠಾಣೆಯಲ್ಲಿ ಆರೋಪಿಯ ವಿರುದ್ಧ 2008ರಲ್ಲಿ ಮೂರು ಪ್ರಕರಣಗಳು ದಾಖಲಾಗಿದ್ದವು. ಬೆಂಗಳೂರು, ತಮಿಳುನಾಡು ಹಾಗೂ ಕೇರಳ ರಾಜ್ಯದ ವಿವಿಧೆಡೆ ಶೋಧ ನಡೆಸಿದ್ದರೂ ಆರೋಪಿ ಸಿಕ್ಕಿರಲಿಲ್ಲ. ನ್ಯಾಯಾಲಯ ಜಾಮೀನುರಹಿತ ವಾರಂಟ್ ಜಾರಿ ಮಾಡಿತ್ತು. ಹಿರಿಯ ಅಧಿಕಾರಿಗಳು ಇತ್ತೀಚೆಗೆ ಠಾಣೆಗೆ ಭೇಟಿ ನೀಡಿ ಅಪರಾಧ ಪ್ರಕರಣಗಳ ಬಗ್ಗೆ ಪರಾಮರ್ಶೆ ನಡೆಸಿದ್ದರು. ಆಗ ಈ ಪ್ರಕರಣದಲ್ಲಿ ಆರೋಪಿ ಪತ್ತೆ ಆಗದಿರುವುದು ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಆರೋಪಿಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ವಿಶೇಷ ತಂಡವು ತಮಿಳುನಾಡಿಗೆ ತೆರಳಿ ಆರೋಪಿಯನ್ನು ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ವಾಹನ, ತರಕಾರಿ ಅಂಗಡಿಗೆ ಬೆಂಕಿ

ಬೆಂಗಳೂರು: ನಗರದ ಹಲಸೂರು ಮಾರುಕಟ್ಟೆಯ ರಸ್ತೆಬದಿ ನಿಲುಗಡೆ ಮಾಡಲಾಗಿದ್ದ 10ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಿಗೆ ಕಿಡಿಗೇಡಿಗಳು ಬೆಂಕಿ ಹಾಕಿ ಸುಟ್ಟಿದ್ದಾರೆ. ದ್ವಿಚಕ್ರ ವಾಹನಕ್ಕೆ ಬಿದ್ದ ಬೆಂಕಿಯು ಪಕ್ಕದಲ್ಲೇ ಇದ್ದ ತರಕಾರಿ ಮಾರಾಟ ಅಂಗಡಿಗೂ ತಗುಲಿ ಸುಟ್ಟು ಹೋಗಿದೆ.



ಸೋಮವಾರ ಮುಂಜಾನೆ ಘಟನೆ ನಡೆದಿದೆ. ಹೆಲ್ಮೆಟ್, ಮುಖಗವಸು ಧರಿಸಿಕೊಂಡು ಸ್ಥಳಕ್ಕೆ ಬಂದಿದ್ದ ದುಷ್ಕರ್ಮಿಗಳು ಬೆಂಕಿಹಚ್ಚಿ ಪರಾರಿ ಆಗಿದ್ದಾರೆ. ಆರೋಪಿಗಳು ಕೃತ್ಯ ಎಸಗಿ ಪರಾರಿ ಆಗುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹಲಸೂರು ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ.

‘40 ವರ್ಷಗಳಿಂದ ಇಲ್ಲಿ ವ್ಯಾಪಾರ ಮಾಡುತ್ತಾ ಜೀವನ ಸಾಗಿಸುತ್ತಿದ್ದೆ. ನಾವು ಯಾರಿಗೂ ಅನ್ಯಾಯ ಮಾಡಿಲ್ಲ. ಯಾರೋ ಉದ್ದೇಶಪೂರ್ವಕವಾಗಿ ಈ ಕೃತ್ಯ ಎಸಗಿದ್ದಾರೆ. ಆರೋಪಿಗಳನ್ನು ಬಂಧಿಸಬೇಕು’ ಎಂದು ತರಕಾರಿ ವ್ಯಾಪಾರಿ ಮಹಾಲಿಂಗಪ್ಪ ಆಗ್ರಹಿಸಿದರು.

‘ಸಿಸಿಟಿವಿ ದೃಶ್ಯಾಗಳಿಗಳನ್ನು ಸಂಗ್ರಹಿಸಲಾಗಿದೆ. ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ. ಯಾವ ಕಾರಣಕ್ಕಾಗಿ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂಬುದು ಆರೋಪಿಗಳ ಬಂಧನದ ಬಳಿಕವೇ ಗೊತ್ತಾಗಲಿದೆ’ ಎಂದು ಪೊಲೀಸರು ಹೇಳಿದರು.

ಕೃಷಿ ಹೊಂಡದಲ್ಲಿ ಬಿದ್ದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಮೃತಪಟ್ಟಿರುವ ಘಟನೆ ಬೆಂಗಳೂರು ಉತ್ತರ ತಾಲ್ಲೂಕಿನ ತಮ್ಮೇನಹಳ್ಳಿಯಲ್ಲಿ ನಡೆದಿದೆ.

ತಮ್ಮೇನಹಳ್ಳಿ ನಿವಾಸಿಗಳಾದ ಧ್ಯಾನ್ ರಾಜ್ (14), ಪ್ರಭಾಕರ್ (28) ಮೃತರು. ಕ್ರಿಕೆಟ್ ಆಡುವ ವೇಳೆ ಚೆಂಡು ಕೃಷಿ ಹೊಂಡದಲ್ಲಿ ಬಿದ್ದಿದೆ. ಅದನ್ನು ತೆಗೆದುಕೊಳ್ಳುವ ಸಲುವಾಗಿ ಧ್ಯಾನ್ ರಾಜ್ ಕೃಷಿ ಹೊಂಡಕ್ಕೆ ಇಳಿದಿದ್ದು, ಈಜು ಬಾರದೆ ನೀರಿನಲ್ಲಿ ಮುಳುಗುತ್ತಿದ್ದ. ಪಕ್ಕದಲ್ಲೇ ಚಹಾ ಅಂಗಡಿ ಇಟ್ಟುಕೊಂಡಿದ್ದ ಪ್ರಭಾಕರ್ ಇದನ್ನು ಗಮನಿಸಿ, ಬಾಲಕನ ರಕ್ಷಣೆಗಾಗಿ ಕೃಷಿ ಹೊಂಡಕ್ಕೆ ಇಳಿದಿದ್ದಾರೆ.

ಆದರೆ, ಇಬ್ಬರೂ ನೀರಿನಿಂದ ಹೊರ ಬರಲಾಗದೇ ಕೃಷಿ ಹೊಂಡದಲ್ಲಿ ಜೀವ ಬಿಟ್ಟಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಶವಗಳನ್ನು ಹೊರತೆಗೆದರು.

ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮದ ಎಚ್ಚರಿಕೆ

ನಕಲಿ ವಕೀಲರ ಹಾವಳಿ: ಪರಿಷತ್ ಆತಂಕ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾವಿರಕ್ಕೂ ಹೆಚ್ಚು ಜನರ ಬಳಿ ನಕಲಿ ಅಂಕಪಟ್ಟಿ
- ಇವರಲ್ಲಿ ಇದ್ದಾರೆ ಆಟೋ ಡ್ರೈವರ್, ಪುಢಾರಿಗಳು..!

ಬೆಂಗಳೂರು: ‘ರಾಜ್ಯದ ವಿವಿಧೆಡೆ ನಕಲಿ ವಕೀಲರ ಸಂಖ್ಯೆ ಹೆಚ್ಚುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿರುವ ‘ಕರ್ನಾಟಕ ರಾಜ್ಯ ವಕೀಲರ ಪರಿಷತ್’ (ಕೆಎಸ್‌ಬಿಸಿ), ‘ಈ ಸಂಬಂಧ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಲಿದೆ’ ಎಂದು ಎಚ್ಚರಿಸಿದೆ.

ಈ ಕುರಿತಂತೆ ಪ್ರಕಟಣೆ ಹೊರಡಿಸಿರುವ ಪರಿಷತ್ ಅಧ್ಯಕ್ಷ ಎಸ್.ಎಸ್. ಮಿಟ್ಟಲಕೋಡ್, ‘ನಕಲಿ ವಕೀಲರ ಹಾವಳಿಯಿಂದ ವಕೀಲ ಸಮುದಾಯಕ್ಕೆ ಕಳಂಕ ತಗುಲಿದೆ.



ಮಿಟ್ಟಲಕೋಡ್

ಈ ನಿಟ್ಟಿನಲ್ಲಿ ರಾಜ್ಯ ವಕೀಲರ ಪರಿಷತ್‌ಗೆ ಸುಳ್ಳು ಮಾಹಿತಿ ನೀಡಿ, ಖೊಟ್ಟಿ ದಾಖಲೆ ಗಳನ್ನು ಸಲ್ಲಿಸಿ ನೋಂದಣಿ ಆದವರು ಸ್ವತಃ ತಪ್ಪು ಒಪ್ಪಿಕೊಂಡು ಸನ್ನದು ವಾಪಸು ನೀಡಬೇಕು. ಇಲ್ಲವಾದಲ್ಲಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಎಚ್ಚರಿಸಿದ್ದಾರೆ.

‘ಹೊರ ರಾಜ್ಯಗಳಲ್ಲಿ ಕಾನೂನು ಪದವಿ (ಎಲ್‌ಎಲ್‌ಬಿ) ಪಡೆದಿದ್ದೇವೆ ಎಂದು ಹೇಳಿಕೊಂಡು ಕರ್ನಾಟಕದಲ್ಲಿ ವಕೀಲಿಕೆ ಆರಂಭಿಸಲು ಸನ್ನದು ಕೋರಿ ರಾಜ್ಯ ವಕೀಲರ ಪರಿಷತ್‌ಗೆ ಬರುವ ಅನೇಕರಿಗೆ ತಾವು ವ್ಯಾಸಂಗ ಮಾಡಿದ ವಿಶ್ವವಿದ್ಯಾಲಯ ಅಥವಾ ಕಾಲೇಜಿನ ವಿಳಾಸವೇ ಅರಿವಿಲ್ಲ. ಕಳೆದ ಐದು ತಿಂಗಳಲ್ಲಿ ಇಂತಹ 300ರಿಂದ 400 ನಕಲಿ ಅಭ್ಯರ್ಥಿ-ಗಳಿಗೆ ಸನ್ನದು ನೀಡದೆ ವಾಪಸ್ ಕಳುಹಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಸಂದರ್ಶನಕ್ಕೂ ಮುನ್ನ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ವಿತರಿಸಿರುವ ಆಯಾ ವಿಶ್ವವಿದ್ಯಾಲಯಗಳಿಗೆ ಪರಿಶೀಲನೆಗೆ ಕಳುಹಿಸಲಾಗು ವುದು. ಇವುಗಳ ಸಾಚಾತನದ ಬಗ್ಗೆ ಆಯಾ ವಿಶ್ವ-ವಿದ್ಯಾಲಯಗಳು ಪರಿಷತ್‌ಗೆ ಪತ್ರ ಬರೆಯುತ್ತವೆ. ಈ ಮಾಹಿತಿ ಬಂದ ನಂತರ ನಕಲಿ ಅಂಕಪಟ್ಟಿ ತಂದವರಿಗೆ ಸನ್ನದು ನಿರಾಕರಿಸಿ ಹಿಂಬರಹ ನೀಡಲಾಗುತ್ತಿದೆ. ಅಗತ್ಯವಿದ್ದಲ್ಲಿ ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸ-ಬಹುದು’ ಎಂದು ಮಿಟ್ಟಲಕೋಡ್ ವಿವರಿಸಿದ್ದಾರೆ.

‘ನಕಲಿ ಅಂಕಪಟ್ಟಿ ಹೊಂದಿದ ಒಂದು ಸಾವಿರಕ್ಕೂ ಹೆಚ್ಚು ಜನ ಸನ್ನದು ಪಡೆಯಲು ಅರ್ಜಿ ಸಲ್ಲಿಸಿರುವುದು ಪತ್ತೆಯಾಗಿದೆ. ಇಂಥವರು ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಪಂಜಾಬ್-ಹರಿಯಾಣ ರಾಜ್ಯಗಳ ಕಾನೂನು ವಿಶ್ವವಿದ್ಯಾಲಯ, ಕಾಲೇಜುಗಳಲ್ಲಿ ಕಾನೂನು ಪದವಿಯ ನಕಲಿ ಅಂಕಪಟ್ಟಿ ಪಡೆದು, ಕರ್ನಾಟಕದಲ್ಲಿ ವಕೀಲಿಕೆ ಆರಂಭಿಸಲು ಸನ್ನದು ಕೋರಿ ರಾಜ್ಯ ವಕೀಲರ ಪರಿಷತ್‌ಗೆ ಅರ್ಜಿ ಸಲ್ಲಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ನಿಯಂತ್ರಣಕ್ಕೆ ಕ್ರಿಯಾ ಯೋಜನೆ



ಕಾಲೇಜಿಗೆ ಹೋಗದೆ, ಅಗತ್ಯ ಹಾಜರಿ ಇಲ್ಲದೆ ಹಣ ಕಟ್ಟಿ ನಕಲು ಪ್ರಮಾಣ ಪತ್ರ ಪಡೆದು ಬರುತ್ತಿರುವವರೇ ಹೆಚ್ಚಾಗಿ ನಕಲಿ ವಕೀಲರ ಪಟ್ಟಿಯಲ್ಲಿದ್ದಾರೆ. ಇಂಥವರು ಮತ್ತೊಬ್ಬ ನೋಂದಾಯಿತ ವಕೀಲರ ಸಂಖ್ಯೆಯನ್ನು ಪಡೆದು ಅವರ ಹೆಸರಿನಲ್ಲಿ ವಕಾಲತ್ ನಾಮೆ ಸಲ್ಲಿಸಿ ವಕೀಲಿಕೆ ನಡೆಸುತ್ತಿರುವುದೂ ಕಂಡುಬಂದಿದೆ. ಇದನ್ನು ನಿಯಂತ್ರಿಸಲು ಸೂಕ್ತ ಕ್ರಿಯಾ ಯೋಜನೆಯೊಂದನ್ನು ರೂಪಿಸಲಾಗುತ್ತಿದೆ.

ಎಂ.ದೇವರಾಜ, ಸನ್ನದು ದಾಖಲಾತಿ ಸಮಿತಿ ಮಾಜಿ ಅಧ್ಯಕ್ಷ

ನಿರಾಕರಣೆ ಸಲ್ಲ–ಕ್ರಮ ಅನಿವಾರ್ಯ



ಬಿಸಿಐ (ಭಾರತೀಯ ವಕೀಲರ ಪರಿಷತ್) ನಿಯಮಗಳಿಗೆ ಅನುಸಾರವಾಗಿ ಮಾನ್ಯತೆ ಪಡೆದ ಕಾಲೇಜು ಅಥವಾ ವಿಶ್ವವಿದ್ಯಾಲಯಗಳಿಂದ ಎಲ್‌ಎಲ್‌ಬಿ ಪದವಿ ಪ್ರಮಾಣ ಪತ್ರ ಪಡೆದು-ಕೊಂಡಿದ್ದರೆ ಅಂಥವರು ದೇಶದ ಯಾವುದೇ ರಾಜ್ಯದಲ್ಲಿ ಸ್ಥಳೀಯ ವಿಳಾಸದೊಂದಿಗೆ ಸನ್ನದು ನೋಂದಾಯಿಸಬಹುದು. ಈ ಕುರಿತಂತೆ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ಹಲವು ಪೂರ್ವನಿರ್ಣಯಗಳೂ ಇವೆ. ಹೀಗಾಗಿ, ಸನ್ನದು ದಾಖಲು ಮಾಡಿಕೊಳ್ಳು ವುದನ್ನು ತಿರಸ್ಕರಿಲು ಆಗದು. ಆದಾಗ್ಯೂ, ನಕಲಿ ಪ್ರಮಾಣ ಪತ್ರ ಪಡೆದವರ ವಿರುದ್ಧ ಕ್ರಮ ಅನಿವಾರ್ಯ.

ಎಸ್.ಹರೀಶ್, ಸನ್ನದು ದಾಖಲಾತಿ ಸಮಿತಿ ಮಾಜಿ ಸದಸ್ಯ

ಹುಬ್ಬಳ್ಳಿ, ವಿಜಯಪುರ, ಬೆಳಗಾವಿ ವಿಶೇಷ ರೈಲು



ಬೆಂಗಳೂರು: ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಬೆಂಗಳೂರಿನಿಂದ ಹುಬ್ಬಳ್ಳಿ, ವಿಜಯಪುರ, ಬೆಳಗಾವಿಗೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರ ಆರಂಭಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಎಸ್‌ಎಂವಿಟಿ ಬೆಂಗಳೂರು ಮತ್ತು ಬೆಳಗಾವಿಯ ನಡುವೆ ಆಗಸ್ಟ್ 7, 9, 14 ಮತ್ತು 16ರಂದು ಒಟ್ಟು ನಾಲ್ಕು ಟ್ರಿಪ್ ಇರಲಿದೆ. ಸಂಜೆ 7ಕ್ಕೆ ಎಸ್‌ಎಂವಿಟಿಯಿಂದ ಹೊರಟು ಮರುದಿನ ಬೆಳಿಗ್ಗೆ 8.25ಕ್ಕೆ ಬೆಳಗಾವಿ ತಲುಪಲಿದೆ. ಬೆಳಗಾವಿಯಿಂದ ಆ.8,10,15, 17 ರಂದು ಸಂಜೆ 5.30ಕ್ಕೆ ಹೊರಟು, ಮರುದಿನ ಬೆಳಿಗ್ಗೆ 5ಕ್ಕೆ ಎಸ್‌ಎಂವಿಟಿ ತಲುಪಲಿದೆ.

ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಎಸ್.ಎಂ.ಎಂ. ಹಾವೇರಿ, ಎಸ್.ಎಸ್.ಎಸ್. ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ ಮತ್ತು ಖಾನಾಪುರದಲ್ಲಿ ಈ ರೈಲು ನಿಲುಗಡೆ ಹೊಂದಲಿದೆ.

ಮಳೆಗಾಲದಲ್ಲಿ ನೀರು ಕುಡಿಯುವುದನ್ನು ಮರೆಯದಿರಿ. ದೇಹವು ನಿರ್ಜಲೀಕರಣವಾಗದಂತೆ ತಾಜಾ ಹಣ್ಣು ಹಾಗೂ ತರಕಾರಿಗಳಿಂದ ಮಾಡಿದ ಪಾನೀಯಗಳನ್ನು ಆಗಾಗ್ಗೆ ಸೇವಿಸಿ



ಡಿಜಿಟಲ್ ವ್ಯಸನದಿಂದ ಹೊರಬನ್ನಿ



• ಡಾ. ಕುಶ್ವಂತ್ ಕೋಳಿಬೈಲು

ಮನುಷ್ಯ ಇಂದು ಅತ್ಯಂತ ಹೆಚ್ಚಿನ ಸಮಯವನ್ನು ಡಿಜಿಟಲ್ ವಸ್ತುಗಳನ್ನು ಉಪಯೋಗಿಸುವುದರಲ್ಲಿ ಕಳೆಯುತ್ತಾನೆ. ಅವನು ತನ್ನ ಉದ್ಯೋಗದ ಕಾರಣದಿಂದಾಗಿ ಅಥವಾ ಮನೋರಂಜನೆಗಾಗಿ ದಿನದ ಹೆಚ್ಚಿನ ಸಮಯವನ್ನು ಸ್ಮಾರ್ಟ್‌ಫೋನ್, ಕಂಪ್ಯೂಟರ್, ಟಿ.ವಿ. ಮತ್ತು ಸಾಮಾಜಿಕ ಜಾಲತಾಣದಲ್ಲಿಯೇ ಕಳೆಯುತ್ತಿರುತ್ತಾನೆ. ಹಿಂದೆ ಅವನು ಓದುತ್ತಿದ್ದ ಪುಸ್ತಕವನ್ನು, ನೋಡುತ್ತಿದ್ದ ನಾಟಕವನ್ನು, ಕೇಳುತ್ತಿದ್ದ ಸಂಗೀತವನ್ನು, ಮಾಡುತ್ತಿದ್ದ ವ್ಯಾಪಾರವನ್ನು ಇಂದು ಅವನು ಮನೆಯಲ್ಲಿಯೇ ಕುಳಿತು ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್ ಮುಂದೆ ಮಾಡುತ್ತಿದ್ದಾನೆ.

ಯಾವುದೆ ಒಂದು ಅಭ್ಯಾಸ ಅವಲಂಬನೆಯಾದಾಗ ಅದು ಅದರದೇ ಆದ ದುಷ್ಪರಿಣಾಮವನ್ನು ಬೀರುತ್ತದೆ. ಅದು ಮನುಷ್ಯನ ದೈಹಿಕ ಆರೋಗ್ಯ ಮಾತ್ರವಲ್ಲದೆ ಮಾನಸಿಕ ಆರೋಗ್ಯದ ಮೇಲೆಯೂ ಪರಿಣಾಮವನ್ನು ಬೀರುತ್ತದೆ. ಹೆಚ್ಚಿನವರಿಗೆ ತಾವು ಡಿಜಿಟಲ್ ಉಪಕರಣಗಳ ಮುಂದೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ದಿನದ ಎಷ್ಟು ಗಂಟೆಯನ್ನು ಕಳೆಯುತ್ತಿದ್ದೇವೆ ಎಂಬ ಅಂದಾಜು ಕೂಡ ಇರುವುದಿಲ್ಲ. ಈ ಅವಲಂಬನೆ ಜಾಸ್ತಿಯಾಗಿ ದೈಹಿಕ ಮತ್ತು ಮಾನಸಿಕ ಕಾಯಿಲೆಗಳು ಕಾಣಿಸಿಕೊಂಡಾಗ ಅವರು ಈ ವಿಚಾರದ ಕಡೆಗೆ ಗಮನವನ್ನು ಹರಿಸುತ್ತಾರೆ. ಯಾವುದೇ ಆರೋಗ್ಯವಂತ ವ್ಯಕ್ತಿ ಮನೋರಂಜನೆಯ ದೃಷ್ಟಿಯಿಂದ ಡಿಜಿಟಲ್ ಉಪಕರಣಗಳನ್ನು ಮತ್ತು ಸಾಮಾಜಿಕ ಮಾಧ್ಯಮಗಳನ್ನು ದಿನದಲ್ಲಿ ಎರಡು ಗಂಟೆಗಳಿಗಿಂತ ಹೆಚ್ಚು ಕಾಲ ಬಳಸುವುದು ಸೂಕ್ತವಲ್ಲ.

ಡಿಜಿಟಲ್ ಉಪಕರಣಗಳ ಮೇಲೆ ಅಗತ್ಯಕ್ಕಿಂತ ಹೆಚ್ಚು ಅವಲಂಬಿತವಾಗುವುದರಿಂದ ಮನುಷ್ಯನ ಜೀವನಕ್ರಮವನ್ನು ಅದು ಬಾಧಿಸುತ್ತದೆ. ಓಡಾಟ ಮತ್ತು ವ್ಯಾಯಾಮ ಕಡಿಮೆಯಾಗಿ ಬೊಜ್ಜು ಕಾಣಿಸಿಕೊಳ್ಳುತ್ತದೆ. ಇದು ನಂತರದ ವರ್ಷಗಳಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ ಮತ್ತು ಹೃದಯಸಂಬಂಧಿ ಕಾಯಿಲೆಗಳಿಗೆ ಕಾರಣವಾಗಬಹುದು. ಹೆಚ್ಚಿನ ಕಾಲ ಡಿಜಿಟಲ್ ಉಪಕರಣಗಳ ಮುಂದೆ ಕುಳಿತುಕೊಂಡಾಗ ದೃಷ್ಟಿದೋಷದ ಸಮಸ್ಯೆಗಳು ಮತ್ತು ತಲೆನೋವು ಕಾಣಿಸಿಕೊಳ್ಳುತ್ತದೆ.

ಉದ್ಯೋಗದ ಕಾರಣದಿಂದ ಡಿಜಿಟಲ್ ಉಪಕರಣಗಳ ಮುಂದೆ ಹೆಚ್ಚಿನ ಕಾಲ ಕಳೆಯುವವರು ನಿಯಮಿತವಾಗಿ ವಿರಾಮವನ್ನು ತೆಗೆದುಕೊಂಡು, ಕಣ್ಣಿನ ಸ್ನಾಯುಗಳಿಗೆ ಸಂಬಂಧಿಸಿದ ಕೆಲವೊಂದು ವ್ಯಾಯಾಮಗಳನ್ನು ಮಾಡಬೇಕು. ತಮಗೆ ಬೆನ್ನುನೋವು ಕಾಣಿಸಿಕೊಳ್ಳದಂತೆ ತಾವು ಕುಳಿತಿರುವ ಭಂಗಿಯ ಕಡೆಗೆ ಗಮನ ಹರಿಸುವುದು ಉತ್ತಮ.

ಡಿಜಿಟಲ್ ಉಪಕರಣಗಳ ಜೊತೆ ಹೆಚ್ಚಿನ ಸಮಯ ಕಳೆಯುವುದು ಮಾನಸಿಕ ಆರೋಗ್ಯದ ಮೇಲೆ ಕೂಡ ಪ್ರಭಾವ ಬೀರಬಲ್ಲದು. ಈ ಉಪಕರಣಗಳನ್ನು ಹೆಚ್ಚು ಬಳಸುವವರಲ್ಲಿ ಖಿನ್ನತೆ, ಆತಂಕದ ಲಕ್ಷಣಗಳು ಹೆಚ್ಚಾಗಬಹುದು. ಡಿಜಿಟಲ್ ಅವಲಂಬನೆ ಹೆಚ್ಚಾಗುತ್ತಾ ಹೋದಂತೆ ಮುಖಾಮುಖಿ ಭೇಟಿಯಾಗಬಲ್ಲ ಸ್ನೇಹಿತರು ಮತ್ತು ಮನುಷ್ಯ ಸಂಬಂಧಗಳು ಕಡಿಮೆಯಾಗಬಹುದು. ಇದು ಮನುಷ್ಯನ ಮಾನಸಿಕ ಸಮತೋಲದ ಮೇಲೆಯೂ ಪ್ರಭಾವವನ್ನು ಬೀರಬಹುದು.

ಅಂತರ್ಜಾಲದಲ್ಲಿ ಜೂಜಾಡುವ ಚಟದಿಂದ ಹಿಡಿದು ಆನ್‌ಲೈನ್ ಮೋಸದ ಜಾಲಗಳ ತನಕ ಈ ವ್ಯಸನದ ಮನಃಸ್ಥಿತಿ ವಿಸ್ತಾರವಾಗಬಹುದು. ಯಾವುದೇ ಚಟಗಳಿಂದ ಮತ್ತು ಅತಿಯಾದ ಅವಲಂಬನೆಯಿಂದ ಹೊರಬರುವುದು ಸುಲಭವಲ್ಲ. ಡಿಜಿಟಲ್ ಪ್ರಪಂಚ ಮನುಷ್ಯನ ಬದುಕನ್ನು ಕೆಟ್ಟ ರೀತಿಯಲ್ಲಿ ಪ್ರಭಾವಿಸುತ್ತಿದೆಯೆಂಬ ಅರಿವು ಮೂಡುವಾಗ ಹೆಚ್ಚಿನ ಸಂದರ್ಭದಲ್ಲಿ ತಡವಾಗಿರುತ್ತದೆ. ಈ ಸುಳಿಯಿಂದ ಹೊರಬರಲು ಶಿಸ್ತಿನ ಜೀವನಕ್ರಮಕ್ಕೆ ಮರಳುವ ಅಗತ್ಯವಿರುತ್ತದೆ. ನಿರ್ದಿಷ್ಟವಾದ ಸಮಯದಲ್ಲಿ ಮಾತ್ರ ಡಿಜಿಟಲ್ ಉಪಕರಣವನ್ನು ಬಳಸುವ ವೇಳಾಪಟ್ಟಿಯನ್ನು ತಯಾರಿಸಿಕೊಳ್ಳಬೇಕು. ರಾತ್ರಿ ಮಲಗುವ ಎರಡು ಗಂಟೆಯ ಮೊದಲು ಅಥವಾ ನಿದ್ದೆಯಿಂದ ಎಚ್ಚರವಾದ ನಂತರ ಎರಡು ಗಂಟೆಗಳ ಕಾಲ ಎಲ್ಲಾ ಡಿಜಿಟಲ್ ಉಪಕರಣಗಳಿಂದ ಅಂತರ ಕಾಯ್ದುಕೊಳ್ಳುವುದು ಉತ್ತಮ. ಉತ್ತಮವಾಗಿ ನಿದ್ದೆಗೆ ಜಾರಲು ಕೂಡ ಈ ಅಭ್ಯಾಸ ಸಹಾಯಕಾರಿಯಾಗಬಲ್ಲದು. ಡಿಜಿಟಲ್ ಉಪಕರಣಗಳಿಂದ ಅಂತರ ಕಾಯ್ದುಕೊಳ್ಳಲು ಮನುಷ್ಯ ಇತರ ಆರೋಗ್ಯಕರ ಹವ್ಯಾಸಗಳತ್ತ ವಾಲುವುದು ಹೆಚ್ಚಿನ ಲಾಭವನ್ನು ತರಬಲ್ಲದು. ಪುಸ್ತಕಗಳು, ವ್ಯಾಯಾಮ ಮತ್ತು ಕ್ರೀಡೆಯು ಈ ಸಮಯವನ್ನು ಅತ್ಯಂತ ಹೆಚ್ಚು ಉಪಯುಕ್ತವಾಗಿ ತುಂಬಬಲ್ಲದು. ಇದರಿಂದ ಜೀವನಮಟ್ಟದ ಜೊತೆಗೆ ಆರೋಗ್ಯವೂ ಸುಧಾರಿಸುವುದು. ಡಿಜಿಟಲ್ ಉಪಕರಣಗಳಿಂದ ದೂರ ಹೋಗುವುದು ಮತ್ತು ಪರಿಸರದೊಂದಿಗೆ ಸಮಯ ಕಳೆಯುವುದು ಮನುಷ್ಯನ ಜೀವನಪ್ರೀತಿಯ ಜೊತೆಗೆ ಅವನ ಉತ್ಸಾಹವನ್ನೂ ಹೆಚ್ಚಿಸಬಲ್ಲದು. ಏಕಾಗ್ರತೆ ಮತ್ತು ಮಾನಸಿಕ ಸಮತೋಲನವನ್ನು ಹೆಚ್ಚಿಸುವಲ್ಲಿ ಕೂಡ ಇದು ಸಹಾಯಕಾರಿಯಾಗಬಲ್ಲದು.

ಡಿಜಿಟಲ್ ಪ್ರಪಂಚದ ಅವಲಂಬನೆ ಕಡಿಮೆ ಮಾಡಿಕೊಳ್ಳಲು ತಮ್ಮ ಸ್ಮಾರ್ಟ್‌ಫೋನನ್ನು ನಿಶ್ಶಬ್ದದ ಮಾದರಿಯಲ್ಲಿ ಇಡುವುದರ ಜೊತೆಗೆ ತಮಗೆ ಅಗತ್ಯವಿಲ್ಲದ ವೆಬ್‌ಸೈಟುಗಳನ್ನು ಬ್ಲಾಕ್ ಮಾಡಬಹುದು. ಹಂತ ಹಂತವಾಗಿ ಅವಲಂಬನೆಯನ್ನು ಕಡಿಮೆ ಮಾಡುತ್ತಾ ಬಂದು ಅಗತ್ಯವಿರುವ ವಿಚಾರಗಳಿಗಷ್ಟೆ ಡಿಜಿಟಲ್ ಉಪಕರಣಗಳನ್ನು ಬಳಸಬಹುದು. ತಮ್ಮ ಮಾನಸಿಕ ಶಕ್ತಿಯನ್ನು ಬಳಸಿ ಈ ಚಟದಿಂದ ಹೊರಬರಲು ಆಗದಿದ್ದವರು ಮನೋವೈದ್ಯರ ಮತ್ತು ಆಪ್ತಸಮಾಲೋಚಕರ ಸಹಾಯವನ್ನು ಪಡೆಯಬಹುದು. ಮಾದಕ ಪದಾರ್ಥ ಮತ್ತು ಮದ್ಯಪಾನದ ಚಟಗಳಿಂದ 'ಡಿಟಾಕ್ಸ್' ಆಗುವಂತೆ ಡಿಜಿಟಲ್ ಚಟಗಳಿಂದಲೂ 'ಡಿಟಾಕ್ಸ್' ಆಗುವುದರ ಅಗತ್ಯವಿದೆ. ❖

ಉಲ್ಲಾಸ ಮನಸ್ಸಿನ ಬೆಳಕು

• ರಘು ವಿ.

ಬದುಕು ಎಂದರೆ ಕೇವಲ ಕಾಲ ಕಳೆಯುವಿಕೆ ಅಲ್ಲ. ಅದು ಒಂದು ಪ್ರಯಾಣ – ಅಂತರಂಗದಿಂದ ಬಹಿರಂಗಕ್ಕೆ, ಎಂದರೆ ಜೀವನರಂಗಕ್ಕೆ ಚಲಿಸಿ ಜಗತ್ತಿನ ಮುಂದೆ ವ್ಯಕ್ತವಾಗುವ ಆಂತರಿಕ ಶಕ್ತಿಯ ಅಭಿವ್ಯಕ್ತಿ. ಇದರ ಮೂಲಇಂಧನ ಉಲ್ಲಾಸ. ಇದು ಮನಸ್ಸಿಗೆ ಪ್ರಜ್ವಲನೆಯನ್ನು ನೀಡುವ ಶಕ್ತಿ.

ಇಂದು ನಾವು ನೋಡುತ್ತಿರುವ ಧಾವಂತದ ಯುಗದಲ್ಲಿ ಬಹುಪಾಲು ಜನರು ಹೊರಗಿನಿಂದ ಸಂಭ್ರಮಿಸುತ್ತಿದ್ದಾರೆ. ಆದರೆ ಒಳಗೆ ಬಾಡಿದ್ದಾರೆ. ನೋವು, ವಿಫಲತೆ, ಅಥವಾ ಭಯದ ಭಾವನೆ – ಇವೆಲ್ಲವೂ ಜೀವನೋತ್ಸಾಹವನ್ನು ಕುಗ್ಗಿಸುತ್ತವೆ. ಇಂತಹ ಸಂದರ್ಭಗಳಲ್ಲಿ ಉಲ್ಲಾಸವೊಂದು ಔಷಧದಂತಿದೆ. ಉಲ್ಲಾಸವಿಲ್ಲದ ಮನಸ್ಸು, ಬುದ್ಧಿಯನ್ನು ಶಕ್ತಿಯುತವಾಗಿ ಬಳಸಲು ಸಾಧ್ಯವಾಗುವುದಿಲ್ಲ. ಬದುಕು ಉತ್ಸಾಹವಿಲ್ಲದೆ ಹೈರಾಣಾಗುತ್ತದೆ.

ನಿಜವಾದ ಚೈತನ್ಯ

ಉಲ್ಲಾಸ ಎಂದರೆ ಕೇವಲ ಖುಷಿ ಅಲ್ಲ; ಆನಂದವೂ ಅಲ್ಲ. ಅದು ಆನಂದದ ಮೂಲ. ಉಲ್ಲಾಸ ಎಂಬುದು ಸಕಾರಾತ್ಮಕ ಮನೋಭಾವ, ಆತ್ಮವಿಶ್ವಾಸದ ಬೆಳಕು, ಜೀವನವನ್ನು ಪ್ರೀತಿಸುವ ದೃಷ್ಟಿ. ಖಲೀಲ್ ಗಿಬ್ರಾನ್ ಈ ಶಕ್ತಿಯ ಮಹತ್ವವನ್ನು ಸ್ಪಷ್ಟವಾಗಿ ಹೇಳಿದ್ದಾನೆ: 'ಉತ್ಸಾಹವೆಂಬುದು ಜ್ವಾಲಾಮುಖಿ, ಅದರ ಮುಖದಲ್ಲಿ ಅನಿಶ್ಚಿತತೆ ಎಂಬ ಗರಿಕೆ ಬೆಳೆಯುವುದಿಲ್ಲ.' ಬದುಕೆಂಬ ತ್ರಿಭುಜದಲ್ಲಿ ಧ್ಯೇಯ, ಧೈರ್ಯ, ಉಲ್ಲಾಸಗಳು ಮೂರು ಮುಖಗಳಾಗಿ ನಮ್ಮನ್ನು ಬಿಂಬಿಸುತ್ತವೆ.

ಉಲ್ಲಾಸವಿಲ್ಲದ ಧೈರ್ಯ ಅರ್ಥಹೀನ. ಧೈರ್ಯವಿಲ್ಲದ ಧ್ಯೇಯ ನಿರ್ಜೀವ. ಉಲ್ಲಾಸವಿಲ್ಲದೆ ಸಾಗುವ ಜೀವನದ ಪಯಣ ಕಠಿಣವೂ ದುರ್ಬಲವೂ ಆಗುತ್ತದೆ. ಆದ್ದರಿಂದ ಜೀವನದಲ್ಲಿ ಉಲ್ಲಾಸವು ಆಳವಾದ ಶ್ರದ್ಧೆಯ ಮೂಲವಾಗಬೇಕು. ಇದು ದಾರಿ ತೋರಿಸುವ ದೀಪದಂತೆ ಕೆಲಸ ಮಾಡುತ್ತದೆ. ಗೀತೆಯ ಸಂದೇಶ: 'ಸಮತ್ವಂ ಯೋಗ ಉಚ್ಯತೇ'. ಸಮಚಿತ್ತತೆಯೆಂದರೆ ಮನಸ್ಸನ್ನು ಬದಲಾವಣೆಗಳಿಂದ ವಿಚಲಿತ ಮಾಡದ ಶಕ್ತಿ. ಆದರೆ ಈ ಸಮಚಿತ್ತತೆಯ ಹಿಂದಿರುವ ಶಕ್ತಿ ಉಲ್ಲಾಸ. 'ಅನಂದೋ ಭವತಿ ವಿಜ್ಞಾನಾತ್'– 'ಜ್ಞಾನದಿಂದ ಆನಂದ ಹುಟ್ಟುತ್ತದೆ' ಎಂಬ ಮಾತಿದೆ. ಜ್ಞಾನವನ್ನು ಜೀವನದಲ್ಲಿ ಸಚೇತನಗೊಳಿಸಲು ಬೇಕು ಉಲ್ಲಾಸ.

> ಉಲ್ಲಾಸವಿಲ್ಲದ ಧೈರ್ಯ ಅರ್ಥಹೀನ. ಧೈರ್ಯವಿಲ್ಲದ ಧ್ಯೇಯ ನಿರ್ಜೀವ. ಉಲ್ಲಾಸವಿಲ್ಲದೆ ಸಾಗುವ ಜೀವನದ ಪಯಣ ಕಠಿಣವೂ ದುರ್ಬಲವೂ ಆಗುತ್ತದೆ.

ಶ್ರೀರಾಮಕೃಷ್ಣರು ತೋರಿದ ಭಕ್ತಿ ಮಾರ್ಗದಲ್ಲಿ ಉಲ್ಲಾಸ ಒಂದು ಮೂಲಭೂತವಾದ ಅಂಶ. ಅಲ್ಲಿ ಪೂಜೆಯೂ ಸಂಭ್ರಮ, ಸಂತೋಷ. ದೇವರಲ್ಲಿ ಭಯವಲ್ಲ, ಪ್ರೇಮ ಇರಬೇಕು. ಆ ಪ್ರೀತಿಯಂತೆ ಹರಿಯುವ ನಗುವೇ – ನಿಜವಾದ ಉಲ್ಲಾಸ. ನಗುವಲ್ಲಿ ಭಕ್ತಿ ಇದೆ, ಉಲ್ಲಾಸವಿದೆ, ಪ್ರಜ್ಞೆಯ ಶುದ್ಧತೆ ಇದೆ.

ಕುಣಿಯೋಣು ಬಾ! ಬೇಂದ್ರೆಯವರ ಕನ್ನಡದ ಜನಪ್ರಿಯ 'ಕುಣಿಯೋಣು ಬಾ' ಗೀತೆಯಲ್ಲಿ ಬರುವ 'ಇದ್ದದ್ದು ಮರೆಯೋಣ, ಇಲ್ಲದ್ದು ತೆರೆಯೋಣ; ಹಾಲ್ಜೇನು ಸುರಿಯೋಣು, ಕುಣಿಯೋಣು ಬಾ!' ಈ ಸಾಲುಗಳು ಬದುಕಿನ ಸಂಭ್ರಮಕ್ಕೆ, ಸಾಕ್ಷಿ. ಅದು ಬದುಕಿನ ಉಲ್ಲಾಸವನ್ನು ಎತ್ತಿಹಿಡಿಯುತ್ತದೆ. ಜೀವನದ ಹಿಂದಿನ ನೋವನ್ನು ಮರೆಯುವ ಶಕ್ತಿ, ಹೊಸದನ್ನು ಮೆಚ್ಚುವ ಭಾವನೆ – ಇವೆರಡೂ ಉಲ್ಲಾಸದಿಂದಲೇ ಸಾಧ್ಯ.

ಬದುಕನ್ನು ಹಬ್ಬದಂತೆ ಮಾಡುವ ಸಂಕಲ್ಪಕ್ಕೆ ಈ ಪದ್ಯ ಆಮಂತ್ರಣ. ಇರುವ ನೋವನ್ನು ಮರೆತು, ಬರುವ ಭಾಗ್ಯಗಳ ನೆನೆದು, ಹಾಲಿಗೆ ಜೇನನ್ನು ಸುರಿದಂತೆ ನಾನು-ನೀನುಗಳು ಸೇರಿ ತಾನಾಗುವ ತನನನದ ಅನಾಹತವನ್ನು, ಪ್ರೇಮವೇ ದೇವರೆಂಬ ಓಂಕಾರವನ್ನು ಸಾಕ್ಷಾತ್ಕರಿಸಿಕೊಳ್ಳುವ ಜೀವರಸಬಿಂಬವನ್ನು ಈ ಪದ್ಯದಲ್ಲಿ ಕಾಣಬಹುದು. ಆದುದರಿಂದ, 'ಬಾ ಕುಣಿಯೋಣ' ಎನ್ನುತ್ತಾರೆ, ವರಕವಿ.

ಶಿಕ್ಷಣದಲ್ಲಿ

ಇಂದಿನ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಉದ್ಯೋಗಸ್ಥರಿಗೆ – ಎಲ್ಲರಿಗೂ ಕಾರ್ಯಕ್ಷಮತೆಯತ್ತ ಹೆಚ್ಚು ದೃಷ್ಟಿ ನೆಟ್ಟಿದೆ. ಬದುಕಿನ ಮೂಲಸತ್ವವೇ ಉಲ್ಲಾಸವೆನ್ನುವಾಗ ಶಿಕ್ಷಣದಲ್ಲಿ ಅದರ ಕೊರತೆಯನ್ನು ಸಹಿಸುವುದು ಹೇಗೆ? ತರಗತಿಗೊಬ್ಬ ಮಾನಸಿಕ ಸಲಹಾಗಾರರನ್ನು ನೇಮಿಸಿದರೂ ಪಠ್ಯದಲ್ಲಿ, ಪಾಠ ಮಾಡುವ ಕ್ರಮದಲ್ಲಿ ಉಲ್ಲಾಸ ಬೆರೆಯದಿದ್ದರೆ ಪ್ರಯೋಜನವಿಲ್ಲ. ನಕಾರಾತ್ಮಕ ಪಠ್ಯಗಳು, ನಕಾರಾತ್ಮಕ ವ್ಯಕ್ತಿಗಳು ಶಿಕ್ಷಣದ ಭಾಗವಾಗಬಾರದು. ಉಲ್ಲಾಸವಿಲ್ಲದ ಶಿಕ್ಷಣ ನಿರರ್ಥಕ. ಉಲ್ಲಾಸವಿಲ್ಲದ ಬೋಧನೆ ಒಣ ದನಿಯಂತೆ. ಒಂದು ನಗು, ಒಂದು ಶ್ಲೋಕ, ಒಂದು ಉತ್ಸಾಹದ ಕಣ್ಣಹೊಳಪು – ವಿದ್ಯಾರ್ಥಿಗಳ ಮನಸ್ಸಿಗೆ ಮುದ ನೀಡಬಹುದು. ತರಗತಿಯಲ್ಲಿ ಕನಿಷ್ಠ ಹದಿನೈದು ನಿಮಿಷಕ್ಕೊಮ್ಮೆ ನಗೆಯ ಬುಗ್ಗೆ ಏಳದಿದ್ದರೆ, ಗದ್ದಲ ಕೇಳಿಸದಿದ್ದರೆ ಅಲ್ಲಿ ಶಿಕ್ಷೆ ನಡೆಯುತ್ತಿದೆ, ಶಿಕ್ಷಣವಲ್ಲ ಎಂದು ತಿಳಿಯಬೇಕು.

ಹೊಸಹುಟ್ಟು

ಪ್ರತಿಯೊಂದು ಹಗಲೂ ಹೊಸಹುಟ್ಟು. ಉಲ್ಲಾಸದಿಂದ ಎದ್ದವನು ಗೆದ್ದ. ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡರೂ, ಉಲ್ಲಾಸವೊಂದನ್ನು ಉಳಿಸಿಕೊಂಡರೆ ಮನುಷ್ಯ ಮತ್ತೆ ಏಳಬಲ್ಲ. ಆದರೆ ಉಲ್ಲಾಸವಿಲ್ಲದೆ ಬೃಹತ್ ಸಂಪತ್ತು ಹೊಂದಿದ್ದರೂ ಅದು ನಿರರ್ಥಕ. ಬಾಳಿಗೆ ಉಲ್ಲಾಸ ಒಂದು ಅಗತ್ಯ ಆಹಾರ – ಆತ್ಮದ ತೃಪ್ತಿ, ಮನಸ್ಸಿನ ತಾಜಾ ಶಕ್ತಿ. ನಮ್ಮ ನಡೆ ಕುಣಿತವಾಗಬೇಕಾದರೆ ಮೊಗದಲ್ಲಿ ನಗು ಇರಬೇಕು, ನಗು ಇರಬೇಕಾದರೆ ಮನಸ್ಸಿನಲ್ಲಿ ಉಲ್ಲಾಸ ತುಂಬಿರಬೇಕು. ಜೀವನದ ಪ್ರತಿ ಕ್ರಿಯೆಯನ್ನು ಆನಂದಿಸಲು ಉಲ್ಲಾಸ ಬೇಕು; ಕೇವಲ ಪ್ರತಿಕ್ರಿಯಿಸಲು ಬರಡು ಮನಸ್ಸಿದ್ದರೆ ಸಾಕು. ಆಯ್ಕೆ ನಮ್ಮದು. ಬಾಳನ್ನು ನೃತ್ಯವಾಗಿಸಿ, ಮನಸ್ಸಿಗೆ ಉಲ್ಲಾಸ ನೀಡಿ, ನಗುವಿನ ನೆರಳು ಬೀರುವ ಉತ್ಸಾಹದ ಬೆಳಕನ್ನು ಹರಡೋಣ! ❖



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.2

3. ಕೆಳಗಿನ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ಆದೇಶ ವಿಧಾನದಿಂದ ಅವುಗಳ ಪರಿಹಾರಗಳನ್ನು ಕಂಡುಹಿಡಿಯಿರಿ.

(*vi*) ಐದು ವರ್ಷಗಳ ಬಳಿಕ ಜೇಕಬ್‌ರ ವಯಸ್ಸು ಅವರ ಮಗನ ವಯಸ್ಸಿನ ಮೂರರಷ್ಟಾಗುತ್ತದೆ. ಐದು ವರ್ಷಗಳ ಹಿಂದೆ ಜೇಕಬ್‌ರ ವಯಸ್ಸು ಅವರ ಮಗನ ವಯಸ್ಸಿನ ಏಳರಷ್ಟಿತ್ತು ಅವರಿಬ್ಬರ ಈಗಿನ ವಯಸ್ಸು ಎಷ್ಟು? ಆಗುವಂತೆ

ಪರಿಹಾರ:– ಜೇಕಬ್‌ನ ವಯಸ್ಸು x ಮತ್ತು ಅವನ ಮಗನ ವಯಸ್ಸು y ಆಗಿರಲಿ,

ಪ್ರಶ್ನೆಯ ಪ್ರಕಾರ

$(x + 5) = 3(y + 5)$

$x - 3y = 10$ .... (1)

$(x - 5) = 7(y - 5)$

$x - 7y = -30$ .... (2)

ಸಮೀಕರಣ (1) ರಿಂದ ನಾವು

$x = 3y + 10$ .... (3)

x ನ ಬೆಲೆಯನ್ನು ಸಮೀಕರಣ 2ರಲ್ಲಿ ಆದೇಶಿಸಿದಾಗ

$3y + 10 - 7y = -30$

$-4y = -40$

$y = 10$ .... (4)

yನ ಬೆಲೆಯನ್ನು ಸಮೀಕರಣ 3ರಲ್ಲಿ ಆದೇಶಿಸಿದಾಗ

$x = 3 \times 10 + 10 = 40$

ಆದ್ದರಿಂದ ಜೇಕಬ್‌ನ ಈಗಿನ ವಯಸ್ಸು 40 ವರ್ಷಗಳು ಮತ್ತು ಅವನ ಮಗನ ಈಗಿನ ವಯಸ್ಸು 10 ವರ್ಷಗಳು

ವರ್ಜಿಸುವ ವಿಧಾನ:

ಚರಾಕ್ಷರವನ್ನು ವರ್ಜಿಸುವ (ಅಂದರೆ ರದ್ದುಗೊಳಿಸುವ) ಮತ್ತೊಂದು ವಿಧಾನವನ್ನು ನಾವೀಗ ನೋಡೋಣ. ಇದು ಕೆಲವೊಮ್ಮೆ ಆದೇಶ ವಿಧಾನಕ್ಕಿಂತ ಹೆಚ್ಚು ಅನುಕೂಲಕರವಾಗಿದೆ. ಈ ವಿಧಾನವು ಹೇಗೆ ಕಾರ್ಯನಿರ್ವಹಿಸುತ್ತದೆಂದು ನೋಡೋಣ.

1) ಇಬ್ಬರು ವ್ಯಕ್ತಿಗಳ ಆದಾಯಗಳ ಅನುಪಾತ 9:7 ಮತ್ತು ಅವರ ಖರ್ಚುಗಳ ಅನುಪಾತ 4:3 ಪ್ರತಿಯೊಬ್ಬರು ಕೂಡಾ ತಿಂಗಳಿಗೆ ₹ 2000 ಉಳಿತಾಯ ಮಾಡಿದರೆ ಅವರ ಮಾಸಿಕ ಅದಾಯವನ್ನು ಕಂಡುಹಿಡಿಯಿರಿ.

ಪರಿಹಾರ: ಇಬ್ಬರು ವ್ಯಕ್ತಿಗಳ ಆದಾಯವನ್ನು ₹ $9x$ ಮತ್ತು ₹ $7x$ ನಿಂದಲೂ ಖರ್ಚುಗಳನ್ನು ಕ್ರಮವಾಗಿ ₹ 4y ಮತ್ತು ₹ 3y ಯಿಂದಲೂ ಸೂಚಿಸೋಣ. ಆಗ ದೊರೆಯುವ ಸಮೀಕರಣಗಳೆಂದರೆ,

$9x - 4y = 2000$ .... (1)

ಮತ್ತು $7x - 3y = 2000$............... (2)

ಹಂತ 1: ಸಮೀಕರಣ (1)ನ್ನು 3 ರಿಂದಲೂ, ಸಮೀಕರಣ (2)ನ್ನು 4 ರಿಂದಲೂ ಗುಣಿಸಿ, y ಯ ಸಹಗುಣಕಗಳನ್ನು ಸಮಾನಗೊಳಿಸಿ. ಈಗ ಸಿಗುವ ಸಮೀಕರಣಗಳೆಂದರೆ,

$27x - 12y = 6000$ .... (3)

$28x - 12y = 8000$ ....(4)

ಹಂತ 2: y ಯನ್ನು ವರ್ಜಿಸಲು ಸಮೀಕರಣ (3)ನ್ನು ಸಮೀಕರಣ (4) ರಿಂದ ಕಳೆಯಿರಿ, ಯಾಕೆಂದರೆ, y ಯ ಸಹಗುಣಕಗಳು ಒಂದೇ ಆಗಿವೆ.

$(28x - 27x) - (12y + 12y) = 8000 - 6000$

ಅಂದರೆ, $x = 2000$

ಹಂತ 3: x ನ ಈ ಬೆಲೆಯನ್ನು ಸಮೀಕರಣ (1)ರಲ್ಲಿ ಆದೇಶಿಸಿದಾಗ

$9(2000) - 4y = 2000$

ಅಂದರೆ, $y = 4000$

ಹೀಗೆ, $x = 2000$, $y = 4000$ ಎಂಬುದು ಸಮೀಕರಣಗಳಿಗೆ ಪರಿಹಾರ. ಆದ್ದರಿಂದ, ಆ ಇಬ್ಬರು ವ್ಯಕ್ತಿಗಳ ಮಾಸಿಕ ಆದಾಯಗಳು ₹ 18000 ಮತ್ತು ₹ 14000.

2) ವರ್ಜಿಸುವ ವಿಧಾನವನ್ನು ಉಪಯೋಗಿಸಿ, ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗೆ, ಸಾಧ್ಯವಿರುವ ಎಲ್ಲಾ ಪರಿಹಾರಗಳನ್ನು ಕಂಡುಹಿಡಿಯಿರಿ.

$2x + 3y = 8$.................(1)

$4x + 6y = 7$ .... (2)

ಪರಿಹಾರ:

ಹಂತ 1: ಸಮೀಕರಣ (1)ನ್ನು 2 ರಿಂದಲೂ, ಸಮೀಕರಣ (2)ನ್ನು 1 ರಿಂದಲೂ ಗುಣಿಸಿ, x ನ ಸಹಗುಣಕಗಳನ್ನು ಸಮಗೊಳಿಸಿರಿ. ಈಗ ನಮಗೆ ಸಿಗುವ ಸಮೀಕರಣಗಳೆಂದರೆ,

$4x + 6y = 16$ .... (3)

$4x + 6y = 7$ .... (4)

ಹಂತ 2: ಸಮೀಕರಣ (3)ರಿಂದ ಸಮೀಕರಣ (4)ನ್ನು ಕಳೆದಾಗ,

$(4x - 4x) + (6y - 6y) = 16 - 7$

ಅಂದರೆ, $0 = 9$

ಇದೊಂದು ಅಸಂಬದ್ಧ ಹೇಳಿಕೆ. ಆದ್ದರಿಂದ ಸಮೀಕರಣಗಳ ಜೋಡಿಗೆ ಪರಿಹಾರವಿಲ್ಲ.

3) ಎರಡಂಕೆಗಳ ಒಂದು ಸಂಖ್ಯೆಗೆ ಅದರ ಅಂಕೆಗಳನ್ನು ಪರಸ್ಪರ ಬದಲಾಯಿಸಿದಾಗ ಸಿಗುವ ಇನ್ನೊಂದು ಸಂಖ್ಯೆಯನ್ನು ಕೂಡಿದಾಗ ದೊರೆಯುವ ಮೊತ್ತ 66. ಆ ಸಂಖ್ಯೆಗಳ ಅಂಕೆಗಳಿಗಿರುವ ವ್ಯತ್ಯಾಸವು 2 ಆಗಿದ್ದರೆ, ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ. ಇಂತಹ ಎಷ್ಟು ಸಂಖ್ಯೆಗಳಿವೆ?

ಪರಿಹಾರ: ಮೊದಲನೇ ಸಂಖ್ಯೆಯಲ್ಲಿ ಹತ್ತರ ಸ್ಥಾನ ಮತ್ತು ಬಿಡಿ ಸ್ಥಾನದಲ್ಲಿರುವ ಅಂಕೆಗಳು ಕ್ರಮವಾಗಿ x ಮತ್ತು y ಎಂದಿರಲಿ. ಆದ್ದರಿಂದ ಮೊದಲನೇ ಸಂಖ್ಯೆಯನ್ನು ವಿಸ್ತಾರ ರೂಪದಲ್ಲಿ $10x + y$ ಎಂದು ಬರೆಯಬಹುದು [ಉದಾಹರಣೆಗೆ 56 = 10(5) + 6] ಅಂಕೆಗಳನ್ನು ಅದಲು ಬದಲು ಮಾಡಿದಾಗ, x ಬಿಡಿಸ್ಥಾನದ ಅಂಕೆಯಾಗುತ್ತದೆ ಮತ್ತು y ಹತ್ತರ ಸ್ಥಾನದ ಅಂಕೆಯಾಗುತ್ತದೆ. ಈ ಸಂಖ್ಯೆಯು ವಿಸ್ತಾರ ರೂಪದಲ್ಲಿ $10y + x$ ಆಗುತ್ತದೆ. [ಉದಾಹರಣೆಗೆ 56ರ ಅಂಕೆಗಳನ್ನು ಅದಲು ಬದಲು ಮಾಡಿದಾಗ, 65=10(6)+5 ಎಂದಾಗುತ್ತದೆ].

ದತ್ತ ನಿಬಂಧನೆಗೆ ಅನುಸಾರವಾಗಿ,

$(10x + y) + (10x + y) = 66$

ಅಂದರೆ, $11(x + y) = 66$

ಅಂದರೆ, $x + y = 6$............... (1)

ಅಂಕೆಗಳ ನಡುವೆ ಇರುವ ವ್ಯತ್ಯಾಸವು 2 ಎನ್ನಲಾಗಿದೆ. ಆದ್ದರಿಂದ,

$x - y = 2$............... (2)

ಅಥವಾ $y - x = 2$............... (3)

(ಮುದುವರೆಯುವುದು)

MATHS

DIFFERENTIABILITY

7) Differentiate $\sqrt{\log x}$ w.r.t 'x'.

Soln: - Let $y = \sqrt{\log x}$

$$\frac{dy}{dx} = \frac{d}{dx}\frac{1}{2\sqrt{\log x}}.\frac{d}{dx}(\log x)$$

$$= \frac{1}{2\sqrt{\log x}}.\frac{1}{x} = \frac{1}{2x\sqrt{\log x}}$$

8) Differentiate $\cos(2x^{\circ})$ w.r.t x

Soln: - Let $y = \cos(2x^{\circ})$

we have $(2x^{\circ}) = \left(\frac{\pi x}{90}\right)^c$

$$\frac{dy}{dx} = -\sin\left(\frac{\pi x}{90}\right).\frac{d}{dx}\left(\frac{\pi x}{90}\right) = -\frac{\pi}{90}\sin\left(\frac{\pi x}{90}\right)$$

9) Differentiate $\sqrt{\operatorname{cosec}^{-1}x}$ w.r.t 'x'.

Soln: - Let $y = \sqrt{\operatorname{cosec}^{-1}x}$

$$\frac{dy}{dx} = \frac{1}{2\sqrt{\operatorname{cosec}^{-1}x}}.\frac{d}{dx}(\operatorname{cosec}^{-1}x)$$

$$= \frac{1}{2\sqrt{\operatorname{cosec}^{-1}x}}.\frac{-1}{x\sqrt{x^2-1}}$$

$$= \frac{-1}{2x\sqrt{x^2-1}\sqrt{\operatorname{cosec}^{-1}x}}$$

10) Differentiate 10^x w.r.t 'x'.

Soln: - Let $y = 10^x$

Taking logarithms on both sides

$\log_e y = \log_e(10^x) = x\log_e 10$

$$\frac{d}{dx}(\log_e y) = \frac{d}{dx}(x\log_e 10)$$

$$\frac{1}{y}.\frac{dy}{dx} = \log_e 10.1$$

$$\frac{dy}{dx} = y\log_e 10.1$$

$$\therefore \frac{dy}{dx} = 10^x.\log_e 10$$

11) $x^2 + y^2 = a^2$

Soln: - **Given that** $x^2 + y^2 = a^2$

differentiating both sides w.r.t x, we have

$$\frac{d}{dx}(x^2) + \frac{d}{dx}(y^2) = \frac{d}{dx}(a^2)$$

$$2x + 2y\frac{dy}{dx} = 0$$

$$2y\frac{dy}{dx} = -2x$$

$$\therefore \frac{dy}{dx} = -\frac{x}{y}$$

12) $x = \cos t$; $y = \sin 2t$

Soln: - $x = \cos t$ and $y = \sin 2t$

$$\frac{dx}{dt} = -\sin t \text{ and } \frac{dy}{dt} = 2\cos 2t$$

$$\therefore \frac{dy}{dx} = \frac{2\cos 2t}{-\sin t}$$

13) If $y = x^2(2x^3 - 1)$; find y_2

Soln:- Given that $y = x^2(2x^3 - 1)$

$y = 2x^5 - x^2$

$y_1 = 10x^4 - 2x$ & $y_2 = 40x^3 - 2$

14) If $y = \frac{3x}{x+1}$ find $\frac{d^2y}{dx^2}$.

Soln: - Given $y = \frac{3x}{x+1}$

$$\frac{dy}{dx} = \frac{(x+1)3 - 3x(1)}{(x+1)^2} = \frac{3(x+1-x)}{(x+1)^2}$$

$$\Rightarrow \frac{dy}{dx} = 3(x+1)^{-2}$$

$$\frac{d^2y}{dx^2} = 3(-2)(x+1)^{-3}.1 = -\frac{6}{(x+1)^3}$$

15) State the geometric meaning of $\frac{dy}{dx}$ with reference to a curve $y = f(x)$.

Soln: - $\frac{dy}{dx}$ **represents the slope of the tangent to the curve** $y = f(x)$ **at the point p(x, y).**

16) Find the slope of the tangent for the curve $y = x^3$ at the point $(2, 8)$

Soln: - Given $y = x^3$

we have $\frac{dy}{dx} = 3x^2$

$$\Rightarrow \therefore \left(\frac{dy}{dx}\right)_{(2,\ 8)} = 3(2)^2 = 12$$

$\therefore$ Slope = 12

17) What is the Derivative of Function of a function (Composite function)?

Soln:- Derivative of Function of a function (Composite function) is given by - Chain rule

If y is a function of u, u is a function of x then -

$$\frac{dy}{dx} = \frac{dy}{du}.\frac{du}{dx}$$

18) Differentiate $\cot^3\left(\frac{x}{2}\right)$ w.r.t 'x'

Soln :– Let $y = \cot^3\left(\frac{x}{2}\right) = \left[\cot^3\left(\frac{x}{2}\right)\right]^3$

$$\frac{dy}{dx} = \frac{d}{dx}\left[\cot\left(\frac{x}{2}\right)\right]^3 = 3\cot^2\left(\frac{x}{2}\right).\frac{d}{dx}\left[\cot\left(\frac{x}{2}\right)\right]$$

$$= 3\cot^2\left(\frac{x}{2}\right)\left[-\operatorname{cosec}^2\left(\frac{x}{2}\right)\right]\frac{d}{dx}\left(\frac{x}{2}\right)$$

$$= -3\cot^2\left(\frac{x}{2}\right)\operatorname{cosec}^2\left(\frac{x}{2}\right).\frac{1}{2}$$

$$= -\frac{3}{2}\cot^2\left(\frac{x}{2}\right)\operatorname{cosec}^2\left(\frac{x}{2}\right)$$

ಅಂಧರಿಗೆ ಬೇಕು 'ಶೂನ್ಯ' ಟಿಕೆಟ್

ಕೆಎಸ್‌ಆರ್‌ಟಿಸಿಯ ವ್ಯವಸ್ಥೆ ನಗರ ಸಾರಿಗೆಗೂ ಇರಲಿ ಎಂಬ ಆಶಯ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಯಾವ ಊರಿಗೆ ಯಾವ ಬಸ್‌ನಲ್ಲಿ ತೆರಳಿರುವುದು ಎಂಬ ಸ್ಪಷ್ಟ ಮಾಹಿತಿಯನ್ನು ಸಂಪೂರ್ಣ ದೃಷ್ಟಿದೋಷ ಇರುವ ಪ್ರಯಾಣಿಕರೂ ತಿಳಿದುಕೊಳ್ಳುವುದಕ್ಕಾಗಿ, ಯಾವುದೇ ತೊಂದರೆಗಳು ಉಂಟಾದಾಗ ಅಧಿಕಾರಿಗಳ ಗಮನಕ್ಕೆ ತರುವುದಕ್ಕಾಗಿ ಬಿಎಂಟಿಸಿ ಬಸ್‌ಗಳಲ್ಲಿಯೂ ಅಂಥ ಪ್ರಯಾಣಿಕರಿಗೆ '0' ಟಿಕೆಟ್ ವ್ಯವಸ್ಥೆ ಬೇಕಾಗಿದೆ.

'ನಡೆದಾಡಲು ನಮಗೆ ಊರುಗೋಲಿನಂತೆ ಸಹಾಯ ಮಾಡುವ ಸ್ಟಿಕ್ (ಅಂಧರ ಬಳಕೆಗಾಗಿಯೇ ಇರುವ ಕೋಲು) ಅನ್ನು ತಪ್ಪಿ ಯಾವುದಾದರೂ ಬಸ್‌ನಲ್ಲಿ ಬಿಟ್ಟು ಬಂದರೆ ಆ ನಂತರ ಯಾವ ಬಸ್ ಎಂಬುದೇ ಗೊತ್ತಾಗುವುದಿಲ್ಲ. ಸ್ಟಿಕ್ ಇಲ್ಲದೇ ನಾವು ನಡೆಯುವುದೂ ಕಷ್ಟ. ಇದೇ ರೀತಿ ಹೆಚ್ಚು ಲಗೇಜ್‌ಗಳಿದ್ದರೆ ಯಾವುದಾದರೂ ಲಗೇಜ್ ಮರೆತು ಬಂದರೂ ಹೀಗೇ ಆಗುತ್ತದೆ. ಸುಲಭದಲ್ಲಿ ಪತ್ತೆ ಹಚ್ಚಲು ಬಸ್ ವಿವರ ನಮ್ಮಲ್ಲಿರಬೇಕು. ಪಾಸ್ ಇರುವುದರಿಂದ ಯಾವ ಬಸ್‌ನಲ್ಲಿ ಹೋಗಿದ್ದೇವೆ ಎಂಬ ಮಾಹಿತಿ ಇರುವುದಿಲ್ಲ. ಅದಕ್ಕಾಗಿ '0' ಟಿಕೆಟ್ ವ್ಯವಸ್ಥೆಯನ್ನು ಬಿಎಂಟಿಸಿ ಬಸ್‌ಗಳಲ್ಲಿ ಜಾರಿಗೊಳಿಸಬೇಕು' ಎಂದು ನ್ಯಾಷನಲ್ ಫೆಡರೇಷನ್ ಆಫ್ ಬ್ಲೈಂಡ್‌ನ ರಾಜ್ಯ ಯುವ ಘಟಕದ ಕಾರ್ಯದರ್ಶಿ ವೀರೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬಸ್ ಚಾಲಕರು ಅಥವಾ ನಿರ್ವಾಹಕರಲ್ಲಿ ಈ ಬಸ್ ಎಲ್ಲಿಗೆ ಹೋಗುತ್ತದೆ ಎಂದು ನಾವು ಕೇಳಿದಾಗ ಕೆಲವು ಬಾರಿ ಸರಿಯಾಗಿ ಮಾಹಿತಿ ನೀಡುವುದಿಲ್ಲ. ಬಸ್ ನಿಲ್ದಾಣದಲ್ಲಿರುವ ಇತರ ಪ್ರಯಾಣಿಕರನ್ನು ಕೇಳಿ ಬಸ್ ಹತ್ತಬೇಕಾಗುತ್ತದೆ. ಅಂಥ ಬಸ್‌ಗಳಲ್ಲಿ '0' ಟಿಕೆಟ್ ನಮಗೆ ಸಿಕ್ಕಿದರೆ ಯಾವ ಬಸ್‌ನ ಸಿಬ್ಬಂದಿ ಸರಿಯಾಗಿ ಮಾಹಿತಿ ನೀಡಿಲ್ಲ ಎಂಬುದನ್ನು ಅವರ ಮೇಲಧಿಕಾರಿಗಳಿಗೆ ತಿಳಿಸಲು ಸುಲಭವಾಗುತ್ತದೆ. ನಮ್ಮ ಹತ್ತಿರ ಸಣ್ಣ ದಾಖಲೆ ಇದೆ ಎಂದು ಗೊತ್ತಾದರೂ ಸೌಜನ್ಯಯುತವಾಗಿ ನಡೆದುಕೊಳ್ಳುತ್ತಾರೆ' ಎಂಬುದು ಅವರ ವಿವರಣೆ.

'ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ '0' ಟಿಕೆಟ್ ನೀಡುವ ವ್ಯವಸ್ಥೆ ಇದೆ. ಅದನ್ನೇ ಇಲ್ಲೂ ಅಳವಡಿಸಬೇಕು. ಅವರಲ್ಲಿರುವ ಎಲೆಕ್ಟ್ರಿಕ್ ಟಿಕೆಟ್ ಮಷಿನ್‌ನಲ್ಲಿ (ಇಟಿಎಂ) ಇದೊಂದು ಆಯ್ಕೆಯನ್ನು ಸೇರಿಸಬೇಕು. ಈಗಾಗಲೇ 'ಶಕ್ತಿ' ಯೋಜನೆಯಡಿ ಸಂಚರಿಸುವ ಮಹಿಳೆಯರಿಗೆ '0' ಟಿಕೆಟ್ ನೀಡುತ್ತಿದ್ದಾರೆ. ಅದರಂತೆ ನಮಗೂ ನೀಡಬೇಕು' ಎಂದು ಸಂಪೂರ್ಣ ಅಂಧತ್ವ ಇರುವ ಮಹೇಶ್ ತಿಳಿಸಿದರು.

ಚರ್ಚಿಸಿ ನಿರ್ಧಾರ: ರಾಮಲಿಂಗಾರೆಡ್ಡಿ


ರಾಮಲಿಂಗಾ ರೆಡ್ಡಿ

ಪೂರ್ಣ ಅಂಧತ್ವ ಹೊಂದಿರುವವರಿಗೆ ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಪಾಸ್ ನೀಡಲಾಗಿದೆ. '0' ಟಿಕೆಟ್ ನೀಡುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

ನಗರದ ಒಳಗೆ ಸಂಚರಿಸುವ ಬಸ್‌ಗಳಲ್ಲಿ ಧ್ವನಿ ಬಿತ್ತರ ವ್ಯವಸ್ಥೆ ಮಾಡಬಹುದು. ಆದರೆ, ದೂರದ ಊರಿಗೆ ಸಂಚರಿಸುವ ಬಸ್‌ಗಳಲ್ಲಿ ಕಷ್ಟ. ಬೆಂಗಳೂರಿನಲ್ಲಿ ಬಿಎಂಟಿಸಿಯಲ್ಲಿ ಈ ವ್ಯವಸ್ಥೆ ಇದೆ. ಮೈಸೂರು ನಗರದ ಒಳಗೆ ಸಂಚರಿಸುವ ಕೆಎಸ್‌ಆರ್‌ಟಿಸಿಯ 200 ಬಸ್‌ಗಳಲ್ಲಿ 'ಧ್ವನಿ ಸ್ಪಂದನ' ವ್ಯವಸ್ಥೆ ಅಳವಡಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

'ಕೆಎಸ್‌ಆರ್‌ಟಿಸಿಯಲ್ಲಿ ಸ್ಥಳ ಘೋಷಣೆ ಬೇಕು'


ವೀರೇಶ್


ಮಹೇಶ್

ಬಿಎಂಟಿಸಿ ಬಸ್, ನಮ್ಮ ಮೆಟ್ರೊಗಳಲ್ಲಿ ನಿಲ್ದಾಣಗಳ ಮಾಹಿತಿಯನ್ನು ನಿಲ್ದಾಣ ಹತ್ತಿರ ಬಂದಾಗ ಉದ್ಘೋಷಿಸಲಾಗುತ್ತಿದೆ. ಇದು ಅಂಧರಿಗೆ ಬಹಳ ಉಪಯೋಗವಾಗಿದೆ. ಇದೇ ಮಾದರಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿಯೂ ಸ್ಥಳಗಳ ಮಾಹಿತಿಯ ಧ್ವನಿ ಬಿತ್ತರ ವ್ಯವಸ್ಥೆ ಬೇಕು ಎಂದು ವೀರೇಶ್ ಮತ್ತು ಮಹೇಶ್ ಒತ್ತಾಯಿಸಿದರು.

'ಕೆಂಪೇಗೌಡ ಬಡಾವಣೆ ಭೂಸ್ವಾಧೀನ ಕೈಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ವಾಪಸ್ ನೀಡುವಂತೆ ಯಶವಂತಪುರ ಹೋಬಳಿಯ ಸ್ಕಂದ ನಗರ ನಿವಾಸಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಮಾಡಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಕೊಡಿಗೆಹಳ್ಳಿಯ ಸರ್ವೆ ನಂ. 53/6ಪಿ ನಲ್ಲಿರುವ ಸ್ಕಂದ ನಗರದಲ್ಲಿ 50ಕ್ಕೂ ಹೆಚ್ಚು ಕುಟುಂಬಗಳು 20 ವರ್ಷಗಳಿಂದ ವಾಸವಿದ್ದು, ನಿಯಮಿತವಾಗಿ ತೆರಿಗೆ ಪಾವತಿಸುತ್ತಿವೆ.

'ಕೊಡಿಗೆಹಳ್ಳಿಯ ಸರ್ವೆ ನಂಬರ್ 53/6 ಪಿ ನಲ್ಲಿ ರಚಿಸಲಾದ ಕಂದಾಯ ನಿವೇಶನಗಳನ್ನು ಉಳ್ಳಾಲು ಗಾಳಪ್ಪ ಮತ್ತು ಅವರ ಕುಟುಂಬದಿಂದ 2006ರಲ್ಲಿ ಕ್ರಯಪತ್ರದ ಮೂಲಕ ಖರೀದಿಸಿ, ಪಂಚಾಯಿತಿಯಿಂದ ಖಾತೆ ಪಡೆದುಕೊಳ್ಳಲಾಗಿತ್ತು. ಮನೆ ಕಟ್ಟಿಕೊಂಡು, ನೀರು, ವಿದ್ಯುತ್ ಸಂಪರ್ಕ, ರಸ್ತೆ ಸೌಲಭ್ಯ ಕಲ್ಪಿಸಲಾಗಿದೆ. ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿಗೆ ತೆರಿಗೆಯನ್ನೂ ಪಾವತಿಸಲಾಗುತ್ತಿದೆ' ಎಂದು ನಿವಾಸಿ ರಾಜಣ್ಣ ತಿಳಿಸಿದ್ದಾರೆ.

'2008ರಲ್ಲಿ ಬಿಡಿಎ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿತು. ಆಗಿನಿಂದಲೂ ಮನೆ ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದೇವೆ. ಈ ಸಂಬಂಧ ನ್ಯಾಯಾಲಯದ ಮೊರೆ ಹೋಗಲಾಯಿತು. ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು, ನಿವೇಶನಗಳನ್ನು ನಿಯಮಿತಗೊಳಿಸಿ, ಖಾತೆ ನೀಡುವಂತೆ ಹೈಕೋರ್ಟ್ ಬಿಡಿಎಗೆ ಆದೇಶ ನೀಡಿತು' ಎಂದು ತಿಳಿಸಿದ್ದಾರೆ.

'ಕೋರ್ಟ್ ಆದೇಶದ ಮೇಲೆ ಬಿಡಿಎ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಹಾಗಾಗಿ 2024ರಲ್ಲಿ ಮತ್ತೆ ಹೈಕೋರ್ಟ್ ಮೊರೆ ಹೋದ ಸಂದರ್ಭದಲ್ಲಿ, ನಾಲ್ಕು ತಿಂಗಳೊಳಗಾಗಿ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು, ಖಾತೆ ನೀಡುವಂತೆ ಆದೇಶ ನೀಡಿದೆ. ನ್ಯಾಯಾಲಯದ ಆದೇಶದ ಪ್ರತಿಯನ್ನು ಬಿಡಿಎ ಕಚೇರಿಗೆ ಸಲ್ಲಿಸಲಾಗಿದೆ. ಮನವಿ ಸ್ವೀಕರಿಸಿ, ಹಿಂಬರಹ ಕೊಟ್ಟಿದ್ದಾರೆ. ಆದರೆ, ಈವರೆಗೂ ಪ್ರಕ್ರಿಯೆ ಆರಂಭಿಸಿಲ್ಲ' ಎಂದು ನಿವಾಸಿ ಎಸ್‌.ಕೆ.ನಾಗರತ್ನ ಬೇಸರ ವ್ಯಕ್ತಪಡಿಸಿದರು.

'ಈ ನಡುವೆ, ನಿವೇಶನಗಳನ್ನು ರಚಿಸಿ ಮಾರಾಟ ಮಾಡಿದ ಜಮೀನಿಗೂ ಗಾಳಪ್ಪ ಅವರ ಕುಟುಂಬವು ಬಿಡಿಎಯಿಂದ 2022ರಲ್ಲಿ ಪರಿಹಾರ ಹಾಗೂ ಬದಲಿ ನಿವೇಶನಗಳನ್ನು ಪಡೆದುಕೊಂಡಿದೆ. ಇದು ಅಕ್ರಮ. ಗಾಳಪ್ಪ ಅವರಿಂದ ಜಮೀನು ಖರೀದಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಇವೆ. ಆದರೆ, ನಿವೇಶನ ಖರೀದಿಸಿದವರ ಅಹವಾಲುಗಳನ್ನು ಅಧಿಕಾರಿಗಳು ಆಲಿಸಿಲ್ಲ' ಎಂದು ಅಳಲು ತೋಡಿಕೊಂಡರು.

'ನ್ಯಾಯ ಬದ್ಧವಾಗಿ ನಿವೇಶನ ಖರೀದಿಸಿ, ಮನೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದೇವೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಿಡಿಎಗೆ ಹಾಜರು ಪಡಿಸಲಾಗಿದೆ ಪ್ರಾಧಿಕಾರದ ಅಧಿಕಾರಿಗಳು ತಕ್ಷಣ ನ್ಯಾಯಾಲಯದ ಆದೇಶ ಪಾಲಿಸಬೇಕು. ಅಭಿವೃದ್ಧಿ ಶುಲ್ಕ ಪಡೆದುಕೊಂಡು, ಖಾತೆ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಕಸಾಪ ಉಳಿಸಿ ಜಾಗೃತಿ ಸಮಾವೇಶ ಆ. 3ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದ ಕನ್ನಡ ನಾಡು ನುಡಿ ಜಾಗೃತಿ ಸಮಿತಿಯಿಂದ ಆಗಸ್ಟ್ 3ರಂದು ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ಪುರಭವನದಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಉಳಿಸಿ ಜಾಗೃತಿ ಸಮಾವೇಶ' ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸಂಚಾಲಕರಾದ ಎಸ್‌.ಜಿ. ಸಿದ್ಧರಾಮಯ್ಯ, ಜಯಪ್ರಕಾಶಗೌಡ, ಮಾವಳ್ಳಿ ಶಂಕರ್, ಸುನಂದಾ ಜಯರಾಮ್, 'ಕನ್ನಡದ ಕಲೆ, ಸಾಹಿತ್ಯ, ಸಂಸ್ಕೃತಿ, ಜನಪದಗಳ ಬಲವರ್ಧನೆಗೆ ಸ್ಥಾಪನೆಗೊಂಡಿದ್ದ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಈಗ ಸರ್ವಾಧಿಕಾರ ಹಾಗೂ ಭ್ರಷ್ಟಾಚಾರದ ಕೂಪವಾಗಿದೆ' ಎಂದು ದೂರಿದರು.

'ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷರು ಆಡಳಿತಾತ್ಮಕವಾಗಿ ಸಂವಿಧಾನ ವಿರೋಧಿ ನೀತಿಯನ್ನು ಅನುಸರಿಸುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದ್ದಾರೆ. ಆಡಳಿತ ಮಂಡಳಿಯ ಚುನಾಯಿತ ಪ್ರತಿನಿಧಿಗಳನ್ನು ಹೆದರಿಸಿ, ಬೆದರಿಸಿ, ಅವರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆ. ನಾಮ ನಿರ್ದೇಶಿತ ಸದಸ್ಯರ ಸಂಖ್ಯೆ ಹೆಚ್ಚಿಸಿಕೊಂಡು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಪರಿಷತ್ತಿನ ಅಧ್ಯಕ್ಷರ ದುರಾಡಳಿತದ ವಿರುದ್ಧ ಪ್ರತಿಯೊಬ್ಬರೂ ಗಟ್ಟಿಯಾಗಿ ನಿಲ್ಲಬೇಕಾಗಿದೆ' ಎಂದರು.

ಕಾನೂನುಬಾಹಿರ ಚಿಕಿತ್ಸೆ; ಚರ್ಮರೋಗ ತಜ್ಞರ ಮನವಿ

ನಕಲಿ ವೈದ್ಯರ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ


ಚರ್ಮರೋಗ ತಜ್ಞರು ಡಾ. ಶರಣಪ್ರಕಾಶ ಪಾಟೀಲ ಅವರ ಜತೆಗೆ ಚರ್ಚಿಸಿದರು

ಬೆಂಗಳೂರು: 'ಕೆಲ ದಂತವೈದ್ಯರು ಹಾಗೂ ನಕಲಿ ವೈದ್ಯರು ಕಾನೂನು ಬಾಹಿರವಾಗಿ ಚರ್ಮದ ಚಿಕಿತ್ಸೆ, ಕೂದಲು ಕಸಿ ಮತ್ತು ಸೌಂದರ್ಯ ಚಿಕಿತ್ಸೆಗಳನ್ನು ಒದಗಿಸುತ್ತಿದ್ದು, ಅವರ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಚರ್ಮರೋಗ ತಜ್ಞರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಭಾರತೀಯ ಚರ್ಮ, ಲೈಂಗಿಕ ಮತ್ತು ಕುಷ್ಠ ರೋಗ ತಜ್ಞರ ಸಂಘದ (ಐಎಡಿವಿಎಲ್) ಕರ್ನಾಟಕ ಶಾಖೆಯ ಪ್ರತಿನಿಧಿಗಳ ನಿಯೋಗವು ಇಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರನ್ನು ಭೇಟಿ ಮಾಡಿ, ಚರ್ಚಿಸಿದರು.

'ರಾಜ್ಯದಾದ್ಯಂತ 'ಡೆಂಟಲ್ ಸ್ಕಿನ್, ಹೇರ್ ಕ್ಲಿನಿಕ್'ಗಳು ಹರಡಿಕೊಂಡಿವೆ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ನಿಗದಿತ ಚಿಕಿತ್ಸೆಗೆ ಅರ್ಹತೆ ಹೊಂದಿರದ ನಕಲಿ ವೈದ್ಯರ ಮೇಲೆ ಕಾನೂನಿನ ಅಡಿ ಕ್ರಮ ಕೈಗೊಳ್ಳಬೇಕು. ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾರ್ಗಸೂಚಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು' ಎಂದು ಒತ್ತಾಯಿಸಿದರು.

ಐಎಡಿವಿಎಲ್ ಕರ್ನಾಟಕ ಶಾಖೆಯ ಗೌರವ ಖಜಾಂಚಿ ಡಾ. ಸುಜಲಾ ಸಚ್ಚಿದಾನಂದ ಆರಾಧ್ಯ, ಕೆಪಿಎಂಇ ಮತ್ತು ಪ್ರಾಕ್ಟೀಸ್ ಮ್ಯಾನೇಜ್‌ಮೆಂಟ್ ಸೆಲ್ ಅಧ್ಯಕ್ಷ ಡಾ. ವೆಂಕಟರಾಮ್ ಮೈಸೂರು, ಸಂಚಾಲಕ ಡಾ. ಜಗದೀಶ್ ಪಿ., ಡಾ. ಅಕ್ಷಯ್ ಸಾಮಗಾನಿ, ರಾಜಾಜಿನಗರ ಇಎಸ್‌ಐಸಿ ವೈದ್ಯಕೀಯ ಕಾಲೇಜಿನ ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಗಿರೀಶ್ ಎಂ.ಎಸ್. ಉಪಸ್ಥಿತರಿದ್ದರು.

'ಯಡಿಯೂರಪ್ಪ ನಡೆಯಿಂದ ಮೈತ್ರಿಗೆ ಧಕ್ಕೆ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಮುಂದಿನ ಚುನಾವಣೆಗೆ ಯಶವಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನು ಏಕಾಏಕಿ ಘೋಷಿಸಿರುವುದು ದುಡುಕಿನ ನಿರ್ಧಾರವಾಗಿದೆ. ಇದು ಮೈತ್ರಿ ಧರ್ಮಕ್ಕೆ ಮಾಡಿದ ಅಪಚಾರ' ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎನ್. ಜವರಾಯಿಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಮುಂದಿನ ಚುನಾವಣೆಯಲ್ಲಿ ಯಶವಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆರ್‌.ರುದ್ರೇಶ್ ಎಂದು ಯಡಿಯೂರಪ್ಪ ಘೋಷಿಸಿದ್ದಾರೆ. ಅನುಭವಿ ರಾಜಕಾರಣಿಯೊಬ್ಬರು ಹೀಗೆ ಏಕಾಏಕಿ ಅಭ್ಯರ್ಥಿ ಹೆಸರು ಘೋಷಿಸಿರುವುದು, ಜೆಡಿಎಸ್ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಿದೆ' ಎಂದು ಬೇಸರ ವ್ಯಕ್ತಪಡಿಸಿದರು. 'ಯಡಿಯೂರಪ್ಪ ಅವರು ಯಾವ ಅರ್ಥದಲ್ಲಿ ಹೇಳಿಕೆ ನೀಡಿದ್ದಾರೆ ಎಂದು ತಿಳಿಯುತ್ತಿಲ್ಲ. ಈ ಹೇಳಿಕೆ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಟ್ಟಿರುವ ಅರ್ಥವನ್ನು ಮೂಡಿಸುವಂತಿದೆ. ಇದರಿಂದ ಕಾರ್ಯಕರ್ತರ ಮನಸ್ಸಿಗೆ ಘಾಸಿಯಾಗಿದೆ' ಎಂದರು.

ಶಾಲಾ ವಿದ್ಯಾರ್ಥಿಗಳಿಗೆ ಗ್ರಹ, ನಕ್ಷತ್ರ, ಗ್ಯಾಲಕ್ಸಿಗಳ ಬಗ್ಗೆ ಮಾಹಿತಿ

ಬಾಹ್ಯಾಕಾಶದ ಕೌತುಕ: ಬೆರಗಾದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ


ನಗರದಲ್ಲಿ ನಡೆದ ಆಸ್ಟ್ರಾನೋಮಿ ಎಕ್ಸ್‌ಪೋ ಕಾರ್ಯಕ್ರಮದಲ್ಲಿ ರಾಘವೇಂಧೀರಾ, ಡಾ. ವಿನೋದ್ ಕುಮಾರ್, ಟಿ.ಕೆ. ಸುಂದರಮೂರ್ತಿ, ಎಂ.ಎಸ್. ಶ್ರೀನಿವಾಸನ್, ಮಾರ್ಗರಿಟಾ ಸಫೊನೊವಾ ಭಾಗವಹಿಸಿದ್ದರು

ಬೆಂಗಳೂರು: ಇನ್ನೋನೆಕ್ಸ್ಟ್ ಮೈಂಡ್ ಪ್ರೈವೇಟ್ ಲಿಮಿಟೆಡ್ (ಏರಿಯನ್ ಭಾರತ್) ಆಶ್ರಯದಲ್ಲಿ ಗುರುವಾರ ಐನಾಕ್ಸ್ ಚಿತ್ರಮಂದಿರದಲ್ಲಿ ನಡೆದ ಆಸ್ಟ್ರಾನೊಮಿ ಎಕ್ಸ್‌ಪೋ 1.0ರ ಆವೃತ್ತಿಗೆ ಚಾಲನೆ ನೀಡಿ, ಲಾಂಛನ ಮತ್ತು ಭಿತ್ತಿಪತ್ರವನ್ನು ಬಿಡುಗಡೆ ಮಾಡಲಾಯಿತು.

ಪಿಪಿಟಿ ಪ್ರದರ್ಶನದ ಮೂಲಕ ಗ್ರಹಗಳು, ನಕ್ಷತ್ರಗಳು, ಗ್ಯಾಲಕ್ಸಿಗಳ ಬಗ್ಗೆ ಶಾಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಖಗೋಳ ವಿಜ್ಞಾನ, ಇಸ್ರೊ ಸಾಧನೆ ಕುರಿತು 3ಡಿ ವಿಶೇಷ ಚಿತ್ರ ಪ್ರದರ್ಶಿಸಲಾಯಿತು. ಭೂಮಿಯ ರಚನೆ ಹೇಗಾಯಿತು ಮತ್ತು ಮಾನವ ವಿಕಾಸದ ಪರಿಕಲ್ಪನೆಯನ್ನು ಪ್ರದರ್ಶಿಸಿದ್ದು, ಮಕ್ಕಳಿಗೆ ಹೊಸ ಲೋಕವೊಂದನ್ನು ಪರಿಚಯಿಸಿತು.

ಜತೆಗೆ ಬಾಹ್ಯಾಕಾಶ ಮತ್ತು ವಿಜ್ಞಾನದ ಬಗೆಗಿನ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿತು. ಬಾಹ್ಯಾಕಾಶ ಪರಿಶೋಧನೆ ಮತ್ತು ರಾಕೆಟ್ ತಂತ್ರಜ್ಞಾನದ ಪ್ರಮುಖ ಅಂಶಗಳ ವಿಶೇಷ ಚಿತ್ರ ಪ್ರದರ್ಶಗೊಂಡಿತು. ಇದೇ ವೇಳೆ ವಿದ್ಯಾರ್ಥಿ ಬಾಹ್ಯಾಕಾಶ ಕಲಿಕಾ ಅಪ್ಲಿಕೇಶನ್ ಅನ್ನು ಅನಾವರಣಗೊಳಿಸಲಾಯಿತು.

ಮಕ್ಕಳ ಹಕ್ಕುಗಳ ಕಾರ್ಯಕರ್ತ ರಾಘವೇಂಧೀರಾ, 'ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳ ಪರಿಣಾಮ ಇಂದು ಬಾಹ್ಯಾಕಾಶ ವಿಜ್ಞಾನವನ್ನು ಹೆಚ್ಚು ಪರಿಣಾಮಕಾರಿಯಾಗಿ ಅಭ್ಯಾಸ ಮಾಡಲು ಸಾಧ್ಯವಾಗಿದೆ . ಭಾರತ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಜಗತ್ತಿನಲ್ಲಿಯೇ ನಾಲ್ಕನೇ ಸ್ಥಾನದಲ್ಲಿದೆ' ಎಂದರು.

ಇಸ್ರೊ ಮಾಜಿ ವಿಜ್ಞಾನಿ ಇಳಂಗೋವನ್ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಏರಿಯನ್ ಭಾರತ್ ಸಿಇಒ ರಶ್ಮಿ ಸುಮಂತ್ ಮತ್ತು ಪ್ರಾದೇಶಿಕ ಸಂಯೋಜಕ ಸಂದೀಪ್ ಮಾತನಾಡಿದರು. ಓಯಸಿಸ್ ಇಂಟರ್ ನ್ಯಾಷನಲ್ ಶಾಲೆಯ ಸಹಭಾಗಿತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಇದ್ದರು.

ಐಎನ್-ಸ್ಪೇಸ್‌ನ ಪ್ರಚಾರ ನಿರ್ದೇಶನಾಲಯದ ನಿರ್ದೇಶಕ ಡಾ. ವಿನೋದ್ ಕುಮಾರ್, ಇಸ್ರೊ ಮಾಜಿ ಮಿಷನ್ ನಿರ್ದೇಶಕ ಟಿ.ಕೆ. ಸುಂದರಮೂರ್ತಿ, ಯುಆರ್‌ಎಸ್‌ಸಿಯ ಮಾಜಿ ನಿರ್ದೇಶಕ ಎಂ.ಎಸ್. ಶ್ರೀನಿವಾಸನ್, ಕೈಬರಹ ತಜ್ಞ ಕೆ.ಸಿ. ಜನಾರ್ದನ್ ಭಾಗವಹಿಸಿದ್ದರು.

71 ಕಿ.ಮೀಗೆ ಟೋಲ್ ₹185

ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಉದ್ಘಾಟನೆ ಮುನ್ನವೇ ದರ ನಿಗದಿ

• ಕೆ.ಓಂಕಾರ ಮೂರ್ತಿ

ಕೋಲಾರ: ಉದ್ಘಾಟನೆಗೆ ಮುನ್ನವೇ ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಕಾರಿಡಾರ್‌ನಲ್ಲಿ ವಾಹನಗಳ ಸಂಚಾರಕ್ಕೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಟೋಲ್ ಶುಲ್ಕ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದ್ದು, ಸದ್ಯದಲ್ಲೇ ಜಾರಿಗೆ ಬರಲಿದೆ.

ಕಾರು, ಜೀಪು ವಾಹನ ಚಾಲಕರು ಹೊಸಕೋಟೆ ಸಮೀಪದ ಹೆಡಗಿನಬೆಲೆ ಟೋಲ್ ಪ್ಲಾಜಾದಿಂದ ಕೆಜಿಎಫ್‌ನ ಸುಂದರಪಾಳ್ಯ ಟೋಲ್ ಪ್ಲಾಜಾವರೆಗಿನ ಸಂಚಾರಕ್ಕೆ 71 ಕಿ.ಮೀಗೆ ₹ 185 ಶುಲ್ಕ ಪಾವತಿಸಬೇಕಾಗುತ್ತದೆ. ಅದೇ ದಿನ ಮರು ಸಂಚಾರ ಮಾಡುವುದಾದರೆ ಒಟ್ಟು ₹ 275 ದರ ತೆರಬೇಕು. ಕೆಜಿಎಫ್‌ನ ಸುಂದರಪಾಳ್ಯ ಟೋಲ್ ಪ್ಲಾಜಾದಿಂದ ಹೊಸಕೋಟೆ ಕಡೆಗೆ ಬರುವಾಗ ತುಸು ಹೆಚ್ಚು ಶುಲ್ಕವಿರಲಿದ್ದು, ಏಕಮುಖ ಸಂಚಾರಕ್ಕೆ ₹ 190, ಎರಡೂ ಬದಿಯ ಸಂಚಾರಕ್ಕೆ ₹ 280 ಶುಲ್ಕ ಇರಲಿದೆ. ತಿಂಗಳ ಪಾಸ್‌ಗೆ (50 ಟ್ರಿಪ್–ಏಕಮುಖ ಸಂಚಾರ) ₹ 6,105 ಶುಲ್ಕವಿರಲಿದೆ.

ಇದೇ ರೀತಿ ಬೇರೆ ಬೇರೆ ಮಾದರಿಯ ವಾಹನಗಳಿಗೆ, ಕಿ.ಮೀಗೆ ಅನುಗುಣವಾಗಿ ಶುಲ್ಕದಲ್ಲಿ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಪ್ರಯಾಣದ ಕಿ.ಮೀಗೆ ತಕ್ಕಂತೆ ಟೋಲ್ ಶುಲ್ಕ ವಿಧಿಸಲಾಗುತ್ತದೆ.

‘ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನಲ್ಲಿ ಟೋಲ್ ಶುಲ್ಕ ಸಂಗ್ರಹ ಇನ್ನೂ ಆರಂಭವಾಗಿಲ್ಲ. ಯಾವಾಗ ಜಾರಿ ಮಾಡಬೇಕು ಎಂಬುದನ್ನು ಚರ್ಚಿಸಿ ನಿರ್ಧರಿಸಲಾಗುವುದು. ಕೆಲವೊಂದು ಪ್ರಕ್ರಿಯೆ ನಡೆಯಬೇಕಿದೆ’ ಎಂದು ಯೋಜನಾ ನಿರ್ದೇಶಕಿ ಅರ್ಚನಾ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಪ್ರಜಾವಾಣಿ ವಿಶೇಷ

ಹೆದ್ದಾರಿಯಲ್ಲಿ ಹೊಸಕೋಟೆ ಸಮೀಪ ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿ ಹೆಡಗಿನಬೆಲೆಯಲ್ಲಿ ಟೋಲ್ ಪ್ಲಾಜಾ ಇದೆ. ಅದನ್ನು ಬಿಟ್ಟರೆ ಕೆಜಿಎಫ್‌ನ ಬೆಮಲ್ ನಗರ ಬಳಿ ಕೃಷ್ಣಾವರಂನಲ್ಲಿ ಟೋಲ್ ಪ್ಲಾಜಾ ಇದೆ. ಇನ್ನು ಕೊನೆಯದಾಗಿ ಕೆಜಿಎಫ್ ತಾಲ್ಲೂಕಿನ ಗಡಿ ಸುಂದರಪಾಳ್ಯದಲ್ಲೊಂದು ಟೋಲ್ ಪ್ಲಾಜಾ ಇದೆ. ಹೊಸಕೋಟೆಯಿಂದ ಇದೇ ರಸ್ತೆಯಲ್ಲಿ ಮಾಲೂರು ಕಡೆಗೆ ಪ್ರಯಾಣಿಸಬೇಕಾದರೆ ಅಗ್ರಹಾರ ಬಳಿ ಟೋಲ್ ಪ್ಲಾಜಾ ಸಿಗುತ್ತದೆ.

ಹೊಸಕೋಟೆಯಿಂದ ಕೆಜಿಎಫ್‌ಗೆ ತೆರಳುವ ವಾಹನವನ್ನು ಹೆಡಗಿನಬೆಲೆ ಟೋಲ್ ಪ್ಲಾಜಾದಲ್ಲಿ ಸ್ಕ್ಯಾನ್ ಮಾಡಲಾಗುತ್ತದೆ. ಕಾರು, ಜೀಪು ಚಾಲಕರು ಕೃಷ್ಣಾವರಂ ಟೋಲ್ ದಾಟಬೇಕಾದರೆ ₹155, ಸುಂದರಪಾಳ್ಯದ ಟೋಲ್ ಪ್ಲಾಜಾ ದಾಟಬೇಕಾದರೆ ₹185 ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಮಾಲೂರು ಕಡೆಗೆ ಪ್ರಯಾಣಿಸುವವರು ಅಗ್ರಹಾರ ಟೋಲ್ ಪ್ಲಾಜಾದಲ್ಲಿ ₹65 ಪಾವತಿಸಬೇಕು.

ಸದ್ಯ ಈ ರಸ್ತೆಯಲ್ಲಿ ಕಾರು, ಜೀಪು, ಮಿನಿ ಬಸ್, ಬಸ್, ಲಾರಿಗಳ ಪ್ರವೇಶಕ್ಕೆ ಮಾತ್ರ ಅವಕಾಶವಿದ್ದು, ದ್ವಿಚಕ್ರ ವಾಹನ, ಟ್ರ್ಯಾಕ್ಟರ್ ಹಾಗೂ ಆಟೊಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ.

ಲಘು ವಾಣಿಜ್ಯ, ಸರಕು ವಾಹನ, ಮಿನಿ ಬಸ್‌ಗಳಿಗೆ ಹೊಸಕೋಟೆಯಿಂದ ಕೆಜಿಎಫ್ (ಸುಂದರಪಾಳ್ಯ) ಏಕಮುಖ ಟ್ರಿಪ್‌ಗೆ ₹ 295 ಹಾಗೂ ಎರಡೂ ಬದಿಯ ಸಂಚಾರಕ್ಕೆ ₹ 445 ಶುಲ್ಕ ನಿಗದಿ ಮಾಡಲಾಗಿದೆ. ಟ್ರಕ್, ಬಸ್ ಇನ್ನಿತರ ವಾಹನಗಳಿಗೆ ಏಕಮುಖ ಟ್ರಿಪ್‌ಗೆ ₹620 ಹಾಗೂ ಎರಡೂ ಟ್ರಿಪ್‌ಗೆ ₹ 930 ಶುಲ್ಕ ನಿಗದಿ ಮಾಡಲಾಗಿದೆ. ಸುಂದರಪಾಳ್ಯದಿಂದ ಹೊಸಕೋಟೆ ಕಡೆಗೆ ಶುಲ್ಕದಲ್ಲಿ ಕ್ರಮವಾಗಿ ₹ 10 ಹಾಗೂ ₹ 15 ಹೆಚ್ಚಾಗುತ್ತದೆ.

ಸುಮಾರು ₹ 17 ಸಾವಿರ ಕೋಟಿ ವೆಚ್ಚದ ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನ ರಾಜ್ಯದ ಪಾಲಿನ ಕಾಮಗಾರಿ ಈಗಾಗಲೇ ಮುಗಿದು, ಏಳು ತಿಂಗಳಿನಿಂದ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಆದರೆ, ತಮಿಳುನಾಡಿನ ಭಾಗದ ಕಾಮಗಾರಿ ಇನ್ನೂ ಮುಗಿದಿಲ್ಲ. ಹೀಗಾಗಿ, ಇನ್ನೂ ಉದ್ಘಾಟನೆಯಾಗಿಲ್ಲ.

ನಾಲ್ಕು ಪಥದ ಈ ಹೆದ್ದಾರಿಯು ಹೊಸಕೋಟೆಯಿಂದ ಮಾಲೂರು, ಬಂಗಾರಪೇಟೆ, ಬೇತಮಂಗಲ, ಕೆಜಿಎಫ್ ನಗರವನ್ನು ಸಂಪರ್ಕಿಸುತ್ತದೆ. ನಂತರ ಆಂಧ್ರಪ್ರದೇಶ ಹಾಗೂ ತಮಿಳುನಾಡು ರಾಜ್ಯದ ಕೆಲ ನಗರಗಳ ಮೂಲಕ ಹಾದು ಚೆನ್ನೈ (ಶ್ರೀಪೆರಂಬುದೂರು) ತಲುಪುತ್ತದೆ. ಒಟ್ಟು 288 ಕಿ.ಮೀ ಉದ್ದದ ಎಕ್ಸ್‌ಪ್ರೆಸ್‌ವೇ ಇದಾಗಿದೆ. ಬೆಂಗಳೂರು–ಚೆನ್ನೈ ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸುವುದು ಕೂಡ ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆ.

ಮುಖ್ಯಾಂಶಗಳು

- ದ್ವಿಚಕ್ರ ವಾಹನಗಳ ಸಂಚಾರಕ್ಕೆ ಅನುಮತಿ ಇಲ್ಲ
- ಪ್ರಯಾಣಿಸಿದ ಕಿ.ಮೀ ಆಧಾರದ ಮೇಲೆ ಟೋಲ್ ಶುಲ್ಕ
- ರಾಜ್ಯ ವ್ಯಾಪ್ತಿಯ ಎಕ್ಸ್‌ಪ್ರೆಸ್ ವೇನಲ್ಲಿ ನಾಲ್ಕು ಟೋಲ್ ಪ್ಲಾಜಾ

ಟೋಲ್ ಶುಲ್ಕ ಸಂಗ್ರಹಕ್ಕೆ ಇನ್ನೂ ದಿನಾಂಕ ನಿಗದಿಯಾಗಿಲ್ಲ. ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು

ಎಂ.ಮಲ್ಲೇಶ್‌ ಬಾಬು, ಸಂಸದ

ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಕಾರಿಡಾರ್‌ನಲ್ಲಿ ಸದ್ಯಕ್ಕೆ ಶುಲ್ಕ ಸಂಗ್ರಹ ಮಾಡುತ್ತಿಲ್ಲ. ಜಾರಿ ಮಾಡುವ ಮುನ್ನ ಸಾರ್ವಜನಿಕರ ಗಮನಕ್ಕೆ ತರುತ್ತೇವೆ

ಅರ್ಚನಾ, ಯೋಜನಾ ನಿರ್ದೇಶಕಿ, ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್



ಚೆನ್ನೈ – ಬೆಂಗಳೂರು ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನ ಕೆಜಿಎಫ್ ತಾಲ್ಲೂಕಿನ ಬೆಮಲ್ ನಗರ ಬಳಿ ಇರುವ ಕೃಷ್ಣಾವರಂ ಟೋಲ್ ಪ್ಲಾಜಾ

ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಕಾರಿಡಾರ್‌ನಲ್ಲಿ ಟೋಲ್ ಶುಲ್ಕ (₹ ಗಳಲ್ಲಿ)

ವಾಹನ	ಏಕಮುಖ ಸಂಚಾರ	ಮರು ಸಂಚಾರ	30ಗಳ ಪಾಸ್
ಹೆಡಗಿನಬೆಲೆ (ಹೊಸಕೋಟೆ ಸಮೀಪ) ಟೋಲ್‌ನಿಂದ ಸುಂದರಪಾಳ್ಯ (ಕೆಜಿಎಫ್) ಟೋಲ್‌ಗೆ			
ಕಾರು, ಜೀಪು	185	275	6,105
ಮಿನಿ ಬಸ್	295	445	9,865
ಟ್ರಕ್, ಬಸ್	620	930	20,665
ಅಗ್ರಹಾರ ಟೋಲ್‌ನಿಂದ (ಮಾಲೂರು) ಸುಂದರಪಾಳ್ಯ (ಕೆಜಿಎಫ್) ಟೋಲ್‌ಗೆ			
ಕಾರು, ಜೀಪು	125	185	4,100
ಮಿನಿ ಬಸ್	200	300	6,620
ಟ್ರಕ್, ಬಸ್	415	625	13,870
ಕೃಷ್ಣಾವರಂ ಟೋಲ್‌ನಿಂದ (ಬೆಮಲ್ ನಗರ) ಸುಂದರಪಾಳ್ಯ (ಕೆಜಿಎಫ್) ಟೋಲ್‌ಗೆ			
ಕಾರು, ಜೀಪು	45	70	1,570
ಮಿನಿ ಬಸ್	75	115	2,540
ಟ್ರಕ್, ಬಸ್	160	240	5,320
ಸುಂದರಪಾಳ್ಯ (ಕೆಜಿಎಫ್) ಟೋಲ್‌ನಿಂದ ಹೆಡಗಿನಬೆಲೆ (ಹೊಸಕೋಟೆ ಸಮೀಪ) ಟೋಲ್‌ಗೆ			
ಕಾರು, ಜೀಪು	190	280	6,260
ಮಿನಿ ಬಸ್	305	455	10,115
ಟ್ರಕ್, ಬಸ್	635	955	21,190
ಕೃಷ್ಣಾವರಂ ಟೋಲ್‌ನಿಂದ (ಬೆಮಲ್ ನಗರ) ಹೆಡಗಿನಬೆಲೆ (ಹೊಸಕೋಟೆ ಸಮೀಪ) ಟೋಲ್‌ಗೆ			
ಕಾರು, ಜೀಪು	155	230	5,110
ಮಿನಿ ಬಸ್	250	370	8,255
ಟ್ರಕ್, ಬಸ್	520	780	17,295
ಅಗ್ರಹಾರ ಟೋಲ್‌ನಿಂದ (ಮಾಲೂರು) ಹೆಡಗಿನಬೆಲೆ (ಹೊಸಕೋಟೆ ಸಮೀಪ) ಟೋಲ್‌ಗೆ			
ಕಾರು, ಜೀಪು	70	100	2,260
ಮಿನಿ ಬಸ್	110	165	3,655
ಟ್ರಕ್, ಬಸ್	230	345	7,655

ಎಕ್ಸ್‌ಪ್ರೆಸ್ ವೇನಲ್ಲಿ ಹೆಚ್ಚಿದ ಅಪಘಾತ

ಹೊಸಕೋಟೆಯಿಂದ ಕೆಜಿಎಫ್‌ವರೆಗಿನ ಈ ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನಲ್ಲಿ ಈಚೆಗೆ ಅಪಘಾತಗಳ ಸಂಖ್ಯೆ ಹೆಚ್ಚಿದೆ.

ಕೆಜಿಎಫ್ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 7ಕ್ಕೂ ಅಧಿಕ ಮಂದಿ ಮೃತಪಟ್ಟರೆ, ಕೋಲಾರ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 10ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಈ ಸಂಬಂಧ ಕೆಡಿಪಿ ಸಭೆಯಲ್ಲಿ ಪ್ರಸ್ತಾಪವಾಗಿ ಚರ್ಚೆ ಆಗಿತ್ತು. ಪೊಲೀಸರನ್ನು ನಿಯೋಜಿಸಲು ಸಂಸದ ಎಂ.ಮಲ್ಲೇಶ್ ಬಾಬು ಸೂಚನೆ ನೀಡಿದ್ದರು.

ನಿರ್ಬಂಧವಿದ್ದರೂ ದ್ವಿಚಕ್ರ ವಾಹನ ಸವಾರರು ಅನಧಿಕೃತವಾಗಿ ಹೆದ್ದಾರಿಗೆ ಪ್ರವೇಶ ಮಾಡುತ್ತಿರುವುದು ಕಂಡುಬರುತ್ತಿದೆ. ಅಲ್ಲದೇ, ಕಾರುಗಳು ಅತಿ ವೇಗದಲ್ಲಿ ಚಲಿಸುತ್ತಿರುವುದು ಅಪಘಾತಕ್ಕೆ ಕಾರಣ ಎಂಬ ಚರ್ಚೆಯೂ ನಡೆದಿದೆ. ಆದರೆ, ಕೆಲವೆಡೆ ಹೆದ್ದಾರಿ ನಿರ್ಮಾಣ ಅವೈಜ್ಞಾನಿಕವಾಗಿದೆ ಎಂದು ವಾಹನ ಚಾಲಕರು ದೂರಿದ್ದಾರೆ. ಗಂಟೆಗೆ ಗರಿಷ್ಠ 120 ಕಿ.ಮೀ ವೇಗ ಮಿತಿ ವಿಧಿಸಲಾಗಿದೆ.

ಠರಾವು ಪ್ರತಿ ಸಲ್ಲಿಕೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ವಿಚಾರಣಾ ಆಯೋಗದ ವರದಿ ಪ್ರಶ್ನಿಸುವ ನಿಟ್ಟಿನಲ್ಲಿ, ನಿಮ್ಮ ಆಡಳಿತ ಮಂಡಳಿ ಕೈಗೊಂಡಿರುವ ಠರಾವು ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ’ ಎಂದು ಹೈಕೋರ್ಟ್ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪರ ವಕೀಲರಿಗೆ ನಿರ್ದೇಶಿಸಿದೆ.

‘ನ್ಯಾಯಮೂರ್ತಿ ಕುನ್ಹ ವರದಿಯನ್ನು ರದ್ದುಗೊಳಿಸಬೇಕು’ ಎಂದು ಕೋರಿ ‘ಮೆಸರ್ಸ್ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೆಟ್ ಲಿಮಿಟೆಡ್’ ಕಂಪನಿ ನಿರ್ದೇಶಕ ಸುನಿಲ್ ಮ್ಯಾಥ್ಯೂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ನ್ಯಾ. ಕುನ್ಹ ವರದಿಯನ್ನು ಈತನಕ



ನಮಗೆ ನೀಡಲಾಗಿಲ್ಲ. ಆದರೆ, ವರದಿ ಮಾಧ್ಯಮಗಳಲ್ಲಿ ಸೋರಿಕೆಯಾಗುತ್ತಿದ್ದು, ಕಂಪನಿಯ ನಿರ್ದೇಶಕರು ಮತ್ತು ಅಧಿಕಾರಿಗಳ ಘನತೆಗೆ ಚ್ಯುತಿಯಾಗುವ ರೀತಿಯಲ್ಲಿ ನಿರಂತರವಾಗಿ ವರದಿ ಪ್ರಕಟವಾಗುತ್ತಿವೆ. ಆದ್ದರಿಂದ, ಅರ್ಜಿಯನ್ನು ತುರ್ತು ವಿಚಾರಣೆಗೆ ಒಳಪಡಿಸಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಈ ರಿಟ್ ಅರ್ಜಿ ಸಲ್ಲಿಸಲು ಅನುಮತಿ ನೀಡಿ ಕಂಪನಿಯ ಆಡಳಿತ ಮಂಡಳಿ ನಿರ್ಣಯ ಕೈಗೊಂಡಿರುವ ದಾಖಲೆ ಯನ್ನು ನ್ಯಾಯಪೀಠಕ್ಕೆ ಸಲ್ಲಿಸಬೇಕು. ನಿರ್ಣಯದ ಪ್ರತಿ ಇಲ್ಲದೇ ವಿಚಾರಣೆ ಮುಂದುವರಿಸಲಾಗದು’ ಎಂಬ ತಿಳಿಸಿತು. ‘ಈ ಕುರಿತ ದಾಖಲೆಯನ್ನು ಸಲ್ಲಿಸಿ’ ಎಂದು ಸೂಚಿಸಿ ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿತು.

‘ಶಿರ, ಕುತ್ತಿಗೆ ಕ್ಯಾನ್ಸರ್‌ಗೆ ತಂಬಾಕು ಕಾರಣ’

ಬೆಂಗಳೂರು: ಕ್ಯಾನ್ಸರ್ ಸಂಬಂಧಿತ ಕಾಯಿಲೆಗಳ ಪೈಕಿ ಶೇ 30ರಷ್ಟು ಶಿರ ಮತ್ತು ಕುತ್ತಿಗೆ ಕ್ಯಾನ್ಸರ್‌ಗಳಾಗಿವೆ. ಇದರಲ್ಲಿ ಶೇ 90ರಷ್ಟು ಕ್ಯಾನ್ಸರ್‌ಗೆ ತಂಬಾಕು ಕಾರಣ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ತಿಳಿಸಿದರು.

ಸಂಸ್ಥೆಯ ಶಿರ ಮತ್ತು ಕುತ್ತಿಗೆ ಗಂಥಿ ಶಾಸ್ತ್ರ ವಿಭಾಗವು ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಶಿರ ಮತ್ತು ಕುತ್ತಿಗೆ ಕ್ಯಾನ್ಸರ್ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಸ್ಕ್ರೀನಿಂಗ್ ಮೂಲಕ ಶಿರ ಮತ್ತು ಕುತ್ತಿಗೆ ಕ್ಯಾನ್ಸರ್‌ಗಳನ್ನು ಆರಂಭಿಕ ಹಂತಗಳಲ್ಲಿ ಪತ್ತೆ ಮಾಡಲಾಗುತ್ತದೆ. ಬಾಯಿಯಲ್ಲಿ ವಾಸಿಯಾಗದ ಹುಣ್ಣು, ಧ್ವನಿಯಲ್ಲಿ ಕರ್ಕಶ, ಮುಖ ಮತ್ತು ಕುತ್ತಿಗೆಯಲ್ಲಿ ಗಡ್ಡೆ ಅಥವಾ ಊತ ಇರುವುದು ಕಾಯಿಲೆಯ ಸಂಕೇತವಾಗಿದೆ’ ಎಂದು ಹೇಳಿದರು.

ತಂಬಾಕು ಸೇವನೆಯಿಂದ ದೂರ ಇರುವ ಮೂಲಕ ಶಿರ ಮತ್ತು ಕುತ್ತಿಗೆ ಕ್ಯಾನ್ಸರ್‌ನಿಂದ ಮುಕ್ತವಾಗಬಹುದು. ಈ ಬಗ್ಗೆ ಕಾರ್ಯಾಗಾರ ಹಾಗೂ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದರು.

ಸಂಸ್ಥೆಯ ಶಿರ ಮತ್ತು ಕುತ್ತಿಗೆ ಗಂಥಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಪುರುಷೋತ್ತಮ್ ಚವ್ಹಾಣ್ ಮಾತನಾಡಿ, ‘ಶಿರ ಮತ್ತು ಕುತ್ತಿಗೆ ಕ್ಯಾನ್ಸರ್ ಸಂಬಂಧಿತ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕು. ಎಕ್ಸ್‌ರೇ, ಸಿಟಿ ಸ್ಕ್ಯಾನ್, ಎಂಐಆರ್–ಪಿಇಟಿ ಸ್ಕ್ಯಾನ್, ರಕ್ತದ ಪರೀಕ್ಷೆಗಳ ಮೂಲಕ ಕಾಯಿಲೆಯನ್ನು ಪತ್ತೆಹಚ್ಚಬಹುದು’ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ನಾಗರಪಂಚಮಿ, ನಾಗೇಂದ್ರ ಸ್ವಾಮಿ, ಗಂಗಮ್ಮ ದೇವಿ ಸೇರಿದಂತೆ ದೇವಸ್ಥಾನದಲ್ಲಿರುವ 18 ದೇವರುಗಳಿಗೆ ವಿಶೇಷ ಅಲಂಕಾರ: ಆಯೋಜನೆ ಮತ್ತು ಸ್ಥಳ: ಶ್ರೀಪಾತಾಳ ಪಂಚನಾಗೇಂದ್ರ ಸ್ವಾಮಿ ಮತ್ತು ಗಂಗಮ್ಮ ದೇವಿ ದೇವಸ್ಥಾನ, ಕುರುಬರಹಳ್ಳಿ, ಮಹಾಲಕ್ಷ್ಮಿಪುರ, ಬೆಳಿಗ್ಗೆ 7.30ರಿಂದ


‘ಸಂಪೂರ್ಣ ರಾಮಾಯಾಣ’ ನಾಟಕ ಪ್ರದರ್ಶನ: ಆಯೋಜನೆ: ದಿವ್ಯತೇಜಸ್ ಕಲಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಅಂಗಳದಲ್ಲಿ ತಿಂಗಳ ಪುಸ್ತಕ: ವ್ಯಾಸರಾಯ ಬಲ್ಲಾಳರ ‘ಬಂಡಾಯ’ ಪುಸ್ತಕದ ಕುರಿತು: ಜಯಂತ್ ಕಾಯ್ಕಿಣಿ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

ಎರಡು ದಿನಗಳ ಯುವ ರಂಗೋತ್ಸವ: ‘ಬೆದ್ದೂರಿನ ಬಿಗ್ ಬೆನ್’ ನಾಟಕ ಪ್ರದರ್ಶನ: ರಚನೆ: ಶ್ರೀನಿವಾಸ ವೈದ್ಯ, ನಿರ್ದೇಶನ: ಹರೀಶ್ ಆರ್., ‘ಜೋಗತಿ’ ನಾಟಕ ಪ್ರದರ್ಶನ: ರಚನೆ: ಚನ್ನಣ್ಣ ವಾಲೀಕಾರ, ನಿರ್ದೇಶನ: ಸುನಿಲ್ ಕುಮಾರ್ ಆರ್., ‘ಇನ್ನೊಬ್ಬ ದ್ರೋಣಾಚಾರ್ಯ’ ನಾಟಕ ಪ್ರದರ್ಶನ: ಸೋನು ಕುಮಾರ್ ಎಸ್., ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11ರಿಂದ

ಚಕೋರ ‘ಕನ್ನಡ ಕಾವ್ಯ ಪರಂಪರೆ’ ಕುರಿತು ಉಪನ್ಯಾಸ,

ಟಿ.ಪಿ. ಕೈಲಾಸಂ ಜನ್ಮದಿನ: ನುಡಿ ನಮನ: ಶ್ರೀನಿವಾಸ ಪ್ರಭು, ಎಲ್. ವೆಂಕಟಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6


ಟಿ.ಪಿ. ಕೈಲಾಸಂ

ಕವಿಗೋಷ್ಠಿ: ಉದ್ಘಾಟನೆ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಕವಿಗೋಷ್ಠಿಯ ಅಧ್ಯಕ್ಷತೆ: ವಿ. ನಾಗೇಂದ್ರ ಪ್ರಸಾದ್, ಉಪಸ್ಥಿತಿ: ಎಲ್. ಎನ್. ನಾಗಭೂಷಣ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಸ್ಥಳ: ಚನ್ನಬಸಪ್ಪ ಸಭಾಂಗಣ, ಕೆಜಿಎಸ್ ಕ್ಲಬ್, ಮ.1.30

ವಚನ ಶ್ರಾವಣ–2025: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ಪ್ರಭು ಇಸುವನಹಳ್ಳಿ, ಅತಿಥಿ: ಆರ್. ರಂಗನಾಥ್, ಅಧ್ಯಕ್ಷತೆ: ನಟರಾಜ್ ಸಾಗರನಹಳ್ಳಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಆರ್‌ಪಿಇಎಸ್ ಜ್ಞಾನ ವಿಕಾಸ ಪ್ರೌಢಶಾಲೆಯ ಅಂಗಳ, ಐದನೇ ಬ್ಲಾಕ್, ರಾಜಾಜಿನಗರ, ಮ. 2.15

ಪ್ರೀತಿಯಿಂದ ಕಲಿಕೆಯ ಸಂಭ್ರಮ: ಭಾಷಣಕಾರರು: ಶಿವಾನಂದ ನಾಯಕ್, ಉಪಸ್ಥಿತಿ: ಮನೋಹರ್ ನಾಡಿಗ್, ಸುಧೀಂದ್ರ, ಅಜಿತ್ ಕುಮಾರ್, ಆಯೋಜನೆ: ಆರೋಹಣ, ಸ್ಥಳ: ಬಿಬಿಎಂಪಿ ಪ್ರೌಢಶಾಲೆ, ಅಶೋಕನಗರ, ಬಸವನಗುಡಿ, ಮಧ್ಯಾಹ್ನ 2.30

ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ, ‘ಬಸವಶ್ರೀ’, ‘ಅಕ್ಕಮಹಾದೇವಿ’, ‘ಕಾಯಕ ರತ್ನ’, ‘ಕಾಯಕ ಯೋಗಿ’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ಬಿ.ಎಸ್. ಯಡಿಯೂರಪ್ಪ, ಉದ್ಘಾಟನೆ: ಬಿ.ಎಸ್. ಪರಮಶಿವಯ್ಯ, ಅತಿಥಿಗಳು: ಶಂಕರ ಮಹಾದೇವ ಬಿದರಿ, ಬಿ.ಎಸ್. ಪುಟ್ಟರಾಜು, ಪ್ರಶಸ್ತಿ ಸ್ವೀಕರಿಸುವವರು: ಸುಶೀಲಮ್ಮ, ದೀಪಕ್ ಶಿವರಾತ್ರಿ, ಜಿ. ಮರಿಸ್ವಾಮಿ, ಅಧ್ಯಕ್ಷತೆ: ವಿಶ್ವನಾಥಯ್ಯ, ಆಯೋಜನೆ: ಬಸವೇಶ್ವರ ಸೇವಾ ಸಮಿತಿ, ಅಕ್ಕನ ಬಳಗ ಮಹಿಳಾ ಸಮಾಜ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾ ಸಭಾ ಬೆಂಗಳೂರು ನಗರ ಜಿಲ್ಲಾ ಘಟಕ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 4ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

‘ಸಮಾಜ ಕಲುಷಿತ: ನಿದರ್ಶನ ತೋರಿಸಿ’

ರಂಭಾಪುರಿ ಶ್ರೀಗೆ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ಸವಾಲು

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಜಾತಿ ಮಠಗಳಿಂದ ಸಮಾಜ ಕಲುಷಿತಗೊಂಡ ನಿದರ್ಶನ ಗಳಿದ್ದರೆ ತೋರಿಸಿ. ನಿಮ್ಮ ಪೀಠ ಜಾತ್ಯತೀತವೇ ಎಂಬುದನ್ನು ಮೊದಲು ಸ್ಪಷ್ಟಪಡಿಸಿ’ ಎಂದು ಹಿಂದುಳಿದ ಮತ್ತು ದಲಿತ ಮಠಾಧೀಶರ ಒಕ್ಕೂಟವು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಅವರಿಗೆ ಸವಾಲು ಹಾಕಿದೆ.

‘10-15 ವರ್ಷಗಳಿಂದೀಚೆಗೆ ಆರಂಭವಾಗಿರುವ ಜಾತಿ ಮಠಗಳಿಂದ ಸಮಾಜ ಕಲುಷಿತಗೊಂಡಿದೆ’ ಎಂಬುದಾಗಿ ರಂಭಾಪುರಿ ಸ್ವಾಮೀಜಿ ಭದ್ರಾವತಿಯಲ್ಲಿ ನೀಡಿದ್ದಾರೆ ಎನ್ನಲಾದ ಹೇಳಿಕೆಯನ್ನು ಮಠಾಧೀಶರ ಒಕ್ಕೂಟ ಖಂಡಿಸಿದೆ. ‘ಈ ಹೇಳಿಕೆಯನ್ನು ಹಿಂಪಡೆಯದೇ ಇದ್ದರೆ ಹೋರಾಟ ಕೈಗೆತ್ತಿಕೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದೆ.

‘ಶ್ರೇಣೀಕೃತ ವ್ಯವಸ್ಥೆಯಲ್ಲಿ ಹಿಂದುಳಿದ ಮತ್ತು ದಲಿತ ಸಮುದಾಯವನ್ನು ನಿರ್ಲಕ್ಷಿಸಿದ ಪರಿಣಾಮವಾಗಿ ಜಾತಿ ಮಠ- ಪೀಠಗಳು ಸ್ಥಾಪನೆಯಾಗಿವೆ. ಧಾರ್ಮಿಕ ಅಸ್ಮಿತೆ ಹಾಗೂ ಸ್ವಾತಂತ್ರ್ಯಕ್ಕಾಗಿ ಭಕ್ತರೇ ಸೇರಿಕೊಂಡು ಮಠಗಳನ್ನು ಕಟ್ಟಿದ್ದಾರೆ. ಮಠ-ಪೀಠಗಳು ಜಾತಿ ಹೆಸರಿನಲ್ಲಿದ್ದರೂ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಕೆಲಸ ಮಾಡುತ್ತಿವೆಯೇ ಹೊರತು ಸಮಾಜ ಕಲುಷಿತಗೊಳಿಸುತ್ತಿಲ್ಲ’ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪಂಚಪೀಠಗಳು ಶೋಷಿತ ಸಮುದಾಯದ ಜನರನ್ನು ಸಮೀಪಕ್ಕೆ ಕರೆದು ಶಿಕ್ಷಣ ಮತ್ತು ಸಂಸ್ಕಾರ ನೀಡಿದ್ದರೆ ಜಾತಿ ಮಠ ಕಟ್ಟಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗುತ್ತಿರಲಿಲ್ಲ. ಈ ಮಠಗಳ ಪೀಠಾಧಿಪತಿಗಳು ಶೋಷಿತ ಸಮುದಾಯದ ಸ್ವಾಮೀಜಿಗಳ ಜೊತೆಗೂ ಕುಳಿತುಕೊಳ್ಳುವುದಿಲ್ಲ. ಜಾತಿಯ ಅಜ್ಞಾನವನ್ನು ಹೋಗಲಾಡಿಸಿ ಜ್ಯೋತಿಯಾಗಿ ಬೆಳಗಿಸುವ ಪ್ರಯತ್ನವನ್ನು ಜಾತಿ ಮಠ-ಪೀಠಗಳು ಮಾಡುತ್ತಿವೆ. ಇದನ್ನು ರಂಭಾಪುರಿ ಶ್ರೀ ಅರ್ಥ ಮಾಡಿಕೊಳ್ಳಬೇಕು’ ಎಂದು ಭಗೀರಥ ಗುರುಪೀಠದ ಪುರಷೋತ್ತಮಾನಂದಪುರಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ‘ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಧ್ಯೇಯ ಹೊಂದಿರುವ ಪಂಚಪೀಠಗಳು ಎಲ್ಲ ಜನವರ್ಗಗಳನ್ನು ಗೌರವಿಸುವ ಕೆಲಸ ಮಾಡಬೇಕಿತ್ತು. ಆದರೆ, ರಂಭಾಪುರಿಶ್ರೀ ಮಾನವ ಧರ್ಮಕ್ಕೆ ತದ್ವಿರುದ್ಧ ಹೇಳಿಕೆ ನೀಡಿ ನೋವುಂಟು ಮಾಡಿದ್ದಾರೆ’ ಎಂದರು.

ಯಾದವ ಗುರುಪೀಠದ ಶ್ರೀಕೃಷ್ಣ ಯಾದವ ಸ್ವಾಮೀಜಿ, ನಾರಾಯಣಗುರು ಮಹಾಸಂಸ್ಥಾನದ ಆರ್ಯ ರೇಣುಕಾನಂದ ಸ್ವಾಮೀಜಿ, ಹಡಪದ ಹೆಳವ ಗುರುಪೀಠದ ಬಸವ ಬೃಂಗೇಶ್ವರ ಸ್ವಾಮೀಜಿ, ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ, ಕುಂಬಾರ ಗುರುಪೀಠದ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಹಡಪದ ಗುರುಪೀಠದ ಅನ್ನಧಾನಿ ಭಾರತೀ ಅಪ್ಪಣ್ಣ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಮೇದಾರ ಗುರುಪೀಠದ ಇಮ್ಮಡಿ ಬಸವಪ್ರಭು ಕೇತೇಶ್ವರ ಸ್ವಾಮೀಜಿ ಹಾಜರಿದ್ದರು.

> **ರಂಭಾಪುರಿ ಪೀಠವೂ ಒಂದು ಜಾತಿಯ ಮಠ. ವೀರಸೋಮೇಶ್ವರ ಸ್ವಾಮೀಜಿ ಆ ಜಾತಿ ಮಠದ ಗುರು. ಅವರು ಮತ್ತೊಂದು ಜಾತಿ ಮಠದ ಅವಹೇಳನ ಮಾಡಿರುವುದು ಖಂಡನೀಯ**
> **ನಿರಂಜನಾನಂದಪುರಿ ಸ್ವಾಮೀಜಿ**
> ಕನಕ ಗುರುಪೀಠ

> **ಸಾಂಸ್ಕೃತಿಕ ನಾಯಕರ ಹೆಸರಿನಲ್ಲಿರುವ ಮಠ-ಪೀಠಗಳು ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿವೆ. ಇಂತಹ ಗುರುಪೀಠಗಳ ಬಗ್ಗೆ ನೀಡಿದ ಹೇಳಿಕೆ ಗಾಸಿಗೊಳಿಸಿದೆ**
> **ಪ್ರಸನ್ನಾನಂದಪುರಿ ಸ್ವಾಮೀಜಿ**
> ವಾಲ್ಮೀಕಿ ಗುರುಪೀಠ

‘₹ 100 ಕೋಟಿ ಮರಳಿಸುತ್ತೀರಾ?’

‘ಬೇಡ ಜಂಗಮ ಹೆಸರಿನಲ್ಲಿ ಸರ್ಕಾರದ ₹ 100 ಕೋಟಿಗೂ ಅಧಿಕ ಅನುದಾನ ಬಳಕೆಯಾಗಿದೆ. ಪಂಚಪೀಠಗಳ ಶಾಖಾ ಮಠಗಳೇ ಈ ಅನುದಾನ ಪಡೆದಿವೆ. ಇವು ನಿಜಕ್ಕೂ ಪರಿಶಿಷ್ಟ ಜಾತಿಗೆ ಸೇರಿದ ಮಠಗಳೇ ಎಂಬುದನ್ನು ಸಾಬೀತುಪಡಿಸಿ. ಇಲ್ಲವಾದರೆ, ಸರ್ಕಾರದ ಅನುದಾನ ಪಡೆದಿರುವ ಕುರಿತು ಶ್ವೇತಪತ್ರ ಹೊರಡಿಸಿ’ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸವಾಲು ಹಾಕಿದರು.

‘ಮೀಸಲಾತಿಯ ವಿಚಾರದಲ್ಲಿ 2003ರಲ್ಲಿ ಕೇಂದ್ರ ಸರ್ಕಾರದ ಬಳಿ ಪಂಚಪೀಠಗಳು ಇಟ್ಟ ಬೇಡಿಕೆ ಗುಟ್ಟಾಗಿ ಉಳಿದಿಲ್ಲ. ನಿಮ್ಮ ಜಾತಿ ಹೊರತುಪಡಿಸಿ ಉಳಿದ ಸಮುದಾಯಕ್ಕೆ ನಿಮ್ಮ ಕೊಡುಗೆ ಏನು’ ಎಂದು ಪ್ರಶ್ನಿಸಿದರು.

‘ಇಲ್ಲ, ಸಲ್ಲದ ಮಾತು ಆಡಿಲ್ಲ’

‘ಭದ್ರಾವತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಸಂಸ್ಕೃತಿ, ಪರಂಪರೆ ಹಾಗೂ ಆದರ್ಶಗಳ ಬಗ್ಗೆ ಮಾತನಾಡಿದ್ದೇವೆಯೇ ಹೊರತು, ಬೇರೆ ಯಾವುದೇ ಜಾತಿ ಕುರಿತು ಹೇಳಿಕೆ ಕೊಟ್ಟಿಲ್ಲ’ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ತಿಳಿಸಿದ್ದಾರೆ.

‘ದಲಿತ ಮತ್ತು ಹಿಂದುಳಿದ ಮಠಾಧೀಶರು ತಪ್ಪು ಗ್ರಹಿಕೆಯಿಂದ ಪತ್ರಿಕಾಗೋಷ್ಠಿ ನಡೆಸಿರುವುದಕ್ಕೆ ವಿಷಾದಿಸುತ್ತೇವೆ. ಯಾವುದೇ ಸಮುದಾಯದ ವಿಚಾರದಲ್ಲಿ ಹಸ್ತಕ್ಷೇಪ, ಇಲ್ಲ ಸಲ್ಲದ ಮಾತುಗಳನ್ನು ಆಡಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇವೆ’ ಎಂದು ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಆನೆ ಸೆರೆ ಕಾರ್ಯಾಚರಣೆ ಆರಂಭ

ಪ್ರಜಾವಾಣಿ ವಾರ್ತೆ


ಬಾಳೆಹೊನ್ನೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸ್ಥಳೀಯರು

ಬಾಳೆಹೊನ್ನೂರು (ಚಿಕ್ಕಮಗಳೂರು): ಕಾಡಾನೆ ದಾಳಿಯಿಂದ ನಾಲ್ಕು ದಿನಗಳಲ್ಲಿ ಇಬ್ಬರು ಮೃತಪಟ್ಟಿದ್ದು, ಇದರಿಂದ ಆಕ್ರೋಶಗೊಂಡ ಸ್ಥಳೀಯರು ಬಾಳೆಹೊನ್ನೂರು, ಖಾಂಡ್ಯದಲ್ಲಿ ಸೋಮವಾರ ಸ್ವಯಂ ಪ್ರೇರಿತ ಬಂದ್ ನಡೆಸಿದರು. ಎರಡು ಕಾಡಾನೆಗಳನ್ನು ಹಿಡಿದು ಸ್ಥಳಾಂತರ ಮಾಡಲು ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದೆ.

ಹೆದ್ದಾರಿ ತಡೆ ನಡೆಸಿದ್ದರಿಂದ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಜಿಲ್ಲಾಧಿಕಾರಿ ಮೀನಾ ನಾಗರಾಜ್, ಸಿಸಿಎಫ್ ಯಶಪಾಲ್ ಕ್ಷೀರಸಾಗರ, ಪಶ್ಚಿಮ ವಿಭಾಗದ ಐಜಿಪಿ ಅಮಿತ್ ಸಿಂಗ್ ಸ್ಥಳಕ್ಕೆ ಬಂದು ಪ್ರತಿಭಟನಕಾರರ ಮನವೊಲಿಸಲು ಪ್ರಯತ್ನಿಸಿದರು. ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿ, ‘ಪುಂಡಾನೆಗಳನ್ನು ಸೆರೆ ಹಿಡಿಯಬೇಕು’ ಎಂದು ಸೂಚನೆ ನೀಡಿದರು.

ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು ಆನೆ ಬಿಡಾರದಿಂದ 4 ಆನೆಗಳು ಬಂದಿಳಿದ ಬಳಿಕ ಪ್ರತಿಭಟನೆ ಕೈಬಿಡಲಾಯಿತು. ‘ಮೊದಲಿಗೆ ಎರಡು ಕಾಡಾನೆಗಳನ್ನು ಹಿಡಿದು ಸ್ಥಳಾಂತರ ಮಾಡಲಾಗುವುದು’ ಎಂದು ಶಾಸಕ ಟಿ.ಡಿ.ರಾಜೇಗೌಡ ತಿಳಿಸಿದರು.

ಸಚಿವರು, ಶಾಸಕರ ಜೊತೆ ಸಿ.ಎಂ ಸಭೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಕಾರ್ಯವೈಖರಿ ವಿರುದ್ಧ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸುತ್ತಿರುವ ಸ್ವಪಕ್ಷೀಯ ಶಾಸಕರ ವಿಶ್ವಾಸ ಗಳಿಸಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಂಗಳವಾರದಿಂದ (ಜುಲೈ29) ನಾಲ್ಕು ದಿನ ಸಚಿವರು, ಶಾಸಕರ ಜೊತೆ ಸರಣಿ ಸಭೆ ನಡೆಸಲಿದ್ದಾರೆ.

ಮೊದಲ ದಿನ ಸಂಜೆ 5 ಗಂಟೆಗೆ ತವರು ಜಿಲ್ಲೆ ಮೈಸೂರಿನ ಶಾಸಕರ ಜೊತೆ ಸಭೆ ಆರಂಭಿಸಲಿರುವ ಮುಖ್ಯಮಂತ್ರಿ, ಬಳಿಕ ಚಾಮರಾಜನಗರ, ತುಮಕೂರು, ಕೊಡಗು, ಹಾಸನ, ದಕ್ಷಿಣ ಕನ್ನಡ ಜಿಲ್ಲೆಗಳ ಶಾಸಕರು ಮತ್ತು ಆ ಜಿಲ್ಲೆಗಳ ಉಸ್ತುವಾರಿ ಸಚಿವರ ಜೊತೆ ಸಭೆ ನಡೆಸಿದ್ದಾರೆ.

ಶಾಸಕರಾದ ಬಿ.ಆರ್. ಪಾಟೀಲ ಮತ್ತು ರಾಜು ಕಾಗೆ ಅವರು ಅಸಮಾಧಾನ ಹೊರಹಾಕಿದ ಬೆನ್ನಲ್ಲೇ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರು ಶಾಸಕರು, ಸಚಿವರ ಜೊತೆ ಸರಣಿ ಸಭೆ ನಡೆಸಿದ್ದರು. ಬಳಿಕ ಮುಖ್ಯಮಂತ್ರಿ, ಶಾಸಕರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸಚಿವರಿಗೆ ಸೂಚನೆ ನೀಡುವ ಜೊತೆಗೆ ಶಾಸಕರ ವಿಶ್ವಾಸ ಗಳಿಸುವಂತೆ ಸಲಹೆ ನೀಡಿದ್ದರು. ಆ ಬೆನ್ನಲ್ಲೆ, ಕ್ಷೇತ್ರದ ಅಭಿವೃದ್ಧಿಗಾಗಿ ಶಾಸಕರಿಗೆ ವಿಶೇಷ ಅನುದಾನವನ್ನು ಮುಖ್ಯಮಂತ್ರಿ ಹಂಚಿಕೆ ಮಾಡಿದ್ದರು.

ಪ್ರತಿ ಮಂಗಳವಾರ ಶಾಸಕರ ಅಹವಾಲು ಆಲಿಸಲು ಮುಖ್ಯಮಂತ್ರಿ ನಿರ್ಧರಿಸಿದ್ದಾರೆ.

43 ಖಾತೆಗಳ ವಿರುದ್ಧ ರಮ್ಯಾ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ನಟಿ ರಮ್ಯಾ ಅವರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಸೋಮವಾರ ಲಿಖಿತ ದೂರು ನೀಡಿದರು.



ಅವಹೇಳನಕಾರಿ ಸಂದೇಶಗಳನ್ನು ಗಮನಿಸಿದ್ದ ರಮ್ಯಾ ಅವರು ದರ್ಶನ್ ಅಭಿಮಾನಿಗಳ ವಿರುದ್ಧ ಆಕ್ರೋಶ ಹೊರಹಾಕಿದ್ದರು. ಸೋಮವಾರ ಸಂಜೆ ನೇರವಾಗಿ ಕಮಿಷನರ್ ಕಚೇರಿಗೆ ಬಂದು ನಾಲ್ಕು ಪುಟಗಳ ದೂರು ನೀಡಿದರು. 43 ಖಾತೆಗಳನ್ನು ಉಲ್ಲೇಖಿಸಿ ದೂರು ನೀಡಿ ಕ್ರಮಕ್ಕೆ ಕೋರಿದರು.

‘ದೂರನ್ನು ಸ್ವೀಕರಿಸಲಾಗಿದೆ. ದೂರಿನ ಪ್ರತಿಯನ್ನು ಸೈಬರ್ ಠಾಣೆಗೆ ವರ್ಗಾವಣೆ ಮಾಡಿ ತನಿಖೆಗೆ ಸೂಚಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರೆ ಆರು ಆರೋಪಿಗಳಿಗೆ ಜಾಮೀನು ನೀಡಿರುವ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಕಳೆದ ವಾರ ಛೀಮಾರಿ ಹಾಕಿತ್ತು. ಜಾಮೀನಿನ ಮೇಲಿನ ಆದೇಶವನ್ನು ಕಾಯ್ದಿರಿಸಿತ್ತು. ಇದರ ಬೆನ್ನಲ್ಲೇ ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದ ರಮ್ಯಾ, ‘ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಒಂದು ಭರವಸೆಯ ಕಿರಣವಿದ್ದಂತೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ’ ಎಂದು ಅದರಲ್ಲಿ ಉಲ್ಲೇಖಿಸಿದ್ದರು.

ಈ ಪೋಸ್ಟ್ ಬಳಿಕ ರಮ್ಯಾ ಅವರ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿವೆ. ಇವುಗಳನ್ನು ರಮ್ಯಾ ಸ್ಕ್ರೀನ್‌ಶಾಟ್ ತೆಗೆದಿಟ್ಟುಕೊಂಡಿದ್ದರು. ಭಾನುವಾರ (ಜುಲೈ 27) 9 ಸ್ಕ್ರೀನ್ ಶಾಟ್‌ಗಳನ್ನು ಇನ್‌ಸ್ಟಾಗ್ರಾಂ ಸ್ಟೋರೀಸ್ ನಲ್ಲಿ ಹಂಚಿಕೊಂಡಿದ್ದ ರಮ್ಯಾ, ‘ರೇಣುಕಸ್ವಾಮಿಯ ಸಂದೇಶಗಳಿಗೂ ಡಿ ಬಾಸ್ ಫ್ಯಾನ್ಸ್ ಸಂದೇಶಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಸ್ತ್ರೀದ್ವೇಷಿ ಮನಃಸ್ಥಿತಿಯುಳ್ಳವರು ಮಾಡುವ ಇಂತಹ ಟ್ರೋಲ್‌ಗಳಿಂದಲೇ ಮಹಿಳೆಯರು ಮತ್ತು ಯುವತಿಯರು ಕಿರುಕುಳ, ಅತ್ಯಾಚಾರ ಮತ್ತು ಕೊಲೆಗೆ ಒಳಗಾಗುತ್ತಿದ್ದಾರೆ’ ಎಂಬ ಪೋಸ್ಟ್ ಹಾಕಿದ್ದರು.

ಫೈರ್ ಖಂಡನೆ: ರಮ್ಯಾಗೆ ಅವಹೇಳನಕಾರಿ ಸಂದೇಶ ಕಳುಹಿಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಗೃಹ ಸಚಿವರಿಗೆ ಫಿಲಂ ಇಂಡಸ್ಟ್ರಿ ಫಾರ್ ರೈಟ್ಸ್ ಆ್ಯಂಡ್ ಈಕ್ವಾಲಿಟಿ (ಫೈರ್) ಪತ್ರ ಬರೆದಿದೆ. ‘ರಮ್ಯಾ ಅವರ ವಿರುದ್ಧ ನಡೆಯುತ್ತಿರುವ ದ್ವೇಷಪೂರಿತ ದೌರ್ಜನ್ಯವು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅಪಮಾನ. ಇದು ಆನ್‌ಲೈನ್‌ನಲ್ಲಿ ಮಹಿಳಾ ದ್ವೇಷದ ಆಳವಾದ ಸಮಸ್ಯೆಯನ್ನು ತೋರಿಸುತ್ತದೆ’ ಎಂದು ಫೈರ್ ಉಲ್ಲೇಖಿಸಿದೆ.

ಈ ಎಲ್ಲಾ ಬೆಳವಣಿಗೆಗಳ ನಡುವೆ ‘ತಮ್ಮ ಮಾತಿನಿಂದಲೇ ಒಬ್ಬ ಮೂರ್ಖ ಗುರುತಿಸಿಕೊಳ್ಳುತ್ತಾನೆ. ಬುದ್ಧಿವಂತನೊಬ್ಬ ತನ್ನ ಮೌನದಿಂದಲೇ ಗುರುತಿಸಿಕೊಳ್ಳುತ್ತಾನೆ’ ಎಂದು ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರೂ ಇನ್‌ಸ್ಟಾಗ್ರಾಂ ಪೋಸ್ಟ್ ಹಾಕಿದ್ದಾರೆ.

> **ಕಿರುಕುಳದ ವಿರುದ್ಧ ನಿಲ್ಲುವುದು ನಮ್ಮ ಕರ್ತವ್ಯ. ಹೆಣ್ಮಕ್ಕಳನ್ನು ಕೀಳಾಗಿ ಕಾಣೋ ಪ್ರಪಂಚ ಬೆಳವಣಿಗೆಗೂ ಮುನ್ನ ನಾಶವಾಗಬೇಕು**
> **ವಿನಯ್ ರಾಜ್‌ಕುಮಾರ್**
> ನಟ (ಇನ್‌ಸ್ಟಾಗ್ರಾಂ ಪೋಸ್ಟ್)

ಮಹಿಳಾ ಆಯೋಗದಿಂದಲೂ ಪತ್ರ

‘ರಮ್ಯಾ ಅವರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಸಂದೇಶಗಳನ್ನು ಹಾಕಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಸೂಚಿಸಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಕಮಿಷನರಿಗೆ ಪತ್ರ ಬರೆದಿರುವ ನಾಗಲಕ್ಷ್ಮಿ ಅವರು, ‘ಈ ಪ್ರಕರಣವನ್ನು ಆಯೋಗವು ಗಂಭೀರವಾಗಿ ಪರಿಗಣಿಸಿದೆ. ರಮ್ಯಾ ಅವರ ವಿರುದ್ಧ ಜಾಲತಾಣಗಳಲ್ಲಿ ಪ್ರಕಟವಾಗುತ್ತಿರುವ ಅವಹೇಳನಕಾರಿ ಸಂದೇಶಗಳನ್ನು ಕೂಡಲೇ ತೆಗೆದುಹಾಕಬೇಕು. ಕಿಡಿಗೇಡಿಗಳ ಈ ರೀತಿಯ ಕೃತ್ಯದಿಂದ ಮಹಿಳೆಯರ ಸ್ಥಾನಮಾನಕ್ಕೆ ಧಕ್ಕೆ ಆಗುತ್ತಿದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಏಕಾಂಗಿಯಾಗಿ ಹೋರಾಡುತ್ತೇನೆ’

‘ಚಿತ್ರರಂಗದ ಕೆಲವರು ನನಗೆ ಬೆಂಬಲ ಸೂಚಿಸಿದ್ದಾರೆ. ಕೆಲವರು ಬಹಿರಂಗವಾಗಿ ಖಂಡನೆ ಮಾಡಲು ಭಯ ಪಟ್ಟಿದ್ದಾರೆ. ಸ್ತ್ರೀದ್ವೇಷಿ ಮನಃಸ್ಥಿತಿಯುಳ್ಳವರ ವಿರುದ್ಧ ಎಲ್ಲರೂ ಧ್ವನಿಯತ್ತಲೇ ಬೇಕು’ ಎಂದು ರಮ್ಯಾ ಹೇಳಿದರು. ದೂರು ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ‘ಇಂತಹ ಪರಿಸ್ಥಿತಿಯಲ್ಲಿ ಸುಮ್ಮನಿರುವುದು ಒಳ್ಳೆಯದಲ್ಲ. ಯಾರೂ ಬೆಂಬಲ ನೀಡದಿದ್ದರೂ ತೊಂದರೆ ಇಲ್ಲ. ನಾನು ಏಕಾಂಗಿಯಾಗಿ ಹೋರಾಡುತ್ತೇನೆ. ದರ್ಶನ್ ಅವರೂ ತಮ್ಮ ಅಭಿಮಾನಿಗಳಿಗೆ ಹೇಳಬೇಕು’ ಎಂದು ಕೋರಿದರು.

‘ನನಗೆ ಅತ್ಯಾಚಾರ ಹಾಗೂ ಕೊಲೆ ಬೆದರಿಕೆ ಬಂದಿದೆ. ರೇಣುಕಸ್ವಾಮಿ ಬದಲು ನಿಮ್ಮನ್ನು ಕೊಲೆ ಮಾಡಬೇಕಿತ್ತು ಎಂದೆಲ್ಲಾ ಕಿಡಿಗೇಡಿಗಳು ಪೋಸ್ಟ್ ಹಾಕಿದ್ದಾರೆ. ಆದಷ್ಟು ಬೇಗ ಕ್ರಮ ಕೈಗೊಳ್ಳುವುದಾಗಿ ಪೊಲೀಸ್ ಕಮಿಷನರ್ ಭರವಸೆ ನೀಡಿದ್ದಾರೆ’ ಎಂದರು.

‘ವಿಜಯಲಕ್ಷ್ಮೀ ಮತ್ತು ರಕ್ಷಿತಾ, ಇಬ್ಬರೂ ಪೋಸ್ಟ್ ಹಾಕಿರೋದು ನನ್ನ ಬಗ್ಗೆ ಅಂತ ಅನಿಸೋದಿಲ್ಲ. ನನಗೆ ಅನಿಸುವ ಮಟ್ಟಿಗೆ ರಕ್ಷಿತಾ ಹೇಳಿರೋದು ಬ್ಯಾಡ್ ಟ್ರೋಲ್‌ಗಳ ವಿರುದ್ಧ. ನಾನು ನ್ಯಾಯದ ಪರ, ನಮ್ಮ ಹಕ್ಕಿನ ಪರವಾಗಿ ಹೋರಾಡುತ್ತಿದ್ದೇನೆ’ ಎಂದು ರಮ್ಯಾ ಹೇಳಿದರು.

ಚಿಟಿಕೆ ಸುದ್ದಿ

ಬಳ್ಳಾರಿ ರಾಘವ ಪ್ರಶಸ್ತಿ: ಇಬ್ಬರು ಆಯ್ಕೆ


ಡಿಂಗ್ರಿ ನಾಗರಾಜ್


ಗುಮ್ಮಡಿ ಗೋಪಾಲಕೃಷ್ಣ

ಬಳ್ಳಾರಿ: ರಂಗಭೂಮಿ ಕಲಾವಿದ ಬಳ್ಳಾರಿ ರಾಘವ ಹೆಸರಿನಲ್ಲಿ ರಾಘವ ಮೆಮೋರಿಯಲ್ ಅಸೋಸಿಯೇಷನ್ ನೀಡುವ ರಾಜ್ಯಮಟ್ಟದ 'ಬಳ್ಳಾರಿ ರಾಘವ' ಪ್ರಶಸ್ತಿಗೆ ರಂಗಕರ್ಮಿ ಮತ್ತು ನಟ ಡಿಂಗ್ರಿ ನಾಗರಾಜ್ ಮತ್ತು ಆಂಧ್ರಪ್ರದೇಶದ ಮೇಡೂರು ಗ್ರಾಮದ ರಂಗಕರ್ಮಿ ಗುಮ್ಮಡಿ ಗೋಪಾಲಕೃಷ್ಣ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹21,100 ನಗದು ಮತ್ತು ಬೆಳ್ಳಿ ಫಲಕ ಹೊಂದಿದೆ.

ಬಳ್ಳಾರಿ ರಾಘವರ ಜಯಂತಿ ಪ್ರಯುಕ್ತ ಆಗಸ್ಟ್ 2 ಮತ್ತು 3ರಂದು ಬಳ್ಳಾರಿಯಲ್ಲಿ ನಡೆಯುವ ಸಮಾರಂಭ ಹಾಗೂ ನಾಟಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸ್ಮಶಾನ ಜಾಗ ಗೊಂದಲ, ಅಂತ್ಯ ಸಂಸ್ಕಾರಕ್ಕೆ ಅಡ್ಡಿ

ಕವಿತಾಳ (ರಾಯಚೂರು ಜಿಲ್ಲೆ): ಮಸ್ಕಿ ತಾಲ್ಲೂಕಿನ ಆನಂದಗಲ್ ಗ್ರಾಮದಲ್ಲಿ ಸ್ಮಶಾನ ಜಾಗ ಕುರಿತು ಉಂಟಾದ ಗೊಂದಲದಿಂದ ಭಾನುವಾರ ಮೃತಪಟ್ಟ ಭೋವಿ ಸಮಾಜದ ಮಹಿಳೆಯ ಅಂತ್ಯಸಂಸ್ಕಾರಕ್ಕೆ ವ್ಯಕ್ತಿಯೊಬ್ಬರು ಅಡ್ಡಿ ಪಡಿಸಿದ್ದಾರೆ ಎನ್ನಲಾಗಿದೆ.

ಸ್ಥಳಕ್ಕೆ ಭೇಟಿ ನೀಡಿದ ಕವಿತಾಳ ಠಾಣೆ ಪಿಎಸ್‌ಐ ವೆಂಕಟೇಶ ನಾಯಕ ಮತ್ತು ಗ್ರಾಮ ಆಡಳಿತಾಧಿಕಾರಿ ರವಿ ಅವರು ಜಮೀನು ಮಾಲೀಕರ ಮನವೊಲಿಸಿ ಅಂತ್ಯ ಸಂಸ್ಕಾರಕ್ಕೆ ಅನುವು ಮಾಡಿಕೊಟ್ಟರು.

'ಸ್ಮಶಾನ ಜಾಗದ ಸರ್ವೆ ಸಂದರ್ಭದಲ್ಲಿ ಮನೆಗಳು ಕಂಡುಬಂದ ಹಿನ್ನೆಲೆಯಲ್ಲಿ ಗೊಂದಲ ಉಂಟಾಗಿದೆ. ತಹಶೀಲ್ದಾರರು ಭೇಟಿ ನೀಡಿ ಸಮಸ್ಯೆ ಪರಿಹರಿಸಲಿದ್ದಾರೆ' ಎಂದು ರವಿ ತಿಳಿಸಿದರು.

ಚುನಾವಣಾ ಕಾರ್ಯಕ್ಕೆ ಶಿಕ್ಷಕೇತರರ ಬಳಕೆ

ಬೆಂಗಳೂರು: ಚುನಾವಣಾ ಕರ್ತವ್ಯಗಳಿಗೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿಯನ್ನು ನಿಯೋಜಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಎಲ್ಲ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಹಾಗೂ ಮತಗಟ್ಟೆ ಅಧಿಕಾರಿಗಳಾಗಿ ಶಿಕ್ಷಕರನ್ನು ನೇಮಿಸುತ್ತಿರುವುದರಿಂದ ನಿತ್ಯದ ಪಾಠಗಳಿಗೆ ತೊಂದರೆಯಾಗುತ್ತಿದೆ. ಇದರಿಂದ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮುಖ್ಯ ಚುನಾವಣಾಧಿಕಾರಿಗೆ ಪತ್ರ ಬರೆದು, ಮನವಿ ಮಾಡಿದ್ದಾರೆ.

ಸುಪ್ರೀಂ ಕೋರ್ಟ್ ಸಹ ರಜಾ ದಿನಗಳು, ಬೋಧಕೇತರ ಅವಧಿಯಲ್ಲಿ ಶಿಕ್ಷಕರನ್ನು ಚುನಾವಣಾ ಕಾರ್ಯಕ್ಕೆ ನಿಯೋಜಿಸಬಹುದು ಎಂದಿದೆ. ಹಾಗಾಗಿ, ಬೋಧಕೇತರ ಹಾಗೂ ಇತರೆ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣಾ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ.

'ಕೇಂದ್ರದಿಂದ ರಸಗೊಬ್ಬರ ಕೊಡಿಸಿ'

ಮದ್ದೂರಿನಲ್ಲಿ ₹1,146 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಗೊಬ್ಬರ ಅಭಾವವಿದೆ ಎಂದು ಚಳವಳಿ ಮಾಡುವುದನ್ನು ಬಿಟ್ಟು, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾದ ರಸಗೊಬ್ಬರವನ್ನು ಬಿಡುಗಡೆ ಮಾಡಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಸವಾಲು ಹಾಕಿದರು.

ಮದ್ದೂರಿನಲ್ಲಿ ಸೋಮವಾರ ₹1,146 ಕೋಟಿ ಮೊತ್ತದ 87 ಕಾಮಗಾರಿಗಳಿಗೆ ಶಂಕುಸ್ಥಾಪನೆ ಮಾಡಿ ಮಾತನಾಡಿದ ಅವರು, 'ಕೇಂದ್ರದಿಂದ ರಾಜ್ಯಕ್ಕೆ 6.80 ಲಕ್ಷ ಟನ್ ರಸಗೊಬ್ಬರ ಪೂರೈಕೆಯಾಗಬೇಕಿತ್ತು. ಆದರೆ, 5.27 ಲಕ್ಷ ಟನ್ ಮಾತ್ರ ಸರಬರಾಜಾಗಿದೆ. ಈ ಬಗ್ಗೆ ನಾನು ಮತ್ತು ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದು ವಾರ ಕಳೆದರೂ, ಬಾಕಿ ರಸಗೊಬ್ಬರ ಬಿಡುಗಡೆಯಾಗಿಲ್ಲ. ಕೇಂದ್ರದ ಪ್ರಭಾವಿ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಗೊಬ್ಬರ ಕೊಡಿಸಲಿ. ನಿಮ್ಮ ಈ ನಾಟಕ ಜನರ ಮುಂದೆ ಬಹಳ ವರ್ಷ ನಡೆಯುವುದಿಲ್ಲ' ಎಂದು ಪ್ರತಿಪಾದಿಸಿದರು.

'ವಿಜಯೇಂದ್ರನಿಂದ ನಾವು ಪಾಠ ಕಲಿಯಬೇಕಾ? ಅವರ ಅಪ್ಪನ (ಬಿ.ಎಸ್.ಯಡಿಯೂರಪ್ಪ) ಸರ್ಕಾರದ ಅವಧಿಯಲ್ಲಿ ರಸಗೊಬ್ಬರ ಕೊಡಲು ಸಾಧ್ಯವಾಗದೆ, ಇಬ್ಬರು ರೈತರನ್ನು ಗೋಲಿಬಾರ್ ಮಾಡಿ ಸಾಯಿಸಿದರು. ನಮ್ಮನ್ನು ಪ್ರಶ್ನಿಸುವ ಇವರಿಗೆ ನಾಚಿಕೆಯಾಗಬೇಕು' ಎಂದರು.

'ತಲಾದಾಯದಲ್ಲಿ ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಇದಕ್ಕೆ ನಾವು ಜಾರಿಗೊಳಿಸಿದ ಪಂಚ ಗ್ಯಾರಂಟಿಗಳೇ ಕಾರಣ. ಮಹಿಳೆಯರ ಉದ್ಯೋಗ ದರ ಜಾಸ್ತಿಯಾಗಿದೆ. ನಿರುದ್ಯೋಗ ಸಮಸ್ಯೆ ನಿವಾರಿಸಿ, ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ' ಎಂದರು.


ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಸೋಮವಾರ ₹1,146 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆಗೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜನರತ್ತ ಕೈಬೀಸಿದರು. ಮದ್ದೂರು ಶಾಸಕ ಕೆ.ಎಂ.ಉದಯ, ಸಚಿವರಾದ ರಹೀಂ ಖಾನ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಜೆಡಿಎಸ್ ನಾಯಕರೇ ಸಮಯ ವ್ಯರ್ಥ ಮಾಡಬೇಡಿ'

'ನಾವು ನಮ್ಮ ಕರ್ತವ್ಯ ಮಾಡುತ್ತಿದ್ದೇವೆ. ರಾಜ್ಯ ಮತ್ತು ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮ ರೂಪಿಸುತ್ತಿದ್ದೇವೆ. ಜೆಡಿಎಸ್ ನಾಯಕರೇ ನೀವು ನಿಮ್ಮ ಸಮಯ ವ್ಯರ್ಥ ಮಾಡಿಕೊಳ್ಳಬೇಡಿ. ಈಗೇನಿದ್ದರೂ ಕಾಂಗ್ರೆಸ್ ಕಾಲ. ಶಿವಪುರ ಸೌಧದಲ್ಲಿ ಹೇಗೆ ರಾಷ್ಟ್ರ ಧ್ವಜ ಹಾರುತ್ತಿದೆಯೋ ಅದೇ ರೀತಿ ರಾಜ್ಯದಲ್ಲಿ ಕಾಂಗ್ರೆಸ್ ಧ್ವಜ ನಿರಂತರವಾಗಿ ಹಾರಾಡಲಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಯೋಗಿ' ಎಂದು ಕರೆಸಿಕೊಳ್ಳುವುದಕ್ಕಿಂತ, 'ಉಪಯೋಗಿ' ಎಂದು ಜನರಿಂದ ಕರೆಸಿಕೊಳ್ಳುವುದು ಮುಖ್ಯ. ದೇವರು ವರ ಮತ್ತು ಶಾಪ ಎರಡನ್ನೂ ಕೊಡುವುದಿಲ್ಲ. ಅವಕಾಶವನ್ನು ಮಾತ್ರ ಕೊಡುತ್ತಾನೆ. ಈ ಅವಕಾಶ ಬಳಸಿಕೊಂಡು ಜನಪರ ಆಡಳಿತ ಕೊಡುತ್ತಿದ್ದೇವೆ ಎಂದರು.

ಸುದ್ದಿ 2 ನಿಮಿಷ

ಪೊಲೀಸ್ ಅಧಿಕಾರಿಗಳ ಅಮಾನತು ವಾಪಸ್

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದಲ್ಲಿ ಪೊಲೀಸ್ ಕಮಿಷನರ್ ಬಿ.ದಯಾನಂದ ಸೇರಿ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.

ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಟಿ. ಶೇಖರ್, ಕಬ್ಬನ್ ಪಾರ್ಕ್ ಎಸಿಪಿ ಸಿ. ಬಾಲಕೃಷ್ಣ ಮತ್ತು ಇನ್‌ಸ್ಪೆಕ್ಟರ್ ಎ.ಕೆ. ಗಿರೀಶ್ ಅವರ ಅಮಾನತು ವಾಪಸ್ ಪಡೆಯಲಾಗಿದೆ. ಈ ಎಲ್ಲ ಅಧಿಕಾರಿಗಳ ಮೇಲೆ ನಿಯಮಾನುಸಾರ ಶಿಸ್ತುಕ್ರಮ ಬಾಕಿಯಿರಿಸಿ, ತಕ್ಷಣದಿಂದ ಕರ್ತವ್ಯಕ್ಕೆ ಮರಳಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಜೂನ್ 4ರಂದು ನಡೆದಿದ್ದ ಕಾಲ್ತುಳಿತ ಘಟನೆ ಸಂಬಂಧಿಸಿದಂತೆ ತನಿಖೆಗೆ ರಾಜ್ಯ ಸರ್ಕಾರವು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ನೇತೃತ್ವದ ಮ್ಯಾಜಿಸ್ಟ್ರಿಯಲ್ ತನಿಖಾ ತಂಡ ಮತ್ತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ನೇತೃತ್ವದ ಏಕ ಸದಸ್ಯ ಆಯೋಗವನ್ನು ರಚಿಸಿತ್ತು. ಏಕ ಸದಸ್ಯ ಆಯೋಗ ಜುಲೈ 10ರಂದು ಹಾಗೂ ಮ್ಯಾಜಿಸ್ಟ್ರಿಯಲ್ ತನಿಖಾ ತಂಡ 11ರಂದು ವರದಿ ಸಲ್ಲಿಸಿದೆ. ಅಲ್ಲದೆ, ಈ ಅಧಿಕಾರಿಗಳು ತಮ್ಮ ಅಮಾನತು ಹಿಂಪಡೆಯುವಂತೆ ಜುಲೈ 27ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಅಮಾನತುಗೊಳಿಸಿ ಹೊರಡಿಸಿದ್ದ ಆದೇಶವನ್ನು ಮರು ಪರಿಶೀಲಿಸಿ, ಕ್ರಮ ತೆಗೆದುಕೊಳ್ಳಲಾಗಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.



ತಮ್ಮನ್ನು ಅಮಾನತು ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ವಿಕಾಸ್ ಅವರು ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿಗೆ (ಸಿಎಟಿ)ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮಂಡಳಿ, ಸರ್ಕಾರದ ಆದೇಶವನ್ನು ರದ್ದುಗೊಳಿಸಿತ್ತು.

ಬಾಲಕಿ ಮೇಲೆ ಅತ್ಯಾಚಾರ; ಆರೋಪಿ ಬಂಧನ

ಕಲಬುರಗಿ: ಶಸ್ತ್ರ ಚಿಕಿತ್ಸೆಗೆ ದಾಖಲಾಗಿದ್ದ ತಂದೆಯ ಆರೈಕೆಗೆ ಆಸ್ಪತ್ರೆಗೆ ಬಂದಿದ್ದ 17 ವರ್ಷದ ಬಾಲಕಿ ಮೇಲೆ ಆಸ್ಪತ್ರೆಯ ಸ್ವಚ್ಛತಾ ಸಿಬ್ಬಂದಿ ಅತ್ಯಾಚಾರ ಮಾಡಿದ ಕೃತ್ಯ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಪ್ರಕರಣದ ಆರೋಪಿಯನ್ನು ಬಂಧಿಸಲಾಗಿದ್ದು, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ವಿವರ: ಕಲಬುರಗಿ ತಾಲ್ಲೂಕಿನ ಗ್ರಾಮವೊಂದರ ವ್ಯಕ್ತಿ ಕಲಬುರಗಿ ಇಎಸ್‌ಐಸಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ದಾಖಲಾಗಿದ್ದರು. ಪತ್ನಿ ಅಂಗವಿಕಲರಾದ ಕಾರಣ ತಮ್ಮ ಆರೈಕೆಗೆ 17 ವರ್ಷದ ಪ್ರಥಮ ಪಿಯುಸಿ ಓದುತ್ತಿರುವ ಮಗಳನ್ನು ಅವರು ಕರೆ ತಂದಿದ್ದರು.

'ಒಂದು ವಾರದಿಂದ ತಂದೆ–ಮಗಳು ಆಸ್ಪತ್ರೆಯಲ್ಲಿದ್ದರು. ಅವರದೇ ಊರಿನ ವ್ಯಕ್ತಿಯೊಬ್ಬ ಅದೇ ಆಸ್ಪತ್ರೆಯಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದ. ಆತನ ಮೂಲಕ ನಿತ್ಯ ಬಟ್ಟೆ ಮತ್ತಿತರ ಸಾಮಗ್ರಿಯನ್ನು ತರಿಸಿಕೊಳ್ಳುತ್ತಿದ್ದರು. ನಿಮ್ಮ ಮನೆಯಿಂದ ಕೊಟ್ಟಿರುವ ಬಟ್ಟೆ ತರಲು ಮಗಳನ್ನು ಕಳುಹಿಸಿ ಎಂದು ಆ ವ್ಯಕ್ತಿ ಹೇಳಿದ್ದ. ಬಟ್ಟೆ ತರಲು ಹೋದಾಗ ವೈದ್ಯಕೀಯ ಕಾಲೇಜಿನ ವಿಶ್ರಾಂತಿ ಕೊಠಡಿಯಲ್ಲಿ ಅತ್ಯಾಚಾರ ಎಸಗಿದ್ದಾನೆ' ಎಂದು ಬಾಲಕಿಯ ತಂದೆ ದೂರಿನಲ್ಲಿ ತಿಳಿಸಿದ್ದಾರೆ. ವಿಶ್ವವಿದ್ಯಾಲಯ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

'1.35 ಲಕ್ಷ ಟನ್ ರಸಗೊಬ್ಬರ ಶೀಘ್ರ'

ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ. ನಡ್ಡಾ ಭೇಟಿಯಾದ ಬಿಜೆಪಿ ಸಂಸದರು

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಸಗೊಬ್ಬರದ ಬಗ್ಗೆ ಕರ್ನಾಟಕ ಕೃಷಿ ಇಲಾಖೆ ಪೂರ್ವಸಿದ್ಧತೆ ಮಾಡಿಕೊಳ್ಳದ ಕಾರಣ ಸಮಸ್ಯೆ ಸೃಷ್ಟಿಯಾಗಿದೆ. ಕೇಂದ್ರ ಸರ್ಕಾರಕ್ಕೆ ಮನವಿ ಕೊಡುವುದೇ ದೊಡ್ಡ ಸಾಧನೆ ಅಲ್ಲ. ರೈತರ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ತ್ವರಿತಗತಿಯಲ್ಲಿ ಸ್ಪಂದಿಸಬೇಕು' ಎಂದು ಬಿಜೆಪಿ ಸಂಸದರು ಆಗ್ರಹಿಸಿದರು.

ಸಂಸದ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸುದ್ದಿಗೋಷ್ಠಿ ನಡೆಸಿದ ಡಾ. ಸಿ.ಎನ್. ಮಂಜುನಾಥ್, ಗೋವಿಂದ ಕಾರಜೋಳ, ಕೋಟ ಶ್ರೀನಿವಾಸ ಪೂಜಾರಿ, ಈರಣ್ಣ ಕಡಾಡಿ, ಪಿ.ಸಿ ಗದ್ದಿಗೌಡರ್, ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ರಾಜ್ಯ ಸರ್ಕಾರಕ್ಕೆ ಕೇಂದ್ರವು ಈ ವರ್ಷ 7.74 ಲಕ್ಷ ಟನ್ ರಸಗೊಬ್ಬರ ವಿತರಣೆ ಮಾಡಿದೆ. 1.35 ಲಕ್ಷ ಟನ್ ಸರಬರಾಜು ಮಾಡಬೇಕಿದೆ. ಈ ಬಗ್ಗೆ ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ.ನಡ್ಡಾ ಅವರನ್ನು ಕೇಂದ್ರ ಸಚಿವರು ಹಾಗೂ ಸಂಸದರು ಸೋಮವಾರ ಭೇಟಿ ಮಾಡಿ ಚರ್ಚೆ ನಡೆಸಿದ್ದೇವೆ. 10–15 ದಿನಗಳಲ್ಲಿ ರಸಗೊಬ್ಬರವು ರಾಜ್ಯಕ್ಕೆ ಸರಬರಾಜು ಆಗಲಿದೆ' ಎಂದು ಬೊಮ್ಮಾಯಿ ತಿಳಿಸಿದರು.

ಈಗಾಗಲೇ 16 ಸಾವಿರ ಟನ್ ರಾಜ್ಯಕ್ಕೆ ತಲುಪುತ್ತಿದೆ. ಈಗಿರುವ ಗೊಬ್ಬರವನ್ನು ಸರಿಯಾಗಿ ವಿತರಣೆ ಮಾಡಬೇಕು. ರಾಜ್ಯ ಸರ್ಕಾರವು ಅಕ್ರಮ ದಾಸ್ತಾನು ಪತ್ತೆ ಹಚ್ಚಬೇಕು ಎಂದು ಅವರು ಆಗ್ರಹಿಸಿದರು.

ರೈತರ ವಿಚಾರದಲ್ಲಿ ಕಾಂಗ್ರೆಸ್‌ನವರು ರಾಜಕೀಯ ಮಾಡಬಾರದು. ಮುಖ್ಯಮಂತ್ರಿ ಪತ್ರ ಬರೆದ ಬಳಿಕ ಕೃಷಿ ಸಚಿವ ಚಲುವರಾಯ ಸ್ವಾಮಿ ಅವರು ಕೇಂದ್ರದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಸಾಗಾಣಿಕೆ ಸಮಸ್ಯೆಯಿಂದ ರೈತರಿಗೆ ರಸಗೊಬ್ಬರ ಸಿಗುತ್ತಿಲ್ಲ. ಈ ಸಮಸ್ಯೆಯನ್ನು ಸರ್ಕಾರ ಪರಿಹರಿಸಬೇಕು ಎಂದು ಅವರು ಸಲಹೆ ನೀಡಿದರು.

'ರಾಜ್ಯದಲ್ಲಿ 1.35 ಲಕ್ಷ ಟನ್ ಗೊಬ್ಬರ ದಾಸ್ತಾನು ಇದೆ. ಇದನ್ನು ಸರಿಯಾಗಿ ಬಳಸಿದರೆ ಸಮಸ್ಯೆ ಬಗೆಹರಿಸಬಹುದು. ಇರುವ ರಸಗೊಬ್ಬರವನ್ನು ಅವಶ್ಯಕತೆ ಆಧಾರದ ಮೇಲೆ ಹಂಚಿಕೆ ಮಾಡಬೇಕು. ಸೆಪ್ಟೆಂಬರ್ ಅಂತ್ಯದವರೆಗೆ 11 ಲಕ್ಷ ಯೂರಿಯಾ, ಡಿಎಪಿ ಬೇಕು. ರಾಜ್ಯ ಸರ್ಕಾರ ಸಂಗ್ರಹ ಮಾಡಿಕೊಳ್ಳಬೇಕಿತ್ತು. ಹಂಚಿಕೆಯಲ್ಲಿ ಅವ್ಯವಸ್ಥೆ ಆಗಿದೆ' ಎಂದರು.

ಈ ಸಲ ಮುಂಗಾರು ಮಳೆ ಚೆನ್ನಾಗಿ ಆಗಿದೆ. ಬಹಳ ರೈತರು ಮೆಕ್ಕೆಜೋಳ ಬೆಳೆಯುತ್ತಿದ್ದಾರೆ. ಒಂದೂವರೆ ಪಟ್ಟು ಬಿತ್ತನೆ ಆಗಿದೆ. ಕೃಷಿ ಇಲಾಖೆಗೂ ಈ ಬಗ್ಗೆ ಮಾಹಿತಿ ಇದೆ. ಮಳೆಯಿಂದ ಪದೇ ಪದೇ ಯೂರಿಯಾ ಕೊಡಬೇಕಾದ ಪರಿಸ್ಥಿತಿ ಬಂದಿದೆ ಎಂದರು.

'ರಾಜ್ಯದಲ್ಲಿ ರಸಗೊಬ್ಬರ ವಿತರಣೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಕರ್ನಾಟಕದಲ್ಲಿ ಗೊಬ್ಬರ ಇದೆ. ಆದರೆ, ರೈತರಿಗೆ ಸಿಗುತ್ತಿಲ್ಲ. ಶ್ರೀಮಂತ ರೈತರು ಹೆಚ್ಚುವರಿ ದುಡ್ಡು ಕೊಟ್ಟು ಖರೀದಿಸುತ್ತಿದ್ದಾರೆ. ಆದರೆ, ಸಣ್ಣ ಮತ್ತು ಅತಿ ಸಣ್ಣ ರೈತರು ಅಂಗಡಿಗಳ ಮುಂದೆ ಸಾಲಿನಲ್ಲಿ ನಿಂತಿದ್ದಾರೆ. ಅನಧಿಕೃತವಾಗಿ ರಸಗೊಬ್ಬರ ದಾಸ್ತಾನು ಮಾಡಿ, ಕಾಳ ಸಂತೆ ಮೂಲಕ ಹೆಚ್ಚುವರಿ ದರಕ್ಕೆ ಮಾರಾಟ ಮಾಡಲಾಗುತ್ತಿದೆ' ಎಂದು ಅವರು ಆರೋಪಿಸಿದರು.

ಮಣ್ಣು ತಿಂದಿದ್ದ ರೈತನಿಗೆ ಯೂರಿಯಾ ಕೊಟ್ಟ ಬಿಜೆಪಿ

ಕೊಪ್ಪಳ: ಯೂರಿಯಾ ರಸಗೊಬ್ಬರ ಸಿಗದ ಕಾರಣಕ್ಕೆ ಮೂರು ದಿನಗಳ ಹಿಂದೆ ನಗರದಲ್ಲಿ ಮಣ್ಣು ತಿಂದು ಆಕ್ರೋಶ ವ್ಯಕ್ತಪಡಿಸಿದ್ದ ತಾಲ್ಲೂಕಿನ ಕುಣಿಕೇರಿ ತಾಂಡಾದ ರೈತ ಚಂದ್ರಪ್ಪ ಬಡಗಿ ಅವರ ಮನೆಗೆ ಸೋಮವಾರ ಬಿಜೆಪಿ ಮುಖಂಡರು ತೆರಳಿ ಸಾಂಕೇತಿಕವಾಗಿ ಎರಡು ಚೀಲ ಯೂರಿಯಾ ನೀಡಿ ಸಂತೈಸಿದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್.ಪಾಟೀಲ್ ನಡಹಳ್ಳಿ ನೇತೃತ್ವದಲ್ಲಿ ಪಕ್ಷದ ಜಿಲ್ಲೆಯ ಮುಖಂಡರು ರೈತನ ಮನೆಗೆ ಭೇಟಿ ನೀಡಿ ಧೈರ್ಯ ತುಂಬಿದರು. ರೈತನ ಮನೆ ಮುಂದೆ ನಿಂತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ನಡಹಳ್ಳಿ 'ರೈತರ ಬಗ್ಗೆ ಕಾಳಜಿ ಇಲ್ಲದ ರಾಜ್ಯ ಕಾಂಗ್ರೆಸ್ ಸರ್ಕಾರ ಅವರಿಗೆ ಮಣ್ಣು ತಿನ್ನಿಸುತ್ತಿದೆ. ಕೇಂದ್ರ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರ ನೀಡಿದರೂ ರಾಜ್ಯ ಸರ್ಕಾರ ಅರ್ಹರಿಗೆ ತಲುಪಿಸುವ ಕೆಲಸ ಮಾಡಿಲ್ಲ' ಎಂದು ಆರೋಪಿಸಿದರು.

'ಶ್ರೀಲಂಕಾ, ಬಾಂಗ್ಲಾದೇಶಕ್ಕೆ ಯೂರಿಯಾ'

ಪ್ರಜಾವಾಣಿ ವಾರ್ತೆ


ಬಿ. ಶ್ರೀರಾಮುಲು

ಬಳ್ಳಾರಿ: 'ರಾಜ್ಯದಲ್ಲಿ ಹಂಚಬೇಕಾದ ಯೂರಿಯಾ ಅಕ್ರಮವಾಗಿ ಶ್ರೀಲಂಕಾ, ಬಾಂಗ್ಲಾದೇಶ ಸೇರಿ ಇತರಡೆ ಸಾಗಣೆ ಆಗುತ್ತಿರುವ ಬಗ್ಗೆ ಅನುಮಾನವಿದೆ. ಇಂಥ ಕೃತ್ಯದಲ್ಲಿ ಅಧಿಕಾರಿಗಳು, ವ್ಯಾಪಾರಸ್ಥರು ಸೇರಿ ಎಲ್ಲರೂ ಶಾಮೀಲು ಆಗಿದ್ದಾರೆ' ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಆರೋಪಿಸಿದರು.

'ಯೂರಿಯಾ ಸಾಕಷ್ಟು ದಾಸ್ತಾನು ಇದೆ ಎಂದು ಅಧಿಕಾರಿಗಳು ಹೇಳಿದರೆ, ಯೂರಿಯಾ ಸಿಗದಿರುವ ಬಗ್ಗೆ ರೈತರು ದೂರುತ್ತಾರೆ. ಅದಕ್ಕೆ ಅಕ್ರಮ ಸಾಗಣೆ ಬಗ್ಗೆ ಶಂಕೆ ಇದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದಲ್ಲಿ ಕಳೆದೊಂದು ವರ್ಷದಲ್ಲಿ 981 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ, ರಾಜ್ಯ ಸರ್ಕಾರ ಈವರೆಗೆ ಒಬ್ಬ ರೈತನ ಕುಟುಂಬಕ್ಕೂ ಸಮರ್ಪಕವಾಗಿ ಪರಿಹಾರ ವಿತರಿಸಿಲ್ಲ' ಎಂದು ತಿಳಿಸಿದರು.

ಅಧಿಕಾರಿಗಳಿಗೆ ರೈತರ ಘೇರಾವ್

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ಕೈಗಾರಿಕೆ ವಲಯ ಸ್ಥಾಪನೆಗಾಗಿ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ 2,823 ಎಕರೆ ಭೂಸ್ವಾಧೀನಕ್ಕೆ ಸರ್ಕಾರ ಅಧಿಸೂಚನೆ ಹೊರಡಿಸಿದ ನಂತರ ಸೋಮವಾರ ಜಮೀನು ಪರಿಶೀಲನೆಗೆ ತೆರಳಿದ್ದ ಅಧಿಕಾರಿಗಳ ತಂಡವನ್ನು ಅಡ್ಡಗಟ್ಟಿದ ರೈತರು ಗ್ರಾಮದೊಳಗೆ ಪ್ರವೇಶಿಸಲು ಬಿಡದೆ ಘೇರಾವ್ ಹಾಕಿದ್ದಾರೆ.

ಪೊಲೀಸ್ ಭದ್ರತೆಯಲ್ಲಿ ಜಂಗಮಕೋಟೆ ಹೋಬಳಿಗೆ ಜಮೀನು ಪರಿಶೀಲನೆಗೆ ತೆರಳಿದ್ದ ಕೆಐಎಡಿಬಿ ವಿಶೇಷ ಭೂಸ್ವಾಧೀನ ಅಧಿಕಾರಿ ಹರಿಶಿಲ್ಪಾ ನೇತೃತ್ವದ ಅಧಿಕಾರಿಗಳ ತಂಡ ಕೆಲವು ಕಡೆಗಳಲ್ಲಿ ಗ್ರಾಮಸ್ಥರು ಹಾಗೂ ರೈತರ ಆಕ್ರೋಶದ ಬಿಸಿ ಎದುರಿಸಬೇಕಾಯಿತು.

ಯಣ್ಣಂಗೂರು ಗ್ರಾಮಕ್ಕೆ ಹೋದ ಅಧಿಕಾರಿಗಳ ತಂಡವನ್ನು ಊರ ಪ್ರವೇಶ ದ್ವಾರದಲ್ಲಿಯೇ ತಡೆದ ರೈತರು ರಸ್ತೆಗೆ ಅಡ್ಡಲಾಗಿ ಕುಳಿತರು. 'ಗ್ರಾಮದೊಳಗೆ ಬಿಡುವುದಿಲ್ಲ. ಮರಳಿ ಹೋಗಿ' ಎಂದು ಅಧಿಕಾರಿಗಳು ಮತ್ತು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪೊಲೀಸರ ಮನವೊಲಿಕೆಗೂ ರೈತರು ಪಟ್ಟು ಸಡಿಲಿಸಲಿಲ್ಲ.

ಇದಕ್ಕೆ ಪ್ರತಿಯಾಗಿ ಮತ್ತೊಂದು ರೈತರ ತಂಡ 'ಭೂಮಿ ಕೊಡಲು ನಾವು ಸಿದ್ಧ. ಅಧಿಕಾರಿಗಳು ಬಂದು ಸ್ಥಳ ಪರಿಶೀಲಿಸಲಿ. ನಮ್ಮದೇನೂ ಅಭ್ಯಂತರ ಇಲ್ಲ' ಎಂದು ರಸ್ತೆಗಿಳಿದರು.

ಪರಿಸ್ಥಿತಿಯ ಗಂಭೀರತೆ ಅರಿತ ಪೊಲೀಸರು, ಅಧಿಕಾರಿಗಳನ್ನು ಜಮೀನುಗಳಿಗೆ ಕರೆದೊಯ್ದರು.

ಪಲ್ಲಕ್ಕಿ ಉತ್ಸವ....

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್


ಶ್ರಾವಣ ಮಾಸದ ಮೊದಲ ಸೋಮವಾರ ಕಲಬುರಗಿಯ ಶರಣ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸಂಜೆ ಪಲ್ಲಕ್ಕಿ ಉತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.60	76,535	79,509
ಹಾರಂಗಿ	2,859	2,853.61	10,107	14,808
ಕಬಿನಿ	2,284.00	2,281.97	31,600	40,000
ಹೇಮಾವತಿ	2,922	2,920.80	25,724	27,900
ಲಿಂಗನಮಕ್ಕಿ	1,819	1,810.50	28,934	2,760.04
ಸೂಪಾ (ಮೀ)	564	550.48	20,630	0
ಮಾಣಿ	595	590.02	4,523	0
ತುಂಗಭದ್ರಾ	1,633	1624.81	1,19,000	1,20,000
ಮಲಪ್ರಭಾ	2,079.5	2,074.30	8,387	1,294
ಘಟಪ್ರಭಾ	2,175	2,171.30	21,026	15,905
ಭದ್ರಾ *	186	180.6	37,226	37,226
ಆಲಮಟ್ಟಿ (ಮೀ)	519.6	517.83	91,548	1,17,231
ನಾರಾಯಣಪುರ (ಮೀ)	492.25	491.36	1,20,000	1,23,400

* ನೆಲಮಟ್ಟದಿಂದ

'ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯಡಿ ಹಣ ಬಳಕೆ'

ಪ್ರಜಾವಾಣಿ ವಾರ್ತೆ


ಮಹದೇವಪ್ಪ

ಬೆಂಗಳೂರು: 'ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಟಿಎಸ್‌ಪಿ (ಬುಡಕಟ್ಟು ಉಪಯೋಜನೆ) ಕಾಯ್ದೆಯ ನಿಯಮಾವಳಿ ಅನ್ವಯವೇ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಸಮುದಾಯದ ಜನರ ಅನುದಾನ ಬಳಕೆಯ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿಗರು ಹೋರಾಟ ನಡೆಸುವುದಾಗಿ ಹೇಳಿರುವುದು ಅತ್ಯಂತ ಹಾಸ್ಯಾಸ್ಪದ' ಎಂದರು.

'ಬಿಜೆಪಿಯವರು ಈ ಹಿಂದೆ ಕಾಯ್ದೆಯ ಸೆಕ್ಷನ್ 7ಡಿ ಬಳಸಿಕೊಂಡು ₹ 10 ಸಾವಿರ ಕೋಟಿಯನ್ನು 'ಡೀಮ್ಡ್ ಎಕ್ಸ್‌ಪೆಂಡಿಚರ್' (ಪರಿಶಿಷ್ಟರ ಅಭಿವೃದ್ಧಿಗೆ ಬಳಸಲಾಗಿದೆ ಎಂದು ಪರಿಭಾವಿಸಿ) ಆಗಿ ಖರ್ಚು ಮಾಡಿದ್ದರು. ಮಹಾನಗರಪಾಲಿಕೆಯಲ್ಲೂ ವೆಚ್ಚ ಮಾಡಿದ್ದರು. ಅವರ ಮೇಲೆ ಕೇಸ್ ಹಾಕಿದ್ದೇವೆ' ಎಂದರು.

'ನಾವು ಅಧಿಕಾರಕ್ಕೆ ಬಂದ ನಂತರ ಸೆಕ್ಷನ್ 7ಡಿ ತೆಗೆದು ಹಾಕಿದ್ದೇವೆ. ಎಸ್‌ಸಿ, ಎಸ್‌ಟಿ ಜನಾಂಗಕ್ಕೆ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ತೆಗೆದಿಡುವ ಹಣವನ್ನು ಆ ಸಮುದಾಯದ ಕಲ್ಯಾಣಕ್ಕೆ ಬಳಕೆ ಮಾಡುತ್ತಿದ್ದೇವೆ. ಕಾಯ್ದೆಯಲ್ಲಿರುವ ನಿಯಮದ ಪ್ರಕಾರವೇ ಗ್ಯಾರಂಟಿ ಯೋಜನೆಗಳಿಗೂ ಖರ್ಚು ಮಾಡುತ್ತಿದ್ದೇವೆ' ಎಂದು ಸ್ಪಷ್ಟನೆ ನೀಡಿದರು.

'ಬಿಜೆಪಿಯವರು ಈ ವಿಚಾರದಲ್ಲಿ ಪದೇ ಪದೇ ರಾಜಕೀಯ ಮಾಡುತ್ತಿದ್ದಾರೆ. ಅವರಿಗೆ ಬದ್ಧತೆ ಇಲ್ಲ. ಅಷ್ಟು ಬದ್ಧತೆ ಇದ್ದರೆ, ಅವರದೇ ನೇತೃತ್ವದ ಕೇಂದ್ರ ಸರ್ಕಾರ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯನ್ನು ಜಾರಿ ಮಾಡಲಿ. ದಲಿತರ ಹಣವನ್ನೇ ಅನ್ಯ ಉದ್ದೇಶಗಳಿಗೆ ಬಿಜೆಪಿಯವರು ಬಳಕೆ ಮಾಡಿದ್ದಾರೆ. ಅವರಿಗೆ ಬದ್ಧತೆ ಇದೆಯೇ' ಎಂದು ಪ್ರಶ್ನಿಸಿದರು.

'ಗ್ಯಾರಂಟಿ ಯೋಜನೆಯಲ್ಲಿ ಎಸ್‌ಸಿ, ಎಸ್‌ಟಿ ಫಲಾನುಭವಿಗಳ ದತ್ತಾಂಶ ಪಡೆದುಕೊಂಡು ನಾವು ಹಣ ಖರ್ಚು ಮಾಡುತ್ತಿದ್ದೇವೆ. ದತ್ತಾಂಶ ಕೊಡುವಂತೆ ಗ್ಯಾರಂಟಿ ಅನುಷ್ಠಾನ ಸಮಿತಿಯವರಿಗೆ ಮತ್ತು ಮುಖ್ಯ ಕಾರ್ಯದರ್ಶಿಗೆ ತಿಳಿಸಿದ್ದೇವೆ. ನಾವು ರಾಜಕೀಯಕ್ಕಾಗಿ, ಮತ ಪಡೆಯುವ ಉದ್ದೇಶದಿಂದ ಗ್ಯಾರಂಟಿ ಯೋಜನೆ ಜಾರಿ ಮಾಡಿಲ್ಲ. ಜನರ ಅಭಿವೃದ್ಧಿಗೆ ಮಾಡಿದ್ದೇವೆ' ಎಂದರು.

ಮುಖ್ಯಾಂಶಗಳು

- ಜನರ ಅಭಿವೃದ್ಧಿಗಾಗಿ ಗ್ಯಾರಂಟಿ ಯೋಜನೆ ಜಾರಿ
- ರಾಜಕೀಯ ಮಾಡುವುದನ್ನು ಬಿಜೆಪಿಯವರು ಬಿಡಲಿ

ಗ್ಯಾರಂಟಿಗೆ ಪರಿಶಿಷ್ಟರ ಅನುದಾನ: ಬಿಜೆಪಿ ಟೀಕೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಎರಡೂವರೆ ವರ್ಷಗಳಲ್ಲಿ ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಶೋಷಿತ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿಗಳಿಗೆ ವರ್ಗಾವಣೆ ಮಾಡಿದೆ. ಸರ್ಕಾರದ ಧೋರಣೆ ವಿರುದ್ಧ ಬಿಜೆಪಿ ಸದನದ ಒಳಗೆ ಮತ್ತು ಹೊರಗಡೆ ಹೋರಾಟ ಮಾಡಿದೆ. ಆದರೂ, ಈ ವರ್ಷವೂ ಎಸ್‌ಸಿಎಸ್‌ಪಿ, ಟಿಎಸ್‌ಪಿಯ ₹11,896 ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿದ್ದಾರೆ. ಈ ಕುರಿತು ಹೋರಾಟ ತೀವ್ರಗೊಳಿಸಲಾಗುವುದು ಎಂದರು.

ಹಿಂದುಳಿದ ವರ್ಗ, ಸಮುದಾಯದ ಕುರಿತು ಮೊಸಳೆ ಕಣ್ಣೀರು ಸುರಿಸುವ ಕಾಂಗ್ರೆಸ್ ನಾಯಕರು ಪರಿಶಿಷ್ಟ ಜಾತಿ, 'ಅಹಿಂದ' ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದಿದ್ದಾರೆ. ಮತ ಬ್ಯಾಂಕ್‌ಗಾಗಿ ಬಳಸಿಕೊಂಡು ಈಗ ಅದೇ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದರು.

ಅನುದಾನ ಇಲ್ಲದೇ ಗ್ಯಾರಂಟಿ: ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಒದಗಿಸಿದ ₹42,017.51 ಕೋಟಿ ಅನುದಾನದಲ್ಲಿ ₹11,896.84 ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ. ಅನುದಾನ ಇಲ್ಲದ ಮೇಲೆ ಯೋಜನೆಗಳನ್ನು ರೂಪಿಸಿದ್ದು ಏಕೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

ಪರಿಶಿಷ್ಟರ ಮೂಗಿಗೆ ತುಪ್ಪ ಸವರಿ, ಬಿಟ್ಟಿ ಪ್ರಚಾರ ಪಡೆದುಕೊಂಡರೆ ಪರಿಶಿಷ್ಟ ಸಮುದಾಯಗಳ ಕಲ್ಯಾಣ ಆಗುವುದಿಲ್ಲ. ಪರಿಶಿಷ್ಟ ಸಮುದಾಯಗಳ ಬಗ್ಗೆ ಸರ್ಕಾರಕ್ಕೆ ಬದ್ಧತೆ ಇಲ್ಲ. ಬಿಡುಗಡೆ ಮಾಡಿದ ಅನುದಾನವೂ ಭ್ರಷ್ಟಾಚಾರದ ಪಾಲಾಗುತ್ತಿದೆ ಎಂದು ದೂರಿದರು.

'ಬೇರೆ ಉದ್ದೇಶಕ್ಕೆ ಬಳಸಿದ್ದರೆ ಬಿಜೆಪಿ ದಾಖಲೆ ನೀಡಲಿ'


ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ನಮ್ಮ ಸರ್ಕಾರ ನಿಯಮ ಬದ್ಧವಾಗಿಯೇ ಖರ್ಚು ಮಾಡುತ್ತಿದೆ. ಅನುದಾನ ಬೇರೆ ಉದ್ದೇಶಕ್ಕೆ ಬಳಸಿಕೊಂಡಿದ್ದರೆ ಬಿಜೆಪಿ ದಾಖಲೆ ನೀಡಲಿ, ಕ್ರಮ ಕೈಗೊಳ್ಳುತ್ತೇವೆ' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಆಡಳಿತಾವಧಿಯಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಎಸ್‌ಸಿಎಸ್ಪಿ, ಟಿಎಸ್ಪಿ ಅನುದಾನ ಬೇರೆಡೆ ಖರ್ಚಾಗಿತ್ತು. ಅದನ್ನು ಬೊಮ್ಮಾಯಿ ಅವರೇ ಒಪ್ಪಿಕೊಂಡಿದ್ದರು. ನಾವು ಅಧಿಕಾರಕ್ಕೆ ಬಂದ ಬಳಿಕ ಈ ಕಾಯ್ದೆಯ '7ಡಿ' ಉಪವಿಧಿ ರದ್ದುಗೊಳಿಸಿದ್ದೇವೆ. ಈಗ 7ಎ, 7ಬಿ,7ಸಿ ನಿಯಮದಡಿಯೇ ಆ ಅನುದಾನವನ್ನು ವಿನಿಯೋಗಿಸುತ್ತಿದ್ದೇವೆ. ನಿಯಮ ಉಲ್ಲಂಘಿಸಿದ್ದರೆ ಹೇಳಲಿ' ಎಂದು ಸವಾಲು ಹಾಕಿದರು.

'ಬಿಜೆಪಿ ನಾಯಕರಿಗೆ ದಲಿತರು, ಆದಿವಾಸಿಗಳ ಬಗೆಗೆ ನಿಜವಾದ ಕಾಳಜಿ ಇದ್ದರೆ, ಕೇಂದ್ರ ಸರ್ಕಾರದ ಮಟ್ಟದಲ್ಲಿ ಎಸ್‌ಸಿಎಸ್ಪಿ, ಟಿಎಸ್ಪಿ ಕಾಯ್ದೆ ಜಾರಿಗೊಳಿಸಲು ಪ್ರಯತ್ನಿಸಲಿ. ಅದನ್ನು ಬಿಟ್ಟು ಆರೋಪಗಳನ್ನು ಮಾಡಿ ಜನರ ದಿಕ್ಕು ತಪ್ಪಿಸುವುದು ಬೇಡ' ಎಂದರು.

ರಸಗೊಬ್ಬರ ವಿಚಾರದಲ್ಲಿ ಪ್ರತಿಭಟಿಸುವುದಿದ್ದರೆ, ಬಿಜೆಪಿಗರು ದೆಹಲಿಯಲ್ಲಿ ಪ್ರತಿಭಟನೆ ಮಾಡಿ ರಾಜ್ಯಕ್ಕೆ ಗೊಬ್ಬರ ತರಿಸಿಕೊಡಲಿ' ಎಂದು ಪ್ರಿಯಾಂಕ್ ಸಲಹೆ ನೀಡಿದರು.

2 ತಿಂಗಳಿಗೊಮ್ಮೆ ಸ್ಥಳ ಬದಲಿಸುತ್ತಿದ್ದ ತಂಡ

ಡ್ರಗ್ಸ್ ಪತ್ತೆ ಪ್ರಕರಣ ಬಳಿಕ ಎಚ್ಚೆತ್ತ ಇಲಾಖೆ: ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಬನ್ನಿಮಂಟಪದ ವರ್ತುಲ ರಸ್ತೆಯ ಉನ್ನತಿ ನಗರದ ಗ್ಯಾರೇಜ್‌ನಲ್ಲಿ ನಡೆಸುತ್ತಿದ್ದ ಮಾದಕ ವಸ್ತು ತಯಾರಿಕಾ ಘಟಕದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದ ಆರೋಪಿಗಳು ಎರಡು ತಿಂಗಳಿಗೊಮ್ಮೆ ಸ್ಥಳ ಬದಲಾಯಿಸುತ್ತಿದ್ದರು. ಅವರ ಜಾಲ ಗುಜರಾತ್‌ನಿಂದ ಆರಂಭವಾಗಿ ಕೇರಳಕ್ಕೂ ಹರಡಿತ್ತು.

'ಪೊಲೀಸರು ಬಂಧಿಸಿರುವ ತಂಡವು ಈ ಹಿಂದೆ ಕೇರಳದ ಪಾಲಕ್ಕಾಡ್, ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮಾದಕ ವಸ್ತು ತಯಾರಿಸುತ್ತಿತ್ತು. ಪೊಲೀಸರು ದಾಳಿ ನಡೆಸಿದಾಗ, ಅಲ್ಲಿಂದ ತಪ್ಪಿಸಿಕೊಂಡು ಇಪ್ಪತ್ತು ದಿನಗಳ ಹಿಂದೆ ಬನ್ನಿಮಂಟಪದ ವರ್ತುಲ ರಸ್ತೆಯ ಕಾರ್ ಗ್ಯಾರೇಜ್‌ನ ಪಕ್ಕದ ಜಾಗದ ಶೆಡ್‌ನಲ್ಲಿ ಬಂದು ಎಂಡಿಎಂಎ ತಯಾರಿಕೆಯಲ್ಲಿ ತೊಡಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಾವಿರ ಚದರ ಅಡಿ ಜಾಗದಲ್ಲಿ ಉಳಿದುಕೊಂಡಿದ್ದ ತಂಡದ ಕುರಿತು ಸ್ಥಳೀಯರಿಗೂ ಮಾಹಿತಿಯಿರಲಿಲ್ಲ. ಶೆಡ್ ಪಕ್ಕದಲ್ಲೇ ಇರುವ ಟೀ ಅಂಗಡಿಗೆ ತಂಡದಲ್ಲಿದ್ದ ಯುವಕನೊಬ್ಬ ಬಂದು ಟೀ ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದ. ಮತ್ತ್ಯಾರು ಹೊರಬರುತ್ತಿರಲಿಲ್ಲ. ಶೆಡ್‌ನೊಳಗೆ ಗಾಳಿ, ಬೆಳಕು ಬರದಂತೆ ಮುಚ್ಚಲಾಗಿತ್ತು' ಎಂದು ಹೇಳಿದ್ದಾರೆ.

'1 ಕೆಜಿ ಎಂಡಿಎಂಎ ಮೌಲ್ಯ ₹50 ಲಕ್ಷ ಎಂದು ಅಂದಾಜಿಸಲಾಗಿದ್ದು, ಅಂತರ ರಾಷ್ಟ್ರೀಯ ಕಳ್ಳ ಮಾರುಕಟ್ಟೆಯಲ್ಲಿ ₹1.5 ಕೋಟಿಗೂ ಹೆಚ್ಚು ಮೌಲ್ಯವಿದೆ ಎನ್ನಲಾಗಿದೆ. ಉನ್ನತಿ ನಗರದ ಘಟಕದಲ್ಲಿ ಕೇವಲ ತಯಾರಿಯಷ್ಟೇ ನಡೆದಿತ್ತು. ಸಂಗ್ರಹ ಕಾರ್ಯವನ್ನಷ್ಟೇ ಆರೋಪಿಗಳು ಮಾಡಿದ್ದರು. ಎರಡು ವಾರಗಳಲ್ಲಿ ದ್ರವ ರೂಪದಲ್ಲಿದ್ದ ಮಾದಕ ವಸ್ತುವನ್ನು ಪೌಡರಾಗಿಸುವ ಗುರಿ ಹೊಂದಿದ್ದರು. ಮಾರಾಟಕ್ಕಾಗಿ ಬೇರೆ ಜನರ ತಂಡವಿದ್ದು, ಈ ಜಾಲದ ಪತ್ತೆಗೆ ತನಿಖೆ ಮುಂದುವರಿದಿದೆ' ಎಂದು ತಿಳಿದು ಬಂದಿದೆ.

ಘಟನೆಯ ಹಿನ್ನೆಲೆ: ನಗರದಲ್ಲಿ ಮಹಾರಾಷ್ಟ್ರ ಹಾಗೂ ಸ್ಥಳೀಯ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಎಂಡಿಎಂಎ ತಯಾರಿಕಾ ಘಟಕ ಪತ್ತೆಹಚ್ಚಿದ್ದರು. ಮುಂಬೈನ ಅಂಧೇರಿಯ ಫಿರೋಜ್ ಮೌಲಾ ಶೇಕ್, ಗುಜರಾತ್‌ನ ಸೂರತ್ ನಿವಾಸಿ ಶೇಕ್ ಆದಿಲ್, ಬೈರೋಚ್‌ನ ಸೈಯದ್ ಮೆಹಫೂಜ್ ಅಲಿ ಅವರನ್ನು ಬಂಧಿಸಲಾಗಿತ್ತು. ಸೈಯದ್ ರಸಾಯನ ವಿಜ್ಞಾನ ಡಿಪ್ಲೊಮಾ ಮಾಡಿದ್ದು, ಆತನೇ ಟೀ ತೆಗೆದುಕೊಂಡು ಹೋಗಲು ಬರುತ್ತಿದ್ದ. ಯಾರೊಂದಿಗೂ ಮಾತನಾಡುತ್ತಿರಲಿಲ್ಲ. 'ಚಾಯಿ ಕೊಡು' ಎಂದು ಹಿಂದಿಯಲ್ಲಿ ಹೇಳುತ್ತಿದ್ದ ಎನ್ನಲಾಗಿದೆ.

ಸ್ಮಶಾನದಲ್ಲೂ ಶೋಧ

ಡ್ರಗ್ಸ್ ಘಟಕ ಪತ್ತೆಯಾದ ಬಳಿಕ ನಗರ ಪೊಲೀಸರು ಎಚ್ಚೆತ್ತಿದ್ದು, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಭಾನುವಾರ ರಾತ್ರಿ ವಿವಿಧೆಡೆ ದಿಢೀರ್ ಕಾರ್ಯಾಚರಣೆ ನಡೆದಿದೆ. ಗಾಂಜಾ ಸೇವಿಸಿದ 26 ಜನ ಪತ್ತೆಯಾಗಿದ್ದು, ಒಬ್ಬ ಪೆಡ್ಲರ್‌ನನ್ನು ಪತ್ತೆಹಚ್ಚಲಾಗಿದೆ.

ಮಂಡಿ ಮೊಹಲ್ಲಾ, ಉದಯಗಿರಿ, ಎನ್ ಆರ್ ಮೊಹಲ್ಲಾ, ನಜರ್‌ಬಾದ್, ಕೆ. ಆರ್ ಮೊಹಲ್ಲಾದ ಸೇರಿ ಹಲವು ಕಡೆ ಏಕಕಾಲಕ್ಕೆ ದಾಳಿ ನಡೆಸಿ 59 ಗೋದಾಮು ಪರಿಶೀಲಿಸಿದ್ದಾರೆ. ಲಾಡ್ಜ್, ಪಿಜಿ ಹಾಸ್ಟೆಲ್, ಗೋಡನ್, ಶೆಡ್, ಸ್ಮಶಾನಗಳಲ್ಲಿ ಶೋಧ ನಡೆಸಿದ್ದಾರೆ. ಗಾಂಜಾ ಮಾರಾಟ ಪ್ರಕರಣದ ಹಿನ್ನೆಲೆಯುಳ್ಳ 35 ಜನರನ್ನು ಕರೆಸಿ ವಿಚಾರಣೆ ನಡೆಸಿದ್ದಾರೆ. ಸೋಮವಾರ ರಾತ್ರಿಯೂ ಕಾರ್ಯಾಚರಣೆ ಮುಂದುವರಿದ್ದು, ವಾಹನಗಳ ತಪಾಸಣೆ ನಡೆಸಿದರು.



ಮೈಸೂರಿನಲ್ಲಿ ಎಂಡಿಎಂಎ ಮಾದಕ ವಸ್ತು ತಯಾರಿಸುತ್ತಿದ್ದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಈ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಸೂಕ್ತ ಕ್ರಮಕ್ಕೆ ಒತ್ತಾಯಿಸಲಾಗುವುದು

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ಯಶವಂತ ವರ್ಮಾಗೆ 'ಸುಪ್ರೀಂ' ಪ್ರಶ್ನೆ

ನಗದು ಪತ್ತೆ ಪ್ರಕರಣ: ಆಂತರಿಕ ತನಿಖಾ ಸಮಿತಿ ವರದಿ ಅಮಾನ್ಯಕ್ಕೆ ಕೋರಿ ಅರ್ಜಿ

ಮುಖ್ಯಾಂಶಗಳು
- ಜುಲೈ 30ಕ್ಕೆ ವಿಚಾರಣೆ ಮುಂದೂಡಿಕೆ
- ಅರ್ಜಿಯೊಂದಿಗೆ ಆಂತರಿಕ ತನಿಖಾ ಸಮಿತಿ ವರದಿ ಸಲ್ಲಿಕೆಗೆ ಸೂಚನೆ

ನವದೆಹಲಿ (ಪಿಟಿಐ): ಮನೆಯಲ್ಲಿ ನಗದು ಪತ್ತೆಯಾದ ಪ್ರಕರಣದಲ್ಲಿ ತಮ್ಮನ್ನು ಅಪರಾಧಿಯಾಗಿಸಿ ಸುಪ್ರೀಂ ಕೋರ್ಟ್‌ನ ಆಂತರಿಕ ತನಿಖಾ ಸಮಿತಿಯು ನೀಡಿರುವ ವರದಿಯನ್ನು ಅಮಾನ್ಯ ಮಾಡಬೇಕು ಎಂದು ಕೋರಿದ್ದ ನ್ಯಾಯಮೂರ್ತಿ ಯಶವಂತ ವರ್ಮಾ ಅವರನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಶ್ನಿಸಿತು.



ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ, ಎ.ಜಿ. ಮಸೀಹ್ ಅವರ ನೇತೃತ್ವದ ಯಶವಂತ ನ್ಯಾಯಪೀಠವು, ವರ್ಮಾ 'ತನಿಖಾ ಸಮಿತಿ ಮುಂದೆ ವಿಚಾರಣೆಗೆ ಹಾಜರಾಗಿದ್ದೇಕೆ? ಆ ವಿಡಿಯೊವನ್ನು ತೆಗೆದುಹಾಕಬೇಕೆಂದು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುವಿರಾ? ತನಿಖೆಯು ಪೂರ್ಣಗೊಂಡು, ವರದಿ ಬಿಡುಗಡೆ ಮಾಡುವವರೆಗೆ ಕಾದಿದ್ದೇಕೆ? ನಿಮ್ಮ ಪರವಾಗಿಯೇ ವರದಿ ಬರುತ್ತದೆಂದು ನಿರೀಕ್ಷೆ ಇತ್ತಾ' ಎಂದು ವರ್ಮಾ ಪರ ವಕೀಲ ಕಪಿಲ್ ಸಿಬಲ್ ಅವರನ್ನು ಪ್ರಶ್ನಿಸಿತು.

ನ್ಯಾ. ವರ್ಮಾ ಅವರು ಸಲ್ಲಿಸಿರುವ ಅರ್ಜಿಯಲ್ಲಿ ಹಲವು ನ್ಯೂನತೆಗಳಿವೆ ಎಂದು ವಿಚಾರಣೆ ವೇಳೆ ಪೀಠ ಹೇಳಿತು.

ಅರ್ಜಿಯೊಂದಿಗೆ ಆಂತರಿಕ ತನಿಖಾ ಸಮಿತಿಯ ವರದಿಯನ್ನು ಸಲ್ಲಿಸುವಂತೆ ನ್ಯಾಯಾಲಯವು ಸೂಚಿಸಿತು.

'ಪ್ರಕ್ರಿಯೆಯು ಸಂವಿಧಾನದ 124ನೇ ವಿಧಿಯಡಿಯಲ್ಲಿ ನಡೆಯಬೇಕು ಮತ್ತು ನ್ಯಾಯಮೂರ್ತಿಯನ್ನು ಸಾರ್ವಜನಿಕ ಚರ್ಚೆಯ ವಿಷಯವಾಗಲು ಸಾಧ್ಯವಿಲ್ಲ' ಎಂದು ಸಿಬಲ್ ಅವರು ತಿಳಿಸಿದರು.

'ಸಂವಿಧಾನದ ಪ್ರಕಾರ ನ್ಯಾಯಮೂರ್ತಿಗಳ ವಿರುದ್ಧ ಸುಪ್ರೀಂ ಕೋರ್ಟ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ ವಿಡಿಯೊ ಬಿಡುಗಡೆ ಮಾಡುವುದು, ಸಾರ್ವಜನಿಕ ನಿಂದನೆ ಮಾಡುವುದು, ಮಾಧ್ಯಮಗಳಲ್ಲಿ ಆರೋಪ ಮಾಡುವುದು ನಿಷಿದ್ಧ' ಎಂದು ಹೇಳಿದರು. ನಂತರ ನ್ಯಾಯಾಲಯವು ಅರ್ಜಿಯ ವಿಚಾರಣೆಯನ್ನು ಜುಲೈ 30ಕ್ಕೆ ಮುಂದೂಡಿತು.

'ಸಂಸತ್ತಿನಲ್ಲಿ ವರ್ಮಾ ಅವರ ವಿರುದ್ಧ ವಾಗ್ದಂಡನೆ ಪ್ರಕ್ರಿಯೆ ನಡೆಸಬೇಕು' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಸಂಜೀವ್ ಖನ್ನಾ ಅವರು ಮೇ 8ರಂದು ಶಿಫಾರಸು ಮಾಡಿದ್ದರು. ಇದನ್ನು ರದ್ದು ಮಾಡಬೇಕು ಎಂದು ವರ್ಮಾ ಕೋರಿದ್ದಾರೆ.

'ಆದಾಗಲೇ ನನ್ನ ವಿರುದ್ಧ ರೂಪಿತವಾದ ಸಂಕಥನ ಅಭಿಪ್ರಾಯದಲ್ಲಿಯೇ ಸಮಿತಿಯು ತನಿಖೆ ನಡೆಸಿದೆ. ತನಿಖೆಯನ್ನು ಬೇಗ ಮುಗಿಸಬೇಕು ಎನ್ನುವ ಕಾರಣಕ್ಕಾಗಿ ಬೇಗ ಮುಗಿಸಲಾಗಿದೆಯೇ ಹೊರತು ನ್ಯಾಯಯುತವಾಗಿ ಅದು ನಡೆದಿಲ್ಲ. ಸಮಿತಿಯು ನನ್ನ ವಾದವನ್ನು ಆಲಿಸಿಲ್ಲ' ಎಂದು ವರ್ಮಾ ಅವರು ಅರ್ಜಿಯಲ್ಲಿ ಆರೋಪಿಸಿದ್ದಾರೆ.

'3 ವರ್ಷ ವಕೀಲಿಕೆ ಕಡ್ಡಾಯ: ಹಿಂದಿನ ಅಧಿಸೂಚನೆಗಳಿಗೆ ಅನ್ವಯಿಸದು'

ಕಾನೂನು ಪದವೀಧರರು ನ್ಯಾಯಾಧೀಶರಾಗಬೇಕಾದರೆ ಕಡ್ಡಾಯವಾಗಿ ಮೂರು ವರ್ಷ ವಕೀಲರಾಗಿ ಕಾರ್ಯನಿರ್ವಹಿಸಿರಬೇಕು ಎಂಬ ನಿಯಮವನ್ನು, ಈ ಕುರಿತ ತೀರ್ಪು ಹೊರಬೀಳುವ ಮೊದಲು ಹೊರಡಿಸಿದ ನೇಮಕಾತಿ ಅಧಿಸೂಚನೆಗಳಿಗೆ ಅನ್ವಯವಾಗದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.



ಜಮ್ಮು–ಕಾಶ್ಮೀರ ನಾಗರಿಕ ಸೇವಾ ಆಯೋಗವು ಮೇ 14ರಂದು ಹೊರಡಿಸಿರುವ ನೇಮಕಾತಿ ಅಧಿಸೂಚನೆಯಲ್ಲಿ, ಮೂರು ವರ್ಷ ವಕೀಲಿಕೆ ಕಡ್ಡಾಯ ಎಂಬ ನಿಯಮವನ್ನು ಉಲ್ಲೇಖಿಸಿಲ್ಲ ಎಂದು ಆಕ್ಷೇಪಿಸಿ ವಕೀಲರಾದ ನವೀದ್ ಭುಖ್ತಿಯಾ ಮತ್ತು ಇತರ ಐವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ವಜಾಗೊಳಿಸಿದೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠವು ಮೂರು ವರ್ಷ ವಕೀಲಿಕೆ ಕಡ್ಡಾಯ ಕುರಿತು ಮೇ 20ರಂದು ತೀರ್ಪು ನೀಡಿತ್ತು. 'ಮೇ 20ರ ತೀರ್ಪು ಮುಂದಿನ ನ್ಯಾಯಾಂಗ ನೇಮಕಾತಿಗೆ ಅನ್ವಯಿಸುತ್ತದೆ. ಈಗಾಗಲೇ ಆರಂಭಗೊಂಡಿರುವ ನೇಮಕಾತಿ ಪ್ರಕ್ರಿಯೆಗಳಿಗೆ ಅನ್ವಯಿಸದು' ಎಂದು ಮುಖ್ಯ ನ್ಯಾಯಮೂರ್ತಿ ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್‌ಚಂದ್ರನ್ ಮತ್ತು ಎನ್.ವಿ. ಅಂಜಾರಿಯಾ ಅವರನ್ನು ಒಳಗೊಂಡ ನ್ಯಾಯಪೀಠ ಸ್ಪಷ್ಟಪಡಿಸಿದೆ.

'ವರದಿ ಬಂದ 20 ದಿನದಲ್ಲಿ ಒಳ ಮೀಸಲಾತಿ ಜಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಸರ್ಕಾರಕ್ಕೆ ಶಿಫಾರಸು ಮಾಡಲು ರಚಿಸಲಾಗಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ವರದಿ ಸಲ್ಲಿಸಿದ 20 ದಿನಗಳಲ್ಲಿ ರಾಜ್ಯ ಸರ್ಕಾರವು ಒಳ ಮೀಸಲಾತಿ ಜಾರಿ ಮಾಡಲಿದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಒಳ ಮೀಸಲಾತಿ ವಿಚಾರದಲ್ಲಿ ಬಿಜೆಪಿ ನಾಯಕರು ಜನರನ್ನು ದಾರಿ ತಪ್ಪಿಸುವ ಮಾತುಗಳನ್ನು ಆಡುತ್ತಿದ್ದಾರೆ' ಎಂದು ಟೀಕಿಸಿದರು.

'ಒಳ ಮೀಸಲಾತಿಗಾಗಿ 1992ರಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ವರದಿ ಸಲ್ಲಿಸಿತ್ತು. ಆದರೆ, ಬಿಜೆಪಿ ಸರ್ಕಾರ ಆ ವರದಿಯನ್ನು ತಿರಸ್ಕರಿಸಿ, ಮುಗಿದ ಅಧ್ಯಾಯ ಎಂದು ಹೇಳಿತ್ತು. ಒಳ ಮೀಸಲಾತಿ ಆಗ್ರಹಿಸಿ ಹೋರಾಟ ಮಾಡುವುದಾಗಿ ಈಗ ಹೇಳುತ್ತಿರುವ ಗೋವಿಂದ ಕಾರಜೋಳ ಅವರು ರಾಜ್ಯದಲ್ಲಿ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದರು. ಎ. ನಾರಾಯಣ ಸ್ವಾಮಿ ಕೇಂದ್ರದಲ್ಲಿ ಸಮಾಜ ಕಲ್ಯಾಣ ಸಚಿವರಾಗಿದ್ದರು. ಈ ಇಬ್ಬರ ಅಧಿಕಾರಾವಧಿಯಲ್ಲಿಯೇ ಸದಾಶಿವ ಆಯೋಗ ವರದಿ ತಿರಸ್ಕೃತ ಆಗಿತ್ತು' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಒಳ ಮೀಸಲಾತಿ ಜಾರಿಗೊಳಿಸಲು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಆ ಬಳಿಕ ಸುಪ್ರೀಂ ಕೋರ್ಟ್ ಒಳ ಮೀಸಲಾತಿ ನೀಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಎಂದು ತೀರ್ಪು ನೀಡಿದೆ. ಅದನ್ನು ಆಧರಿಸಿ ಎಂಪಿರಿಕಲ್ ದತ್ತಾಂಶ ಸಂಗ್ರಹಿಸಲು ಏಕಸದಸ್ಯ ಆಯೋಗ ರಚಿಸಿದ್ದೇವೆ. ಆಯೋಗ ವರದಿ ಸಲ್ಲಿಸಿದ 15ರಿಂದ 20 ದಿನಗಳ ಒಳಗೆ ಒಳ ಮೀಸಲಾತಿ ಜಾರಿ ಮಾಡುತ್ತೇವೆ' ಎಂದರು.

'ಚಿತ್ರದುರ್ಗದ ಸಮಾವೇಶದಲ್ಲೇ ಒಳ ಮೀಸಲಾತಿ ಜಾರಿಯ ಬದ್ಧತೆಯನ್ನು ಕಾಂಗ್ರೆಸ್ ಘೋಷಣೆ ಮಾಡಿದೆ. ಪಕ್ಷ ತನ್ನ ಮಾತಿಗೆ ಬದ್ಧವಾಗಿದೆ. ನಾವು ಒಳ ಮೀಸಲಾತಿ ಜಾರಿ ಮಾಡುವ ಹಂತದಲ್ಲಿರುವಾಗ, ರಾಜಕೀಯ ಕಾರಣಕ್ಕೆ ಬಿಜೆಪಿಯವರು ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಮೀಸಲಾತಿ ವಿರುದ್ಧ ಇರುವವರಿಂದ ನಾವು ನೈತಿಕತೆಯ ಪಾಠ ಕಲಿಯಬೇಕಿಲ್ಲ' ಎಂದರು.

ಆಗಸ್ಟ್ 16ರಿಂದ ಅಸಹಕಾರ ಚಳವಳಿ

ನವದೆಹಲಿ: ಒಳಮೀಸಲಾತಿ ಜಾರಿಗೆ ವಿಳಂಬ ಮಾಡುತ್ತಿರುವ ಕರ್ನಾಟಕ ಸರ್ಕಾರದ ವಿರುದ್ಧ ಆಗಸ್ಟ್ 16ರಿಂದ ಅಸಹಕಾರ ಚಳವಳಿ ನಡೆಸಲಾಗುವುದು. ಮಂತ್ರಿಗಳ ಓಡಾಟಕ್ಕೆ ಬಿಡುವುದಿಲ್ಲ ಎಂದು ಸಂಸದ ಗೋವಿಂದ ಕಾರಜೋಳ ಎಚ್ಚರಿಸಿದರು.



ಗೋವಿಂದ ಕಾರಜೋಳ

ಸೋಮವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್ ತೀರ್ಪಿನ ಜಾರಿಗಾಗಿ ಆ. 1ರಂದು ಸಾಂಕೇತಿಕವಾಗಿ 30 ಜಿಲ್ಲೆಗಳಲ್ಲಿ ಹೋರಾಟ ಮಾಡಲಿದ್ದೇವೆ. 11ರಂದು ವಿಧಾನಸಭೆ ಅಧಿವೇಶನ ಪ್ರಾರಂಭ ಆಗಲಿದ್ದು, ಅಷ್ಟರಲ್ಲಿ ಜಾರಿ ಮಾಡದೇ ಇದ್ದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದರು.

'ಕಾಂಗ್ರೆಸ್ಸಿನವರಿಗೆ ರಾಜ್ಯದಲ್ಲಿ ಸರ್ಕಾರ ನಡೆಸಲು ಬರುತ್ತಿಲ್ಲ. ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ಬಿತ್ತನೆ ಮಾಡಲಾಗುತ್ತದೆ, ಯಾವ್ಯಾವ ಬೆಳೆ ಬಿತ್ತನೆ ಆಗಲಿದೆ, ಡಿಎಪಿ, ಯೂರಿಯಾ ಸೇರಿ ಎಷ್ಟು ಗೊಬ್ಬರ ಬೇಕಾಗಲಿದೆ- ಇಷ್ಟೆಲ್ಲ ಮಾಹಿತಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಮಳೆಗಾಲ ಆರಂಭಕ್ಕೆ ಮುನ್ನವೇ ಪಡೆಯಬೇಕಿತ್ತು. ಯಾವುದೇ ಸಿದ್ಧತೆ ಮಾಡದ ಕಾರಣ ಗಂಭೀರ ಸಮಸ್ಯೆ ಎದುರಾಗಿದೆ' ಎಂದರು.

'ಈ ಸರ್ಕಾರಕ್ಕೆ ದೀನದಲಿತರ ಬಗ್ಗೆ ಕಳಕಳಿ- ಕಾಳಜಿ ಇಲ್ಲ. ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಕೊಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ. ಆದರೆ, ಮತ ಬ್ಯಾಂಕ್ ರಾಜಕಾರಣಕ್ಕಾಗಿ ಪರಿಶಿಷ್ಟ ಉಪಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಈ ಹಣ ದುರ್ಬಳಕೆ ಸರಿಯಲ್ಲ' ಎಂದರು.

ದಲಿತ ಯುವಕನ ಕೊಲೆ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ತಿರುನೆಲ್ವೇಲಿಯಲ್ಲಿ ಐ.ಟಿ ಉದ್ಯೋಗಿಯಾಗಿರುವ 27 ವರ್ಷದ ದಲಿತ ಯುವಕನನ್ನು ಆತನ ಸ್ನೇಹಿತೆಯ ಸಹೋದರ ಕೊಲೆ ಮಾಡಿದ್ದಾನೆ. ಭಾನುವಾರ ನಡೆದ ಈ ಕೃತ್ಯ ಮರ್ಯಾದೆಗೇಡು ಹತ್ಯೆ ಎಂದು ಶಂಕಿಸಲಾಗಿದೆ.

ಕೊಲೆ ಆರೋಪಿ, ಪ್ರಬಲ ಮರವರ್ ಸಮುದಾಯಕ್ಕೆ ಸೇರಿದ ಎಸ್. ಸುರ್ಜಿತ್ (24) ಪೊಲೀಸರಿಗೆ ಶರಣಾಗಿದ್ದಾನೆ. ಕೃತ್ಯಕ್ಕೆ ಸಂಬಂಧಿಸಿದಂತೆ ಆತನ ಪೋಷಕರು- ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳಾದ ಸರವಣನ್ ಮತ್ತು ಕೃಷ್ಣಕುಮಾರಿ ಅವರನ್ನು ವಶಕ್ಕೆ ಪಡೆಯಲಾಗಿದೆ.

ಕೊಲೆಯಾಗಿರುವ ಕವಿನ್ ಸೆಲ್ವ ಗಣೇಶ್ ನೆರೆಯ ತೂತ್ತುಕುಡಿ ಜಿಲ್ಲೆಯ ಆರುಮುಗಮಂಗಲಂ ಮೂಲದವರಾಗಿದ್ದು, ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದರು. ಇವರು ತಿರುನೆಲ್ವೇಲಿ ಪಟ್ಟಣದ ಕೆಟಿಸಿ ನಗರದಲ್ಲಿರುವ ಕ್ಲಿನಿಕ್‌ನಲ್ಲಿ ಸಿದ್ಧ ವೈದ್ಯೆಯಾಗಿ ಕೆಲಸ ಮಾಡುತ್ತಿರುವ ಎಸ್. ಸುಭಾಷಿಣಿ ಎಂಬವರನ್ನು ಪ್ರೀತಿಸುತ್ತಿದ್ದರು. ಶಾಲಾ ದಿನಗಳಿಂದಲೂ ಪರಸ್ಪರ ಪರಿಚಿತರಾಗಿದ್ದರು. ಯುವತಿಯ ಕುಟುಂಬದ ತೀವ್ರ ವಿರೋಧದ ನಡುವೆಯೂ ಇವರ ಪ್ರೀತಿ ಮುಂದುವರಿದಿತ್ತು. ಕವಿನ್ ಭಾನುವಾರ ತಮ್ಮ ಸ್ನೇಹಿತೆಯನ್ನು ಭೇಟಿಯಾಗಲು ಕ್ಲಿನಿಕ್‌ಗೆ ಬಂದಿದ್ದರು. ಅಲ್ಲಿದ್ದ ಆಕೆಯ ಸಹೋದರ ಸುರ್ಜಿತ್, 'ಹೆತ್ತವರು ನಿನ್ನ ಜತೆ ಮಾತನಾಡಲು ಬಯಸಿದ್ದಾರೆ' ಎಂದು ಹೇಳಿ ಕವಿನ್ ಅವರನ್ನು ತನ್ನ ಜತೆ ಕರೆದೊಯ್ದಿದ್ದಾನೆ. ಆದರೆ ಸುರ್ಜಿತ್ ತನ್ನ ದ್ವಿಚಕ್ರ ವಾಹನದಲ್ಲಿ ಏಕಾಂತ ಸ್ಥಳಕ್ಕೆ ಕರೆದೊಯ್ದು, ಕವಿನ್ ಜತೆ ಜಗಳ ಪ್ರಾರಂಭಿಸಿದ್ದಾನೆ. ಪ್ರಬಲ ಸಮುದಾಯ ದಿಂದ ಬಂದ ತನ್ನ ಅಕ್ಕನೊಂದಿಗೆ ಸಂಬಂಧ ಹೊಂದಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾನೆ.

'ಕವಿನ್ ಮುಖದ ಮೇಲೆ ಸುರ್ಜಿತ್ ಖಾರದ ಪುಡಿ ಎರಚಿದ್ದಾನೆ. ಕವಿನ್ ಅಲ್ಲಿಂದ ತಪ್ಪಿಸಿಕೊಂಡು ಓಡಿದ್ದಾನೆ. ಆದರೆ ಸುರ್ಜಿತ್ ಬೆನ್ನಟ್ಟಿಕೊಂಡು ಬಂದು ಹೊಡೆದು ಕೊಲೆ ಮಾಡಿದ್ದಾನೆ' ಎಂದು ಕವಿನ್ ತಾಯಿ ಎಸ್. ತಮಿಳ್‌ಸೆಲ್ವಿ ಪೊಲೀಸರಿಗೆ ದೂರಿನಲ್ಲಿ ತಿಳಿಸಿದ್ದಾರೆ.

ಮಗಳೊಂದಿಗಿನ ಸಂಬಂಧ ಕಡಿತಗೊಳಿಸುವಂತೆ ಯುವತಿಯ ಪೋಷಕರು ಈ ಹಿಂದೆ ತನ್ನ ಮಗನಿಗೆ ಬೆದರಿಕೆ ಹಾಕಿದ್ದರು ಎಂದು ಅವರು ಹೇಳಿದ್ದಾರೆ.

ಇಳಯರಾಜ ಮನವಿ ತಿರಸ್ಕಾರ

ನವದೆಹಲಿ (ಪಿಟಿಐ): ಸಂಗೀತ ಸಂಯೋಜನೆಗೆ ಸಂಬಂಧಿಸಿದಂತೆ ದಾಖಲಾದ ಹಕ್ಕುಸ್ವಾಮ್ಯ ಪ್ರಕರಣವನ್ನು ಬಾಂಬೆ ಹೈಕೋರ್ಟ್‌ನಿಂದ ಮದ್ರಾಸ್ ಹೈಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಸಂಗೀತ ಸಂಯೋಜಕ ಇಳಯರಾಜ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.



ಇಳಯರಾಜ

ಪ್ರಕರಣದ ವರ್ಗಾವಣೆ ಕೋರಿ ಇಳಯರಾಜ ಪರ ಹಾಜರಾಗಿದ್ದ ಹಿರಿಯ ವಕೀಲ ಗೋಪಾಲ್ ಶಂಕರ್ ನಾರಾಯಣನ್ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಲು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ಕೆ.ವಿನೋದ್ ಚಂದ್ರನ್, ಎನ್.ವಿ.ಅಂಜಾರಿಯಾ ನೇತೃತ್ವದ ನ್ಯಾಯಪೀಠವು ನಿರಾಕರಿಸಿದೆ.

'ಸಂಸ್ಥೆಯು ಬಾಂಬೆ ಹೈಕೋರ್ಟ್‌ನಲ್ಲಿ ಪ್ರಕರಣವನ್ನು ದಾಖಲಿಸಿದೆ. ಮದ್ರಾಸ್ ಹೈಕೋರ್ಟ್‌ನಲ್ಲಿ ಯಾವುದೇ ಪ್ರಕರಣವು ಬಾಕಿ ಉಳಿದಿಲ್ಲ' ಎಂದು ಸೋನಿ ಮ್ಯೂಸಿಕ್ ಎಂಟರ್‌ಟೈನ್‌ಮೆಂಟ್ ಪರ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು. ವಾದ ಪುರಸ್ಕರಿಸಿದ ನ್ಯಾಯಾಲಯವು ಇಳಯರಾಜ ಅರ್ಜಿಯನ್ನು ವಜಾಗೊಳಿಸಿತು.

2022ರಲ್ಲಿ ಸೋನಿ ಮ್ಯೂಸಿಕ್ ಎಂಟರ್‌ಟೈನ್‌ಮೆಂಟ್ ಇಂಡಿಯಾ ಸಂಸ್ಥೆಯು ಸಲ್ಲಿಸಿದ್ದ ಮೊಕದ್ದಮೆಯಿಂದ ಕಾನೂನು ಹೋರಾಟ ನಡೆಯುತ್ತಿದೆ. ಇಳಯರಾಜ ಮ್ಯೂಸಿಕ್ ಆ್ಯಂಡ್ ಮ್ಯಾನೇಜ್‌ಮೆಂಟ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯು 536 ಸಂಗೀತ ಕೃತಿಗಳನ್ನು ಬಳಸದಂತೆ ಸೋನಿ ಸಂಸ್ಥೆಯು ತಡೆಯಾಜ್ಞೆ ಕೋರಿದೆ.

ಎನ್‌ಎಚ್‌ಎಂ ನೌಕರರ ಗುತ್ತಿಗೆ ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನೌಕರರ ಸೇವಾ ಗುತ್ತಿಗೆಯನ್ನು ನವೀಕರಿಸಲಾಗಿದೆ. ತೃಪ್ತಿಕರ ಕಾರ್ಯಕ್ಷಮತೆ ಪ್ರದರ್ಶಿಸಿದವರ ಗುತ್ತಿಗೆ ಅವಧಿಯನ್ನು 2026ರ ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ತೃಪ್ತಿಕರವಲ್ಲದ ಕಾರ್ಯಕ್ಷಮತೆ ಹೊಂದಿದವರ ಗುತ್ತಿಗೆ ಅವಧಿಯನ್ನು ಅಕ್ಟೋಬರ್ 31ರವರೆಗೆ ಮಾತ್ರ ವಿಸ್ತರಿಸಲಾಗಿದೆ ಎಂದು ಅಭಿಯಾನ ನಿರ್ದೇಶಕರು ತಿಳಿಸಿದ್ದಾರೆ.

ದಂತಭಾಗ್ಯ: ದಂತಪಂಕ್ತಿ ದರ ₹3000ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗೆ ಉಚಿತವಾಗಿ ದಂತಪಂಕ್ತಿ ನೀಡುವ ದಂತಭಾಗ್ಯ ಯೋಜನೆಯಡಿ ನೀಡುವ ವೆಚ್ಚವನ್ನು ₹2000 ದಿಂದ ₹ 3000ಕ್ಕೆ ಹೆಚ್ಚಳ ಮಾಡಲಾಗಿದೆ.

ದಂತಭಾಗ್ಯ ಯೋಜನೆಯಡಿ ಸೌಲಭ್ಯ ಪಡೆಯಲು ಹಿರಿಯ ನಾಗರಿಕರ ವಯೋಮಿತಿಯನ್ನು 60 ವರ್ಷದ ಬದಲು 45 ವರ್ಷಕ್ಕೆ ಇಳಿಸಲಾಗಿದೆ. ಭಾಗಶಃ ದಂತಪಂಕ್ತಿ ಮಾಡಿದರೆ ₹1000, ಸಂಪೂರ್ಣ ದಂತಪಂಕ್ತಿ ಮಾಡಿದರೆ ₹ 2000 ಅನ್ನು ಸರ್ಕಾರವು ಆಯಾ ಆಸ್ಪತ್ರೆ, ದಂತ ವೈದ್ಯಕೀಯ ಕಾಲೇಜುಗಳಿಗೆ ನೀಡುತ್ತಿತ್ತು.

ದಂತ ಪಂಕ್ತಿಗಳನ್ನು ತಯಾರಿಸುವ ಸಾಮಗ್ರಿಗಳ ವೆಚ್ಚ, ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ಪರಿಷ್ಕರಣೆ ಮಾಡಲು ಆರೋಗ್ಯ ಇಲಾಖೆ ಕೋರಿತ್ತು. ಅದರಂತೆ ದಂತಪಂಕ್ತಿ ದರವನ್ನು ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ಹೆಚ್ಚುವರಿ ಮೊತ್ತವನ್ನು ಪ್ರಸಕ್ತ ಸಾಲಿನಲ್ಲಿ ಇಲಾಖೆಗೆ ಒದಗಿಸಲಾದ ಆಯವ್ಯಯದಲ್ಲಿ ಭರಿಸುವಂತೆ ಸೂಚಿಸಲಾಗಿದೆ.

ಪ್ರಜಾವಾಣಿ
ಮಂಗಳವಾರ • ಜುಲೈ 29, 2025
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಪ್ರೀತಿಸದ ಹೊರತು ನೀವು ಮತ್ತೊಬ್ಬರನ್ನು ಅರಿತುಕೊಳ್ಳಲಾರಿರಿ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಸಫಾಯಿ ಕರ್ಮಚಾರಿಗಳ ಶೋಷಣೆ ಹೀನಾಯ ಪದ್ಧತಿ ಕೊನೆಗೊಳ್ಳಲಿ

ಒಳಚರಂಡಿಗಳು ಹಾಗೂ ಶೌಚದ ಗುಂಡಿಗಳನ್ನು ಸ್ವಚ್ಛಗೊಳಿಸಲು ಅನುಸರಿಸುತ್ತಿರುವ ವಿಧಾನಗಳ ಬಗ್ಗೆ ಈಚೆಗೆ ನಡೆದಿರುವ ದೇಶವ್ಯಾಪಿ ಸಾಮಾಜಿಕ ಲೆಕ್ಕ ಪರಿಶೋಧನೆಯೊಂದು, ನಾಚಿಕೆಗೇಡಿನ ಹಾಗೂ ಅಮಾನವೀಯ ಕಾರ್ಯಾಚರಣೆ ಪದ್ಧತಿಗಳು ಇಂದಿಗೂ ಅಸ್ತಿತ್ವದಲ್ಲಿ ಇರುವುದನ್ನು ಬಹಿರಂಗಪಡಿಸಿದೆ. ಕಾನೂನು ನಿಷೇಧದ ನಡುವೆಯೂ ಒಳಚರಂಡಿ ಹಾಗೂ ಶೌಚಗುಂಡಿಗಳನ್ನು ಕೈಯಿಂದಲೇ ಸ್ವಚ್ಛಗೊಳಿಸುವ ಪದ್ಧತಿ ಮುಂದುವರಿದಿದೆ. ಕೇಂದ್ರದ ಸಾಮಾಜಿಕ ನ್ಯಾಯ ಸಚಿವಾಲಯವು 2023ರ ಸೆಪ್ಟೆಂಬರ್‌ನಲ್ಲಿ ಈ ಅಧ್ಯಯನ ನಡೆಸಿದೆ. ಒಳಚರಂಡಿಗಳನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡಿರುವ ಶೇ 90ಕ್ಕೂ ಹೆಚ್ಚು ಕಾರ್ಮಿಕರ ಬಳಿ ಸುರಕ್ಷತಾ ಉಪಕರಣಗಳು ಇರಲಿಲ್ಲ ಎನ್ನುವುದು ಅಧ್ಯಯನದಿಂದ ತಿಳಿದುಬಂದಿದೆ. ಸುರಕ್ಷಾ ಪರಿಕರಗಳನ್ನು ಬಳಸುತ್ತಿದ್ದರು ಎನ್ನಲಾದವರು ಕೂಡ ಕೈಗವಸು ಹಾಗೂ ಗಮ್‌ಬೂಟುಗಳನ್ನಷ್ಟೇ ಧರಿಸುತ್ತಿದ್ದರು. 2022ರಿಂದ 2023ರ ನಡುವೆ ಎಂಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ವರದಿಯಾದ ಒಟ್ಟು 54 ಸಾವಿನ ಪ್ರಕರಣಗಳನ್ನು ಈ ಲೆಕ್ಕಪರಿಶೋಧನೆಯು ತನಿಖೆಗೆ ಒಳಪಡಿಸಿದೆ. ಈ ಅವಧಿಯಲ್ಲಿ, ಅಪಾಯಕಾರಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವಾಗ ಒಟ್ಟು 150 ಮಂದಿ ಜೀವ ಕಳೆದುಕೊಂಡಿದ್ದಾರೆ. ಒಳಚರಂಡಿ ಹಾಗೂ ಶೌಚಗುಂಡಿಗಳನ್ನು ಮನುಷ್ಯರೇ ಸ್ವಚ್ಛಗೊಳಿಸುವ ಕೆಲಸದ ಎಲ್ಲ ಆಯಾಮಗಳ ಬಗ್ಗೆ ಸಾಮಾಜಿಕ ಲೆಕ್ಕ ಪರಿಶೋಧನೆಯು ಪರಿಶೀಲನೆ ನಡೆಸಿದೆ.

ಈ ಕಾರ್ಯಕ್ಕೆ ಹೇಗೆ ನೇಮಕ ಮಾಡಿಕೊಳ್ಳಲಾಗುತ್ತದೆ, ಸ್ವಚ್ಛತಾ ಸಮಯದಲ್ಲಿ ಯಾವ ಸುರಕ್ಷತಾ ಕ್ರಮಗಳನ್ನು ಪಾಲಿಸಲಾಗುತ್ತದೆ, ಕಾನೂನಿನ ಅರಿವು ಎಷ್ಟರಮಟ್ಟಿಗೆ ಇದೆ ಎನ್ನುವ ಸಂಗತಿಗಳ ಕುರಿತು ಪರಿಶೀಲನೆ ನಡೆಸಲಾಗಿದ್ದು, ಅಧ್ಯಯನದ ಮೂಲಕ ಕಂಡುಕೊಂಡ ಮಾಹಿತಿಯನ್ನು ಸಂಸತ್ತಿಗೆ ತಿಳಿಸಲಾಗಿದೆ.



ಒಳಚರಂಡಿ ಮತ್ತು ಶೌಚಗುಂಡಿಗಳ ಸ್ವಚ್ಛತೆಗೆ ಸಫಾಯಿ ಕರ್ಮಚಾರಿಗಳ ಬಳಕೆ ಅಮಾನವೀಯ. ಹೀನಾಯ ಪದ್ಧತಿ ಇನ್ನಾದರೂ ಕೊನೆಗೊಂಡು, ಶೋಷಣೆ ನಿಲ್ಲಬೇಕು.

ಜೀವ ಕಳೆದುಕೊಂಡಿರುವ 54 ಸಫಾಯಿ ಕರ್ಮಚಾರಿಗಳಲ್ಲಿ 49 ಮಂದಿ ಯಾವುದೇ ಸುರಕ್ಷತಾ ಪರಿಕರಗಳನ್ನು ಧರಿಸಿರಲಿಲ್ಲ. 27 ಪ್ರಕರಣಗಳಲ್ಲಿ, ಸಫಾಯಿ ಕರ್ಮಚಾರಿಗಳಿಂದ ಯಾವುದೇ ಬಗೆಯಲ್ಲಿ ಸಮ್ಮತಿ ಪಡೆದುಕೊಂಡಿರಲಿಲ್ಲ ಹಾಗೂ ಕೆಲಸದಲ್ಲಿ ಇರುವ ಅಪಾಯಗಳ ಬಗ್ಗೆ ಅವರಿಗೆ ಯಾವುದೇ ರೀತಿಯಲ್ಲಿ ಮಾಹಿತಿ ನೀಡಿರಲಿಲ್ಲ. ಒಳಚರಂಡಿಗಳನ್ನು ಹಾಗೂ ಶೌಚಗುಂಡಿಗಳನ್ನು ಕೈಗಳನ್ನು ಬಳಸಿ ಸ್ವಚ್ಛಗೊಳಿಸುವ ಪದ್ಧತಿಯನ್ನು ನಿಷೇಧಿಸುವ ಹಾಗೂ ಆ ಕಾರ್ಯದಲ್ಲಿ ತೊಡಗಿದವರಿಗೆ ಪುನರ್ವಸತಿ ಕಲ್ಪಿಸುವ ಕಾಯ್ದೆಯ ಬಗ್ಗೆ ಈ ಅಧ್ಯಯನ ನಡೆದಿದೆ. ಇಂತಹ ಕೆಲಸಗಳನ್ನು ನಿಷೇಧಿಸಿ ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಹೊರಡಿಸಿದೆ; 'ಸ್ವಚ್ಛ ಭಾರತ' ಅಭಿಯಾನದ ಅಡಿಯಲ್ಲಿ ಹಲವು ಆದೇಶಗಳನ್ನು ಹಾಗೂ ಸಲಹೆಗಳನ್ನು ನೀಡಲಾಗಿದೆ. ಮನುಷ್ಯರು ಕೈಗಳನ್ನು ಬಳಸಿ ಹೊಲಸನ್ನು ಸ್ವಚ್ಛಗೊಳಿಸುವುದನ್ನು ದೇಶದಲ್ಲಿ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಯಂತ್ರಗಳನ್ನು ಬಳಸಿ ಈ ಕೆಲಸ ಮಾಡಲು ಸಾಧ್ಯವಿಲ್ಲದಿದ್ದರೆ, ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಕೈಗಳನ್ನು ಬಳಸಿ ಸ್ವಚ್ಛಗೊಳಿಸಲು ಅವಕಾಶ ಇದೆ. ಕೈಗಳನ್ನು ಬಳಸಿ ಸ್ವಚ್ಛಗೊಳಿಸುವ ಕಾರ್ಯ ಹೇಗೆ ನಡೆಯಬೇಕು ಎಂಬ ಬಗ್ಗೆ ನಿರ್ದಿಷ್ಟವಾದ ಸೂಚನೆಗಳೂ ಇವೆ. ಈ ಸೂಚನೆಗಳನ್ನು ಉಲ್ಲಂಘಿಸಿ, ಯಂತ್ರಗಳಿಂದ ಸಾಧ್ಯವಿರುವಲ್ಲಿ ಮನುಷ್ಯರನ್ನು ಬಳಸಿ ಸ್ವಚ್ಛಗೊಳಿಸುವುದು ಅಮಾನವೀಯ ಹಾಗೂ ಮಾನವಹಕ್ಕುಗಳ ಉಲ್ಲಂಘನೆ.

ಶೌಚಗುಂಡಿಗಳನ್ನು ಕೈಯಿಂದ ಸ್ವಚ್ಛಗೊಳಿಸುವುದು ಅತ್ಯಂತ ಹೀನಾಯವಾದ ಹಾಗೂ ಮನುಷ್ಯನ ಘನತೆಯನ್ನು ಕುಗ್ಗಿಸುವ ವೃತ್ತಿಯಾಗಿದೆ. ಬಡತನ, ಜಾತಿ, ಅನಕ್ಷರತೆ, ಹಿಂದುಳಿದಿರುವಿಕೆ ಮತ್ತು ದಬ್ಬಾಳಿಕೆಯು ಹೇಗೆ ಅಪಾಯಕಾರಿ ಬಗೆಯಲ್ಲಿ ಒಗ್ಗೂಡುತ್ತವೆ ಎನ್ನುವುದನ್ನು ಇದು ತೋರಿಸುತ್ತದೆ. ಮನುಷ್ಯರನ್ನು ಈ ಬಗೆಯಲ್ಲಿ ಹೀನಾಯವಾಗಿ ನಡೆಸಿಕೊಳ್ಳುವ ಪದ್ಧತಿಯು ನಗರಗಳಲ್ಲಿ, ಪಟ್ಟಣಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಶತಮಾನಗಳಿಂದಲೂ ಜಾರಿಯಲ್ಲಿದೆ. ಇದನ್ನು ಕೊನೆಗೊಳಿಸುವುದಕ್ಕೆ ಕಾನೂನಿನಿಂದಲೂ ಸಾಧ್ಯವಾಗಿಲ್ಲ. ಯಂತ್ರಗಳನ್ನು ಬಳಸಿ ಶುಚಿಗೊಳಿಸುವುದು ದುಬಾರಿ ಎಂಬ ನೆಪ ಹೇಳಿ, ನಗರಗಳಲ್ಲಿ ಆ ಕೆಲಸವನ್ನು ಸಫಾಯಿ ಕರ್ಮಚಾರಿಗಳಿಂದ ಮಾಡಿಸಲಾಗುತ್ತಿದೆ. ಸ್ವಚ್ಛತೆಯ ಕೆಲಸದಲ್ಲಿ ತೊಡಗಿದ್ದಾಗ ಮೃತಪಟ್ಟವರಿಗೆ ಪರಿಹಾರ ಮೊತ್ತವನ್ನೂ ಸಮರ್ಪಕವಾಗಿ ನೀಡಲಾಗುತ್ತಿಲ್ಲ ಎಂಬ ಆರೋಪಗಳಿವೆ. ಹಲವು ಕಡೆಗಳಲ್ಲಿ ಸಫಾಯಿ ಕರ್ಮಚಾರಿಗಳಿಗೆ ಪುನರ್ವಸತಿ ಕಲ್ಪಿಸುವ ಯೋಜನೆಗಳು ಪ್ರಗತಿ ಸಾಧಿಸಿಲ್ಲ. ಯಂತ್ರಗಳನ್ನು ಬಳಸಿ ಸ್ವಚ್ಛಗೊಳಿಸುವ ವ್ಯವಸ್ಥೆ ರೂಪಿಸುವ ರಾಷ್ಟ್ರೀಯ ಯೋಜನೆಯು ಅಲ್ಪ ಪ್ರಗತಿಯನ್ನಷ್ಟೇ ಸಾಧಿಸಿದೆ. ಒಳಚರಂಡಿ ಹಾಗೂ ಶೌಚಗುಂಡಿಗಳ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಸಫಾಯಿ ಕರ್ಮಚಾರಿಗಳ ಬಗ್ಗೆ ಸಮೀಕ್ಷೆ ನಡೆಸಿ, ಅದರ ವರದಿಯನ್ನು ಬಹಿರಂಗಪಡಿಸುವ ಮೂಲಕ ಕೇಂದ್ರ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಆ ವರದಿಯನ್ನು ಆಧರಿಸಿ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಕೈಯಿಂದ ಗಲೀಜು ಬಳಿಯುವ ಅಮಾನವೀಯ ಪದ್ಧತಿಯು ಸಂಪೂರ್ಣವಾಗಿ ಇಲ್ಲವಾಗುವಂತೆ ಮಾಡುವ ಇಚ್ಛಾಶಕ್ತಿಯನ್ನು ಕೇಂದ್ರ ಸರ್ಕಾರ ಪ್ರದರ್ಶಿಸಬೇಕಾಗಿದೆ.

ಜಾಲಡಿ

ಸಿನಿಮಾ ಪ್ರಭಾವ



ಸಿನಿಮಾ ಯುವಜನರನ್ನು ಪ್ರಭಾವಿಸುವ ಅತ್ಯಂತ ಪ್ರಬಲ ಮಾಧ್ಯಮ. ಅಲ್ಲಿ ಬರುವ ದ್ವಂದ್ವಾರ್ಥದ ಸಂಭಾಷಣೆಗಳು, ಅರ್ಥವೇ ಇಲ್ಲದಿರುವ ಸಾಹಿತ್ಯ, ದರಿದ್ರ ಹೀರೊಯಿಸಂ, ಎಲ್ಲವನ್ನೂ ಕಾಲೇಜು ವಿದ್ಯಾರ್ಥಿಗಳು ಕಾಪಿ ಮಾಡುತ್ತಾರೆ. ಇತ್ತೀಚೆಗೆ ಬರುತ್ತಿರುವ ಡಾರ್ಕ್ ಥೀಮ್ ಸಿನಿಮಾಗಳು ಎಷ್ಟು ಡೇಂಜರಸ್ ಆಗಿ ಕೆಲಸ ಮಾಡ್ತಿವೆ ಅನ್ನೋದನ್ನ ದಿನ ಬೆಳಗಾದ್ರೆ ನೋಡ್ತಿದೀವಿ.

ಧನಂಜಯ ಎನ್., ಪುಸ್ತಕ ಪ್ರಕಾಶಕ - ಮಾರಾಟಗಾರ, ಫೇಸ್‌ಬುಕ್‌ನಿಂದ

ಕಿಡಿನುಡಿ



ಡಿ.ಕೆ. ಶಿವಕುಮಾರ್ ಅವರು, ಮುಖ್ಯಮಂತ್ರಿ ಕುರ್ಚಿಯನ್ನು ಎಳೆಯುತ್ತಿದ್ದಾರೆ. ಮತ್ತೊಂದೆಡೆ ಸಿ.ಎಂ ಕುರ್ಚಿ ಬಗ್ಗೆ ಖರ್ಗೆ ಅವರು, ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿ ಸ್ಥಾನ ತಪ್ಪಿದ ಬಗ್ಗೆ ಖರ್ಗೆಯವರು ಎಸ್.ಎಂ. ಕೃಷ್ಣ ಅವರು ಬದುಕಿದ್ದಾಗಲೇ ಹೇಳಬೇಕಿತ್ತು. ಈಗ ಹೇಳುವುದು ಕೃಷ್ಣ ಅವರಿಗೆ ಅವಮಾನ ಮಾಡಿದಂತೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 29-7-2000

• ರವಿಕಾಂತ ಪಾಟೀಲ್‌ಗೆ 7 ವರ್ಷ ಶಿಕ್ಷೆ

ಇಂಡಿ, ಜುಲೈ 28– ಸೊಲ್ಲಾಪುರದ ಯುವತಿಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ಇಂಡಿ ಶಾಸಕ ರವಿಕಾಂತ ಪಾಟೀಲ್ ಅವರಿಗೆ ಸೊಲ್ಲಾಪುರ ಜಿಲ್ಲಾ ನ್ಯಾಯಾಲಯ 7 ವರ್ಷ ಶಿಕ್ಷೆ ವಿಧಿಸಿದೆ. ಈ ಪ್ರಕರಣದಲ್ಲಿ ನೆರವು ನೀಡಿದ ಇಬ್ಬರಿಗೆ 2 ವರ್ಷ ಸಜೆ ವಿಧಿಸಲಾಗಿದೆ.

ಒಂದು ವರ್ಷದ ಹಿಂದೆ ಸೊಲ್ಲಾಪುರ ಪೊಲೀಸರು ಇವರ ವಿರುದ್ಧ ಅತ್ಯಾಚಾರದ ಪ್ರಕರಣ ದಾಖಲು ಮಾಡಿಕೊಂಡಿದ್ದರು.

ಕಳೆದ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಜೈಲಿನಲ್ಲಿದ್ದೇ ಅವರು, ಪಕ್ಷೇತರ ಅಭ್ಯರ್ಥಿಯಾಗಿ 2ನೇ ಬಾರಿಗೆ ಶಾಸಕರಾಗಿ ಆಯ್ಕೆ ಆಗಿರುವುದನ್ನು ಇಲ್ಲಿ ಸ್ಮರಿಸಬಹುದು.

75 ವರ್ಷಗಳ ಹಿಂದೆ

ಶನಿವಾರ, 29-7-1950

• ಸಂಸ್ಥಾನದ ವಿರೋಧಿ ಪಕ್ಷಗಳ ಸಮ್ಮೇಳನ

ಬೆಂಗಳೂರು, ಜುಲೈ 28– ಮೈಸೂರು ಸಂಸ್ಥಾನದ ಸೋಷಲಿಸ್ಟ್ ಪಾರ್ಟಿ ಅಧ್ಯಕ್ಷರಾದ ಸಿ.ಜಿ.ಕೆ. ರೆಡ್ಡಿಯವರು ಆಗಸ್ಟ್ 13ರಂದು ಬೆಂಗಳೂರಿನಲ್ಲಿ ಸಂಸ್ಥಾನದ ವಿರೋಧ ಪಕ್ಷಗಳ ಸಮ್ಮೇಳನವೊಂದನ್ನು ಕರೆದಿದ್ದಾರೆ. ಸಂಸ್ಥಾನ ಶಾಸನಸಭೆಯ ವಿರೋಧ ಪಕ್ಷದ ನಾಯಕರಾದ ಜನಾಬ್ ಮಹಮದ್ ಇಮಾಂ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ಆಡಳಿತರೂಢ ಪಕ್ಷವು ಅನುಸರಿಸಬಹುದಾದ ದುರಾಚಾರಗಳನ್ನು ತಡೆಯುವ ಯಶಸ್ವಿ ಕ್ರಮಗಳ ಮೂಲಕ ಸಂಸ್ಥಾನದಲ್ಲಿ ಸ್ವತಂತ್ರ, ಸ್ವಚ್ಛ (ನ್ಯಾಯಬದ್ಧ) ಚುನಾವಣೆಗಳನ್ನು ನಡೆಸುವ ಬಗ್ಗೆ ಮಾರ್ಗಗಳನ್ನು ಹುಡುಕುವುದಕ್ಕಾಗಿಯೇ ಸಮ್ಮೇಳನವನ್ನು ಕರೆಯಲಾಗಿದೆ.

ಎನ್‌ಇಪಿ ಮತ್ತು ಕಸ್ತೂರಿರಂಗನ್



ವಿಶ್ಲೇಷಣೆ

ಪ್ರೊ. ಎಂ.ಕೆ. ಶ್ರೀಧರ್

'ರಾಷ್ಟ್ರೀಯ ಶಿಕ್ಷಣ ನೀತಿ– 2020'ಕ್ಕೆ (ಎನ್‌ಇಪಿ) ಈಗ ಐದು ವರ್ಷ ತುಂಬುತ್ತಿದೆ. ಶಿಕ್ಷಣ ಕ್ಷೇತ್ರದ ಪಯಣದಲ್ಲಿ ಭಾರತವು ಅತ್ಯಂತ ನಾಜೂಕಾದ ಸ್ಥಿತಿಯಲ್ಲಿ ಇರುವ ಸಂದರ್ಭವಿದು. 2020ರ ಜುಲೈ 29ರಂದು, ಕೋವಿಡ್ ಸಾಂಕ್ರಾಮಿಕ ವ್ಯಾಪಕವಾಗಿದ್ದಾಗ 'ಎನ್‌ಇಪಿ' ಜಾರಿಗೆ ಬಂತು. ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಪೂರ್ವ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯ ಹಂತದವರೆಗೆ ಕ್ರಾಂತಿಕಾರಿ ಬದಲಾವಣೆ ತರುವ ಭರವಸೆಯೊಂದಿಗೆ ಹೊಸ ಶಿಕ್ಷಣ ನೀತಿ ಆರಂಭಗೊಂಡಿತು. 1986ರ ರಾಷ್ಟ್ರೀಯ ನೀತಿಯನ್ನು, ಬದಲಾವಣೆಯ ಮಹತ್ವಾಕಾಂಕ್ಷೆಯೊಂದಿಗೆ 'ಎನ್‌ಇಪಿ' ಬದಲಿಸಿತು.

ಈ ವರ್ಷ ಏಪ್ರಿಲ್ 25ರಂದು ದೇಶದ ಪ್ರಸಿದ್ಧ ವಿಜ್ಞಾನಿ ಕೆ. ಕಸ್ತೂರಿರಂಗನ್ ನಿಧನರಾದರು. ದೂರದೃಷ್ಟಿಯುಳ್ಳ ವಿಜ್ಞಾನಿಯೂ ಶಿಕ್ಷಣ ತಜ್ಞರೂ ಆಗಿದ್ದ ಅವರ ನೇತೃತ್ವದ ಸಮಿತಿಯೇ 'ಎನ್‌ಇಪಿ' ಕರಡನ್ನು ಸಿದ್ಧಪಡಿಸಿದ್ದು.

ದೂರದೃಷ್ಟಿಯುಳ್ಳ ಹಾಗೂ ರಚನಾತ್ಮಕ ಸುಧಾರಕರಾಗಿ ಈ ಸಂದರ್ಭದಲ್ಲಿ ನಾವು ಕಸ್ತೂರಿರಂಗನ್ ಅವರನ್ನು ಸ್ಮರಿಸಿಕೊಳ್ಳಬೇಕು.

ಕಸ್ತೂರಿರಂಗನ್ ಅವರ ಚುರುಕುಮತಿಯಷ್ಟೇ ಅಲ್ಲದೆ, ಅವರಲ್ಲಿನ ಸೂಕ್ಷ್ಮ ಪ್ರಜ್ಞೆ ಕೂಡ ಎಲ್ಲರನ್ನೂ ಆಕರ್ಷಿಸುತ್ತಿತ್ತು. ವಿಜ್ಞಾನ ಹಾಗೂ ಬಾಹ್ಯಾಕಾಶ ಸಂಶೋಧನೆಯ ಹಿನ್ನೆಲೆಯಿಂದ ಬಂದವರಾದರೂ ಅವರು ತಮ್ಮನ್ನು ತಾವು ಶಿಕ್ಷಣದ ಸಂಕೀರ್ಣ ಸಂಗತಿಗಳಲ್ಲಿ ತೊಡಗಿಸಿಕೊಂಡರು. ಶಾಲೆಯಿಂದ ವಿಶ್ವವಿದ್ಯಾಲಯದವರೆಗಿನ ಶಿಕ್ಷಣದ ಆಮೂಲಾಗ್ರ ಸುಧಾರಣೆಗೆ ಅವರು ಕಟಿಬದ್ಧರಾಗಿದ್ದರು. ಈ ನಿಟ್ಟಿನಲ್ಲಿ ಪಠ್ಯಕ್ರಮ ಹೇಗಿರಬೇಕೆಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು. ಶಿಕ್ಷಣದಲ್ಲಿ ಹೊಸತನ ತರುವುದು ಹೇಗೆಂದು ನಿರಂತರವಾಗಿ ಚಿಂತಿಸುತ್ತಿದ್ದರು. ಶಿಕ್ಷಣ ಕುರಿತು ಅವರು ಖುದ್ದು ವಿಷಯದ ಆಳಕ್ಕಿಳಿದು, ಆ ವಿಷಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಅರಿತುಕೊಂಡ ಸಂಗತಿಯನ್ನು ವ್ಯವಸ್ಥೆಯ ಸುಧಾರಣೆಗೆ ಅಳವಡಿಸಲೇಬೇಕು ಎಂಬ ಬದ್ಧತೆ ಅವರಲ್ಲಿ ಇತ್ತು.

ಎನ್‌ಇಪಿ ಸಿದ್ಧಪಡಿಸುವಾಗ, ಮಾಹಿತಿಯನ್ನು ಕಲೆಹಾಕುವ ಸಾಧ್ಯತೆಗಳ ಬಗ್ಗೆ ಅವರದು ಮುಕ್ತ ಮನೋಧರ್ಮ ಆಗಿತ್ತು. ಸಮುದಾಯಗಳ ಮುಖಂಡರು, ಅಲ್ಪಸಂಖ್ಯಾತ ಸಮುದಾಯಗಳು, ಬುಡಕಟ್ಟು ಜನರು, ಈಶಾನ್ಯ ರಾಜ್ಯಗಳ ಜನರು, ಲಿಂಗತ್ವ ಅಲ್ಪಸಂಖ್ಯಾತರು– ಈ ಎಲ್ಲರಿಂದಲೂ ಅವರು ಮಾಹಿತಿ ಪಡೆದುಕೊಂಡಿದ್ದರು. ಹೀಗೆ ಮಾಹಿತಿ ಪಡೆಯುವಾಗ ಅವರು, ಮಾಹಿತಿ ನೀಡುವವರೊಂದಿಗೆ ನಮ್ರ ಮನೋಭಾವದಿಂದ ವರ್ತಿಸುತ್ತಿದ್ದರು. ಮೇಲ್ಮಟ್ಟದ ಮಾತುಕತೆ ನಡೆಸಿ, ಅವರು ಸುಮ್ಮನಾಗುತ್ತಿರಲಿಲ್ಲ. ಪ್ರತಿಯೊಂದು ಸಲಹೆಯನ್ನು ದಾಖಲಿಸಿಕೊಂಡು, ಪರಿಶೀಲಿಸುತ್ತಿದ್ದರು. ಆ ಸಲಹೆ ಶಿಕ್ಷಣ ನೀತಿಯಲ್ಲಿ ಸಮರ್ಪಕವಾಗಿ ಮಿಳಿತವಾಗುವಂತೆ ಕಾಳಜಿ ವಹಿಸುತ್ತಿದ್ದರು. ಎನ್‌ಇಪಿಗೆ ಸಂಬಂಧಿಸಿದಂತೆ ಸಂವಾದ ನಡೆಯುವಾಗ, ವಿವಿಧ ಸಮಾಜೋ–ಸಾಂಸ್ಕೃತಿಕ ಹಿನ್ನೆಲೆಯವರು ತೊಡಗಿದ್ದಾರೆಯೇ ಇಲ್ಲವೇ ಎನ್ನುವುದನ್ನು ಖಾತರಿಪಡಿಸಿಕೊಳ್ಳುತ್ತಿದ್ದರು. ಇದರ ಫಲಿತವಾಗಿಯೇ, ಎನ್‌ಇಪಿ ರೂಪರೇಷೆಯಲ್ಲಿ 'ಎಲ್ಲರ ಒಳಗೊಳ್ಳುವಿಕೆ' ಎನ್ನುವುದು ನಿಜಾರ್ಥದಲ್ಲಿ ಇತ್ತೇ ವಿನಾ ಔಪಚಾರಿಕ ತೋರಿಕೆಗೆ ಎಂಬಂತೆ ಇರಲಿಲ್ಲ.

ಕಸ್ತೂರಿರಂಗನ್ ಅವರು ಪೂರ್ವ ನಿಶ್ಚಿತ ಉತ್ತರಗಳೊಂದಿಗೆ ಯಾವುದೇ ವಾಗ್ವಾದ ಶುರು ಮಾಡುತ್ತಿರಲಿಲ್ಲ. ವಿವಿಧ ದೃಷ್ಟಿಕೋನಗಳಿಗೆ ಅವಕಾಶ ಕಲ್ಪಿಸಬೇಕು ಎನ್ನುವ ಎಚ್ಚರ ಸದಾ ಅವರಲ್ಲಿ ಇರುತ್ತಿತ್ತು. ಆ ಎಚ್ಚರ ಎನ್‌ಇಪಿ ಸಲಹಾ ಸಭೆಗಳಲ್ಲಿ ಎದ್ದು ಕಾಣುತ್ತಿತ್ತು. ಹಿಂದಿನ ನೀತಿಗಳಲ್ಲಿನ ಮಾಹಿತಿಯನ್ನು ಕರಡು ರೂಪಿಸಲು ಅಗತ್ಯ ಅಧ್ಯಯನಕ್ಕೆಂದು ಪರಿಗಣಿಸುವುದು ಸಹಜ. '21ನೇ ಶತಮಾನದಲ್ಲಿ ಹೊಸ ರೀತಿಯಲ್ಲಿ ಆಲೋಚಿಸಿ, ಇಂದಿನ ಸವಾಲುಗಳನ್ನು ಮನಗಂಡು, ನಾಳಿನ ಸದೃಢ ಭಾರತ ನಿರ್ಮಾಣಕ್ಕಾಗಿ ನೀತಿ ರೂಪಿಸೋಣ' ಎಂದವರು ಹೇಳುತ್ತಿದ್ದರು. ನಡೆದುಬಂದ ದಾರಿಯ ಅರಿವು, ಅನುಭವದೊಂದಿಗೆ ವರ್ತಮಾನದ ಸವಾಲುಗಳನ್ನೂ ಒಳಗೊಂಡು ದೇಶದ ಭವಿಷ್ಯವನ್ನು ರೂಪಿಸುವ ದಾರ್ಶನಿಕ ಪ್ರಜ್ಞೆ ಅವರ ಕಾರ್ಯವಿಧಾನದ ಭಾಗವಾಗಿತ್ತು.

ಅಸಾಧಾರಣವಾದ ಸಂಯಮ ಕಸ್ತೂರಿರಂಗನ್ ಅವರ ವ್ಯಕ್ತಿತ್ವದಲ್ಲಿ ಎದ್ದುಕಾಣುತ್ತಿದ್ದ ಅಂಶ. ವೈಯಕ್ತಿಕವಾಗಿ ಉಂಟಾಗುವ ದೋಷಗಳು ಅಥವಾ ಸಾಂಸ್ಥಿಕವಾಗಿ ಆಗುವ ವಿಳಂಬದ ಕುರಿತು ಅವರೆಂದೂ ದೂರುತ್ತಿರಲಿಲ್ಲ. ಪ್ರಕ್ರಿಯೆಯು ನಿಧಾನಗತಿಯಲ್ಲಿ ಸಾಗುತ್ತಿದ್ದಾಗಲೂ ತಾಳ್ಮೆಯಿಂದ ಪ್ರತಿಕ್ರಿಯಿಸುತ್ತಿದ್ದರು. ಸರಿಯಾದ ರೀತಿಯಲ್ಲಿ ಗಮನಹರಿಸಿ, ಸಮರ್ಪಕವಾಗಿ ಕೆಲಸ ಪೂರೈಸುವಂತೆ ಸಹೋದ್ಯೋಗಿಗಳನ್ನು ಉತ್ತೇಜಿಸುತ್ತಿದ್ದರು. ಅವರ ಸ್ಥಿತಪ್ರಜ್ಞೆಯೇ ಸಂಕೀರ್ಣವಾದ ಸಂವಾದಗಳು ಅರ್ಥಪೂರ್ಣವಾಗಿ ನಡೆಯಲು ಪ್ರೇರಕಶಕ್ತಿಯಂತೆ ಇತ್ತು. ಏರಿದ ದನಿಯಲ್ಲಿ ಅವರು ಮಾತನಾಡಿದ್ದು ವಿರಳ. ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡುವುದು ಅವರ ಅಭ್ಯಾಸ ಆಗಿರಲಿಲ್ಲ. ಮೇಲಿನ ಶ್ರೇಣಿಯಲ್ಲಿ ಇರುವವರು ಉಳಿದವರೊಡನೆ ದರ್ಪದ ಧೋರಣೆಯಿಂದ ಮಾತನಾಡಲು ಅಥವಾ ವ್ಯವಹರಿಸಲು ಅವರು ಅವಕಾಶವನ್ನೇ ಕೊಡುತ್ತಿರಲಿಲ್ಲ. ಉನ್ನತ ಅಧಿಕಾರಿಗಳಿಂದ ಹಿಡಿದು ಯುವ ಸಂಶೋಧಕರವರೆಗೆ ಎಲ್ಲರ ಅಭಿಪ್ರಾಯವನ್ನೂ ಗೌರವಿಸುತ್ತಿದ್ದರು. ಎಲ್ಲರನ್ನೂ ಹೆಸರು ಹಿಡಿದೇ ಮಾತನಾಡಿಸುತ್ತಿದ್ದುದು ಅವರ ವೈಶಿಷ್ಟ್ಯವಾಗಿತ್ತು.

ಸಮಯಪ್ರಜ್ಞೆ ಕಸ್ತೂರಿರಂಗನ್ ಅವರ ಮತ್ತೊಂದು ಅನುಕರಣೀಯ ಗುಣ. ಸಭೆಗಳಿಗೆ ತಡವಾಗಿ ಬರುವ ಪೈಕಿ ಅವರಾಗಿರಲಿಲ್ಲ. ಸಾಕಷ್ಟು ಮುಂಚಿತವಾಗಿ ಸಭೆಗಳಿಗೆ ಬರುತ್ತಿದ್ದ ಅವರು, ಆ ಸ್ಥಳದಲ್ಲಿ ಸಿದ್ಧತೆ ನಡೆಯುತ್ತಿದ್ದರೂ ತಾಳ್ಮೆಯಿಂದ ನೋಡುತ್ತಾ ನಿಲ್ಲುತ್ತಿದ್ದರು. ಪಾಲ್ಗೊಳ್ಳಲು ಬರುತ್ತಿದ್ದ ಪ್ರತಿಯೊಬ್ಬರನ್ನೂ ಸಹೃದಯತೆಯಿಂದ ಮಾತನಾಡಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಸಂಶೋಧನಾ ಸಹಾಯಕರು ಹಾಗೂ ಸಿಬ್ಬಂದಿಯಿಂದ ನೇರವಾಗಿ ಮಾಹಿತಿ ಪಡೆಯುತ್ತಿದ್ದರು.

ಎನ್‌ಇಪಿ ಸಿದ್ಧಗೊಂಡ ನಂತರ, ತಾಂತ್ರಿಕ ಸಮಿತಿಯ ಯುವ ಸಂಶೋಧಕರನ್ನೂ ಒಳಗೊಂಡಂತೆ ಎಲ್ಲರಿಗೂ ಖುದ್ದು ಅವರೇ ಧನ್ಯವಾದ ಹೇಳಿ ಪತ್ರ ಬರೆದಿದ್ದರು. ಅವರ ಕೈಬರಹದ ಆ ಪತ್ರಗಳು ಎಷ್ಟೋ ಮನೆಗಳಲ್ಲಿ ಚೌಕಟ್ಟು ಹಾಕಿಸಿಕೊಂಡು ಸಾರ್ಥಕ್ಯದ ಬಿಂಬಗಳಂತೆ ಉಳಿದಿವೆ. ಸಾಮಾನ್ಯವಾಗಿ, ಬೃಹತ್ ಯೋಜನೆಯ ಕೆಲಸಗಳಲ್ಲಿ ತೊಡಗಿಸಿಕೊಳ್ಳುವವರನ್ನು ವ್ಯವಸ್ಥೆಯು ಮರೆತುಬಿಡುವುದೇ ಹೆಚ್ಚು. ಕಸ್ತೂರಿರಂಗನ್ ಅವರ ಪತ್ರಗಳು ಆ ಧೋರಣೆಗೆ ಅಪವಾದ ಎನ್ನುವಂತಿವೆ. ಅವರು ಯಾವುದೇ ವಿಷಯವನ್ನು ತಮ್ಮೊಂದಿಗೆ ಕೆಲಸ ಮಾಡುವವರ ಮೇಲೆ ಹೇರುತ್ತಿರಲಿಲ್ಲ.

> 'ರಾಷ್ಟ್ರೀಯ ಶಿಕ್ಷಣ ನೀತಿ'ಗೆ ಐದು ವರ್ಷ ತುಂಬುತ್ತಿದೆ. ಈ ಸಂದರ್ಭ, 'ಎನ್‌ಇಪಿ' ಕರಡು ಸಮಿತಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಕಸ್ತೂರಿರಂಗನ್ ಅವರನ್ನು ನೆನಪಿಸಿಕೊಳ್ಳುವ ಸಂದರ್ಭವೂ ಹೌದು. ದೇಶದ ಪ್ರಮುಖ ವಿಜ್ಞಾನಿಗಳಲ್ಲಿ ಒಬ್ಬರಾದ ಅವರು, ತಮ್ಮ ಅಪಾರ ಅನುಭವ, ತಿಳಿವಳಿಕೆಯನ್ನು 'ಎನ್‌ಇಪಿ'ಗಾಗಿ ವಿನಿಯೋಗಿಸಿದ್ದರು.

ಗಮನಿಸುತ್ತಿದ್ದರು, ಉತ್ತೇಜಿಸುತ್ತಿದ್ದರು, ಉಳಿದವರು ಬೆಳೆಯಲು ಅಗತ್ಯವಿರುವ ಅವಕಾಶವನ್ನು ಸೃಷ್ಟಿಸುತ್ತಿದ್ದರು. ಸಂಗಡಿಗರು ತಾವೇ ಜವಾಬ್ದಾರಿ ವಹಿಸಿಕೊಳ್ಳಲು ಮುಂದಾದರೆ, ಅದನ್ನು ಅವರಿಗೆ ವಹಿಸಿ ಬೆನ್ನಹಿಂದೆ ನಿಲ್ಲುತ್ತಿದ್ದರು. ಎಲ್ಲವನ್ನೂ ಮೈಮೇಲೆ ಎಳೆದುಕೊಳ್ಳದೆ, ಸಣ್ಣಪುಟ್ಟ ಕೆಲಸಗಳನ್ನು ತಂಡದಲ್ಲಿ ಇರುವವರು ಮಾಡಲು ಅವರು ಪ್ರೇರಣೆ ನೀಡುತ್ತಿದ್ದ ರೀತಿ ಇದಾಗಿತ್ತು.

ಶೈಕ್ಷಣಿಕ ಕ್ಷೇತ್ರದಲ್ಲಿ ಕಸ್ತೂರಿರಂಗನ್ ಅವರ ಅನನ್ಯತೆ ಎದ್ದುಕಾಣಿಸುತ್ತಿದ್ದುದು, ಉದ್ದೇಶ ಮತ್ತು ನೀತಿಯನ್ನು ಪರಸ್ಪರ ಬೆಸೆಯುವುದರಲ್ಲಿ. ವಿಜ್ಞಾನದ ಅರಿವು ಅವರಲ್ಲಿ ತೀವ್ರ ಸಂಶೋಧನಾ ಪ್ರಜ್ಞೆಯನ್ನು ಮೂಡಿಸಿತ್ತಾದರೂ, ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಿಕೆಯು ಸಹಾನುಭೂತಿಯನ್ನೂ ಅವರಲ್ಲಿ ರೂಢಿಸಿತ್ತು. ಶಿಕ್ಷಣ ಎನ್ನುವುದು ವಿಷಯದ ಕಲಿಕೆ ಮಾತ್ರವಲ್ಲ; ಸನ್ನಿವೇಶವನ್ನು ಅರ್ಥ ಮಾಡಿಕೊಂಡು ಮನನ ಮಾಡಿಕೊಳ್ಳುವುದು, ಸಂಸ್ಕೃತಿ ಹಾಗೂ ಸನ್ನಡತೆಯನ್ನು ರೂಢಿಸಿಕೊಳ್ಳುವುದು ಎನ್ನುವುದು ಅವರ ತಿಳಿವಳಿಕೆಯಾಗಿತ್ತು. ಆ ತಿಳಿವಳಿಕೆ ಶಿಕ್ಷಣವನ್ನು ಒಂದು ಮೌಲ್ಯವಾಗಿ ಕಾಣುವುದಕ್ಕೆ ಪೂರಕವಾಗಿತ್ತು.

ಅವರು ಯಃಕಶ್ಚಿತ್ ಓರ್ವ ನಾಯಕರಾಗಿ ಮಾತ್ರ ಇರಲಿಲ್ಲ; ಪರಿವರ್ತನೆ ಬಯಸುವ ನೇತಾರನಂತೆ ಇದ್ದರು. ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವ ಮಹತ್ವದ ಹೊಣೆಗಾರಿಕೆ ವಹಿಸಿದಾಗ, ಅವರು ಅದನ್ನು ಸ್ವೀಕರಿಸಿದ ಬಗೆ ಹಾಗೂ ಆ ನೀತಿಯ ಕರಡನ್ನು ಸಿದ್ಧ ಮಾಡಿದ ಪ್ರಕ್ರಿಯೆಯಲ್ಲಿನ ದೂರದೃಷ್ಟಿ ಅಸಾಧಾರಣವಾದುದು. ಶಿಕ್ಷಣವು ಅವರಿಗೆ ಸಹಜವಾದ ಕ್ಷೇತ್ರವಾಗಿರಲಿಲ್ಲ. ಬುದ್ಧಿ ಮತ್ತು ಹೃದಯದಿಂದ ತಮಗೆ ದೊರೆತ ಅವಕಾಶವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದರು. ಎಲ್ಲರಿಗೂ, ಎಲ್ಲಕ್ಕೂ ಮಿಡಿಯುವ ಹೃದಯವಂತ ಅವರಾಗಿದ್ದರು.

'ನೀವು ರೂಪಿಸುತ್ತಿರುವ ಶಿಕ್ಷಣ ನೀತಿಯು 2040ರವರೆಗೆ ಚಾಲ್ತಿಯಲ್ಲಿ ಇರುತ್ತದೆ' ಎಂದು ಅವರು ಪದೇ ಪದೇ ಎಚ್ಚರಿಸುತ್ತಿದ್ದರು. ಆ ಎಚ್ಚರದ ಮಾತು ನೀತಿನಿರೂಪಕರಿಗೆ ಇರುವ ಗುರುತರ ಜವಾಬ್ದಾರಿಯನ್ನು ನೆನಪಿಸುವಂತಿತ್ತು. ಯಾವುದೇ ಒಂದು ನೀತಿಯನ್ನು ಯಥಾವತ್ತು ಅನುಸರಿಸಬೇಕು ಎನ್ನುವುದರಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಸಿದ್ಧ ಚೌಕಟ್ಟನ್ನು ಮೀರಿದ ಕಲಿಕೆಯಲ್ಲಿ ಅವರಿಗೆ ನಂಬಿಕೆ ಇತ್ತು. ಆ ನಂಬಿಕೆ ಅವರ ಒಳನೋಟ ಹಾಗೂ ದೂರದೃಷ್ಟಿಗೆ ಸಾಕ್ಷಿ.

ಸರ್ಕಾರದ ಜೊತೆಗೆ ಕೆಲಸ ಮಾಡುತ್ತಿದ್ದರೂ, ಕಸ್ತೂರಿರಂಗನ್ ಅವರು ಅಧಿಕಾರದ ದಂತಗೋಪುರದಲ್ಲಿ ಉಳಿಯುವ ವ್ಯಕ್ತಿಯಾಗಿರಲಿಲ್ಲ. ತಮ್ಮ ಹುದ್ದೆಯ ಪರಿಧಿಯನ್ನು ಮೀರಿ ಅನೇಕ ಸಲ ಜನರೊಟ್ಟಿಗೂ ಅವರು ತೊಡಗಿಸಿಕೊಳ್ಳುತ್ತಿದ್ದರು.

ಸಾರ್ವಜನಿಕ ಜೀವನದಲ್ಲಿ ದೂರದಿಂದ ನಿಂತು ನೋಡಿದಾಗ ಎಷ್ಟೋ ಜನರು ಬೆರಗಿನಂತೆ ಕಾಣಿಸುತ್ತಾರೆ. ಆದರೆ, ಅಂತಹವರ ಜೊತೆ ಹತ್ತಿರದಿಂದ ಒಡನಾಡಿದಾಗ ಭ್ರಮನಿರಸನ ಆಗುವುದಿದೆ. ದೂರದ ಬೆಟ್ಟ ನುಣ್ಣಗೆ ಎನ್ನುವ ಮಾತು ಬಹಳಷ್ಟು ಸಂದರ್ಭಗಳಲ್ಲಿ ಸತ್ಯವೂ ಹೌದು. ಕಸ್ತೂರಿರಂಗನ್ ವಿಷಯದಲ್ಲಿ ಇದು ಸಂಪೂರ್ಣ ಸುಳ್ಳಾಯಿತು. ಅವರೊಟ್ಟಿಗೆ ಕೆಲಸ ಮಾಡಿದಷ್ಟೂ ಅವರ ಮೇಲಿನ ಗೌರವ ಹಾಗೂ ಅಭಿಮಾನ ಹೆಚ್ಚಾಗುತ್ತಾ ಹೋಗಿತ್ತು. ಸಾರ್ವಜನಿಕ ಬದುಕಿನಲ್ಲಿ ಹೇಗೆ ಇದ್ದರೋ ವ್ಯಕ್ತಿಯಾಗಿಯೂ ಅವರು ಹಾಗೆಯೇ ವರ್ತಿಸುತ್ತಿದ್ದರು. ಅವರು ಸ್ಥಿರತೆ ಇದ್ದ ಜಾಣರೂ, ಬೆಚ್ಚಗಿನ ಅನುಭವ ನೀಡುವ ಸಜ್ಜನರೂ ಆಗಿದ್ದರು.

ರಾಷ್ಟ್ರೀಯ ಶಿಕ್ಷಣ ನೀತಿಗಾಗಿ ದಾಖಲೆಗಳನ್ನು ಸಿದ್ಧಪಡಿಸಿದ್ದು ಅಥವಾ ಸಾಂಸ್ಥಿಕ ರೂಪರೇಷೆ ತಯಾರಿಸಿದ್ದಷ್ಟೇ ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಎನ್ನಲಾಗದು. ಆ ಇಡೀ ಪ್ರಕ್ರಿಯೆಯನ್ನು ಅವರು ಕಟ್ಟಿಕೊಟ್ಟ ರೀತಿ ಹಾಗೂ ಜನರೊಟ್ಟಿಗಿನ ಅವರ ಅವಿನಾಭಾವ ಸಂಬಂಧ ಹಾಗೂ ಬದುಕಿದ ಮೌಲ್ಯಗಳು ಮುಖ್ಯವಾದ ಕೊಡುಗೆಗಳು ಎಂದು ಭಾವಿಸುವೆ.

ಪ್ರಸ್ತುತ, 'ರಾಷ್ಟ್ರೀಯ ಶಿಕ್ಷಣ ನೀತಿ'ಗೆ ಐದು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ, ಹಿಂತಿರುಗಿ ನೋಡಿದರೆ, ಆ ಶಿಕ್ಷಣ ನೀತಿ ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿದ ಕಸ್ತೂರಿರಂಗನ್ ಅವರ ಅಸಾಧಾರಣ ವ್ಯಕ್ತಿತ್ವವೂ ಹಾಗೂ ಅಷ್ಟೇ ಹಿರಿದಾದ ಅವರ ತಿಳಿವಳಿಕೆಯ ನೆನಪುಗಳು ಎದೆದುಂಬುತ್ತವೆ.

(ಲೇಖಕರು ಶಿಕ್ಷಣ ತಜ್ಞರು)

ವಾಚಕರ ವಾಣಿ

'ನಾಡಿ'ಗೆ ಮಿಡಿದ ಕಂಬನಿ!

ರಾಜ್ಯದ ಪ್ರಮುಖ ವಿದ್ಯುತ್ ಉತ್ಪಾದನಾ ಕೇಂದ್ರವಾದ ಶರಾವತಿ ನದಿಯ ಒಡಲಿನಂತೆ ಇರುವ ಲಿಂಗನಮಕ್ಕಿ ಜಲಾಶಯವು, ಪ್ರಸಕ್ತ ಮಳೆ ಋತುವಿನಲ್ಲಿ ಊಹೆಗೂ ಮೀರಿ ಗರಿಷ್ಠ ಮಟ್ಟ ತಲುಪುವತ್ತ ಸಾಗಿದೆ. ಈ ನದಿ, ಅಣೆಕಟ್ಟೆಯಿಂದ ಹಲವಾರು ಜನರು ಮನೆ, ಜಮೀನು, ಭಾವನಾತ್ಮಕ ನಂಟು ಕಳೆದುಕೊಂಡು ತೊಂದರೆ ಅನುಭವಿಸಿ ದ್ದನ್ನು ಸಾಹಿತಿ ನಾ. ಡಿಸೋಜ ಅವರು ಸಮೀಪದಿಂದ ಬಲ್ಲವರಾಗಿದ್ದರು. ತಮ್ಮ ಅನುಭವವನ್ನು ಅವರು ಕಥೆ, ಲೇಖನ, ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಈ ವರ್ಷದ ಆರಂಭದಲ್ಲಿ ಅಸ್ತಂಗತರಾದ 'ನಾಡಿ' ಅವರಿಗೆ ಈ ನದಿ, ಅಣೆಕಟ್ಟು, ಪ್ರದೇಶದ ಜನರ ಬಗ್ಗೆ ವಿಶೇಷ ಕಾಳಜಿ ಇತ್ತು. ಪ್ರಕೃತಿ ಮಾತೆ ಅಗೋಚರ ಶಕ್ತಿಯಾಗಿ ತನ್ನ ಪುತ್ರನಿಗೆ ಶ್ರದ್ಧಾಂಜಲಿ ರೂಪದಲ್ಲಿ ಕಂಬನಿ ಮಿಡಿಯುತ್ತಿರುವಂತೆ ಶರಾವತಿ ಕೊಳ್ಳದಲ್ಲಿನ ವರ್ಷಧಾರೆ ಕಾಣಿಸುತ್ತಿದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಚೌಕಟ್ಟಿನಲ್ಲಿ ಸಿಲುಕಿರುವ ಅಕಾಡೆಮಿಗಳು

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಕೇಂದ್ರಿತ ಆಗುತ್ತಿದೆಯೇ ಎನ್ನುವ ಡಿ.ಎಸ್. ಚೌಗಲೆ (ಪ್ರ.ವಾ., ಜುಲೈ 28) ಅವರ ಆತಂಕ ನನ್ನದೂ ಹೌದು. ಬಳ್ಳಾರಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರದಂತಹ ಜಿಲ್ಲೆಗಳು ಈ ಬಾರಿ ಅಕಾಡೆಮಿಯ ಪ್ರಶಸ್ತಿಗಳಿಂದ ವಂಚಿತವಾಗಿವೆ. ನಾಟಕ ಅಕಾಡೆಮಿ ಮಾತ್ರವಲ್ಲ; ಬಹುತೇಕ ಅಕಾಡೆಮಿಗಳ ಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ. ಈ ಸಾಲಿನಲ್ಲಿ ಮುಂಚೂಣಿಯಲ್ಲಿ ಇರುವುದು, ಕರ್ನಾಟಕ ಚಲನಚಿತ್ರ ಅಕಾಡೆಮಿ. ವರ್ಷಕ್ಕೊಮ್ಮೆ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾಡುವುದಕ್ಕೆ ಮಾತ್ರ ತನ್ನನ್ನು ಸೀಮಿತಗೊಳಿಸಿಕೊಂಡಿದೆ. ಚಿತ್ರೋದ್ಯಮದ ರಚನಾತ್ಮಕ ಬೆಳವಣಿಗೆಗೆ ಅಗತ್ಯವಾದ ಚಟುವಟಿಕೆಗಳನ್ನು ಮಾಡುವುದು ತನ್ನ ಕಾರ್ಯ ವ್ಯಾಪ್ತಿಗೆ ಬರುತ್ತದೆ ಎನ್ನುವುದನ್ನು ಅಕಾಡೆಮಿ ಸಂಪೂರ್ಣ ಮರೆತಿದೆ.

ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ

ಉನ್ನತ ಶಿಕ್ಷಣ ಹೆಣ್ಣಿಗೆ ಶಾಪವಲ್ಲ

'ಹೆಣ್ಣುಮಕ್ಕಳು ಪಡೆಯುತ್ತಿರುವ ಉನ್ನತ ಶಿಕ್ಷಣ ಶಾಪವಾಗುತ್ತಿದೆ' (ಪ್ರ.ವಾ., ಜುಲೈ 27) ಎನ್ನುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಶರ್ಮಾ ಹಾಗೂ ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತ್ಯದ ಅಧ್ಯಕ್ಷ ಸುಚೇಂದ್ರ ಪ್ರಸಾದ್ ಅವರ ಅಭಿಪ್ರಾಯ ಸರಿಯಲ್ಲ. ಬದಲಾದ ಕಾಲಕ್ಕೆ ತಕ್ಕಂತೆ ಪುರುಷ ವರ್ಗವೂ ಬದಲಾಗಬೇಕು ಎಂಬ ಸತ್ಯವನ್ನು ಅರಿಯದೆ ಹೋದವರು ಇಂತಹ ಅಭಿಪ್ರಾಯ ಹೊಂದಿರುತ್ತಾರೆ. ಪುರುಷ ಎಂಬ ಅಹಂ ಭಾವವನ್ನು ಬದಿಗೊತ್ತಿ, ಕೌಟುಂಬಿಕ ಕೆಲಸಗಳಲ್ಲಿ ಸಮಭಾಗಿಯಾಗುವುದನ್ನು ಕಲಿತಾಗ ಯಾವ ಹೆಣ್ಣೂ ಕೌಟುಂಬಿಕ ವ್ಯವಸ್ಥೆಯನ್ನು ಧಿಕ್ಕರಿಸಲಾರಳು. ಗಂಡು ಮಕ್ಕಳ ತಾಯ್ತಂದೆಯರು ಇದನ್ನು ಅರಿತು ಮಕ್ಕಳನ್ನು ಬೆಳೆಸಬೇಕು. ಮಕ್ಕಳನ್ನು ಹೊತ್ತು, ಹೆತ್ತು ಸಾಕುವ ಹೊಣೆ ಹೆಣ್ಣೊಬ್ಬಳದೇ ಅಲ್ಲ, ಇಬ್ಬರದೂ ಎಂಬ ಅರಿವಿರಬೇಕು. ಗಂಡು– ಹೆಣ್ಣು ಮಕ್ಕಳಿಬ್ಬರಿಗೂ ವಿವಾಹಪೂರ್ವ ಮಾರ್ಗದರ್ಶನ ಅತ್ಯಗತ್ಯ.

ಕುಸುಮ ಕೆ.ಎಲ್., ಆಲ್ದೂರು

> **ನಾರಿ ಶಕ್ತಿ**
> ಭಾರತದ
> ವನಿತೆಯರು
> ಕಮ್ಮಿಯಿಲ್ಲ
> ಯಾವುದರಲ್ಲೂ.
> ವಿಶ್ವ
> ಚದುರಂಗದಲ್ಲೂ,
> ಬಾಳಿನ
> ಚದುರಂಗದಲ್ಲೂ!
> **ಎಚ್. ಆನಂದರಾಮ ಶಾಸ್ತ್ರೀ**

ತುಂಗಭದ್ರಾ ಹೂಳು; ರೈತರ ಗೋಳು

ತುಂಗಭದ್ರಾ ಜಲಾಶಯದ ಹೂಳಿನ ಸಮಸ್ಯೆ ನಿವಾರಿಸಲು ರಾಜ್ಯ ಸರ್ಕಾರ ಆಸಕ್ತಿವಹಿಸಿಲ್ಲ. ಕೇಂದ್ರ ಸರ್ಕಾರವೂ ಹಣ ಮೀಸಲಿಟ್ಟಿಲ್ಲ (ಪ್ರ.ವಾ., ಜುಲೈ 27). ಜಲಾಶಯದಲ್ಲಿ ಪ್ರತಿ ವರ್ಷ ಅರ್ಧ ಟಿಎಂಸಿ ಅಡಿಯಷ್ಟು ಹೂಳು ಸೇರುತ್ತಿದೆ. ಇದರಿಂದ ಪ್ರತಿ ವರ್ಷ ಸುಮಾರು 33 ಟಿಎಂಸಿ ಅಡಿ ನೀರಿನ ಬಳಕೆಯಿಂದ ನಾವು ವಂಚಿತರಾಗಿದ್ದೇವೆ. ಈ ಬಾರಿ ರಾಜ್ಯ ಸರ್ಕಾರ ಗೇಟ್‌ಗಳ ದುರಸ್ತಿಗೆ ನಿರ್ಲಕ್ಷ್ಯ ತೋರಿದ್ದರಿಂದ ಹೆಚ್ಚುವರಿ 20 ಟಿಎಂಸಿ ಅಡಿ ನೀರು ವ್ಯರ್ಥವಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರತಿಷ್ಠೆಗೆ ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ರೈತರು ತೊಂದರೆ ಅನುಭವಿಸುವಂತಾಗಿದೆ.

ಚಂದ್ರು ಪಾಟೀಲ, ಕೊಪ್ಪಳ

ಜಾತಿಯ ವಿಷ ಬೀಜ ಬಿತ್ತಬೇಡಿ

ಸರ್ಕಾರಿ ಶಾಲೆಯ ಪಕ್ಕದಲ್ಲಿಯೇ ದೇಗುಲ ಇದೆ ಎನ್ನುವ ಕಾರಣಕ್ಕೆ ಮಕ್ಕಳಿಗೆ ಬೇಯಿಸಿದ ಮೊಟ್ಟೆ ಕೊಡುವುದರ ಬಗ್ಗೆ ಮಂಡ್ಯ ತಾಲ್ಲೂಕಿನ ಆಲಕೆರೆ ಗ್ರಾಮದಲ್ಲಿ ಕೆಲವು ಪೋಷಕರು ತಕರಾರು ಎತ್ತಿದ್ದಾರೆ. ಇದೆಂಥ ವಿಚಿತ್ರ! ಹಿಂದೂ ಧರ್ಮದಲ್ಲಿ ಕೋಟ್ಯಂತರ ದೇವರಿದ್ದಾರೆ. ಕೆಲವು ದೇವರುಗಳಿಗೆ ಮದ್ಯ, ಮಾಂಸದ ನೈವೇದ್ಯ ಅರ್ಪಿಸುವುದು ರೂಢಿಯಲ್ಲಿದೆ. ಹೀಗಿರುವಾಗ ದೇವರ ನೆಪ ಹೇಳಿ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಮೊಟ್ಟೆ ನೀಡುವುದನ್ನು ನಿರಾಕರಿಸುವುದು ಅಕ್ಷಮ್ಯ. ಇದರಿಂದ ಪುಟ್ಟ ಮಕ್ಕಳ ಮನಸ್ಸಿನಲ್ಲಿ ಜಾತೀಯತೆಯ ವಿಷ ಬೀಜ ಬಿತ್ತಿದಂತಾಗುವುದಿಲ್ಲವೇ?

ಚಂದ್ರಪ್ರಭ ಕಠಾರಿ, ಬೆಂಗಳೂರು

ಆರ್ಥಿಕ ನೆರವಿಗೆ ಮನವಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಅರಳುಮಲ್ಲಿಗೆ ಗ್ರಾಮದ ನಾನು ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದೇನೆ. ಜೀವನ ನಿರ್ವಹಣೆಯೇ ಕಷ್ಟವಾಗಿದ್ದು, ಚಿಕಿತ್ಸೆ ಮತ್ತು ಔಷಧಗಳಿಗೆ ಹಣ ಹೊಂದಿಸುವುದು ಕಷ್ಟವಾಗಿದೆ. ದಾನಿಗಳು ಆರ್ಥಿಕ ನೆರವು ನೀಡಬೇಕೆಂದು ಕೋರುವೆ. ಬ್ಯಾಂಕ್ ಖಾತೆ ವಿವರ: ರಾಧಾ ಟಿ.ಎಚ್., ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಖಾತೆ ಸಂಖ್ಯೆ: 520101007490549. ಐಎಫ್‌ಎಸ್‌ಸಿ ಕೋಡ್: ಯುಬಿಐಎನ್0900508.

ರಾಧಾ ಟಿ.ಎಚ್., ಅರಳುಮಲ್ಲಿಗೆ

ಚುರುಮುರಿ



ಜಿಎಸ್‌ಟಿ ಮೀಟರ್

• ಡಿ.ಎಸ್. ಲಿಂಗರಾಜು

'ಕರ್ನಾಟಕದ ಜಿಎಸ್‌ಟಿಗಳು ಹಾಲು, ತರಕಾರಿ, ಮಾಂಸ–ಮಡ್ಡಿ, ಕಸ–ಕಡ್ಡಿ ಯಾಪಾರ ಮಾಡೋರ್ಗೆಲ್ಲಾ 'ಪೇಟಿಎಂ, ಗೂಗಲ್ ಪೇಯಲ್ಲಿ ಕಾಸು ತಕ್ಕಂಡಿದ್ದೀಯ. ಲಕ್ಷಗಟ್ಟಲೇ ಟ್ಯಾಕ್ಸು ಬತ್ತದೆ' ಅಂತ ನೋಟಿಸ್ ಕೊಟ್ಟು ಬಾಳುಗೆಡಿಸಿದ್ದು ಅನ್ನೇಯ ಅಲ್ಲುವಾ?' ತಿಪ್ಪಣ್ಣ ಕಥೆ ಸುರು ಮಾಡಿದ್ದ.

'ಇವರಿಗೆಲ್ಲಾ ಜಿಎಸ್‌ಟಿ ಬರಕುಲ್ವಲ್ಲೋ ಅಣ್ತಮ್ಮಾ?' ಅಂತಂದೆ.

'ಅದೇಯ ಟ್ವಿಸ್ಟು. ಅವರೆಲ್ಲಾ ಒಂದಾಗಿ ಜಬರಿಸಿದಾಗ ಕೊಟ್ಟುದ್ದ ನೋಟಿಸ್ ವಾಪಾಸ್ ಇಸುಗಂದು ಸುಮ್ಮಗಾದರಲ್ಲ. ಸರ್ಕಾರ ಗ್ಯಾರಂಟಿಗೆ ಕಾಸಿಲ್ದೆ 'ಬಿಟ್ಟೀ ಬ್ಯಾಗ್ ಯಾ' ಅಂತ ಜನದ ಜೋಬಿಗೆ ಕೈ ಇಳಿ ಬುಡ್ತಾದೆ. ಅದುಕ್ಕೆ ಬ್ಯಾರೆ ದಾರಿ ಹುಡುಕಿ ಎಲ್ಲೆಲ್ಲಿ ಟ್ಯಾಕ್ಸು ಹಾಕಬಯ್ದು ಅಂತ ಸರ್ಕಾರಕ್ಕೆ ಹೇಳಬೇಕು ಅಂತ ಇವ್ನಿ' ತಿಪ್ಪಣ್ಣನ ಇಚಾರಕ್ಕೆ ತಲೆದೂಗಿದೆ.

'ಅಣ್ತಮ್ಮಾ, ಪಾಪದ ಕುಡುಕಣ್ಣಗಳು ವೈನ್ ಸ್ಟೋರಿಗೋಗಿ ಒಂದು ಕ್ವಾಟ್ರು ಶೇಕು ತೈಲ ಇಳಿಸಿ ನಾಕು ಕಡ್ಲೇಬೀಜ ಬಾಯಿಗೆ ಎಸ್ಕಂದು ಹೋಯ್ತಿದ್ದರಲ್ಲಾ, ಆ ಎಸ್ಕೋ ಬಾರುಗಳೂ ಈಗ ಖಾಲಿ ಹೊಡಿತಾವೆ' ಅಂತಂದೆ.

'ಮಳೆ ಚೆನ್ನಾಗಿ ಹೂದು ನೆಲ ಹದವಾಗ್ಯದೆ. ರೈತರು, ಗೊಬ್ಬರ ಕೊಡ್ರೋ ಅಂತ ಬಾಯಿಬಾಯಿ ಬಡಕಂಡು ಮಣ್ಣು ತಿಂತಿದ್ರೂ ಖುಷಿ ಸಚೇವರು, ಗೊಬ್ಬರ ನಮ್ಮತಾವೆಲ್ಲದೆ? ಕೇಂದ್ರದೋರು ಕೊಟ್ಟಿಲ್ಲ, ನಾವೇನು ಮಾಡನೆ? ಅಂತವ ಜಾಲಿಯಾಗಿ ತಿರುಗಾಡಿಕ್ಯಂದವ್ರೆ' ತಿಪ್ಪಣ್ಣ ಬೇಸರ ಹೊರಹಾಕಿದ.

'ನೋಡ್ರಲಾ, ರಾಜಕಾರಣಿಗಳ ಬಾಯಿಗೆ ಜಿಎಸ್‌ಟಿ ಮೀಟರ್ ಫಿಕ್ಸ್ ಮಾಡಬಕು. ಇವರು ಕಿಸಿಯಕ್ಕೆ ಕ್ಯಾಮೆ ಇಲ್ಲದೇ ಬೆಂಗಳೂರಗೆ ಸುತ್ತಾಡಿಕ್ಯಂದು ಜನ ಶೇವೆ ಅಂತ ಎಪರಾ ತಪರಾ ಯೋಜನೆಗಳ ಬಗ್ಗೆ ಮಾತು ಸುರು ಮಾಡಿದಾಗ ಮೀಟರ್ ಓಡ್ತದಲ್ಲಾ, ಅದರ ರೀಡಿಂಗ್ ತಗಂದು ತುತ್ತೂರಿ ಟ್ಯಾಕ್ಸು ಹಾಕಬಕು. ಯಂಗೆ?' ತಮ್ಮ ಐಡಿಯಾದ ಭಾರದಲ್ಲಿ ತುರೇಮಣೆ ಬೀಗಿದರು.

ಸಂಗತ

ಮುಟ್ಟು: ಮೂಢನಂಬಿಕೆ ಕೊನೆಯಾಗಲಿ

ಮುಟ್ಟಿನ ಹೆಸರಿನಲ್ಲಿ ಹೆಣ್ಣನ್ನು ಅಸ್ಪೃಶ್ಯಳಂತೆ ಕಾಣುವ ಮನೋಭಾವ ಇನ್ನೂ ಇದೆ. ಈ ಮೌಢ್ಯ ನಿವಾರಿಸಲು ದೊಡ್ಡ ಆಂದೋಲನ ಅಗತ್ಯ.

• ರಾಜಕುಮಾರ ಕುಲಕರ್ಣಿ

ಮಹಾರಾಷ್ಟ್ರದ ಖಾಸಗಿ ಶಾಲೆಯೊಂದರಲ್ಲಿ ವಿದ್ಯಾರ್ಥಿನಿಯರು ಮುಟ್ಟಾಗಿರುವುದನ್ನು ತಿಳಿದುಕೊಳ್ಳಲು ಶಾಲೆಯ ಮುಖ್ಯಶಿಕ್ಷಕಿ ಮತ್ತು ಇತರ ಶಿಕ್ಷಕಿಯರು ಮಕ್ಕಳ ಬಟ್ಟೆ ಬಿಚ್ಚಿ ಪರೀಕ್ಷಿಸಿದ್ದಾರೆ. ಶಾಲೆಯ ಶೌಚಾಲಯದಲ್ಲಿ ರಕ್ತದ ಕಲೆಗಳು ಕಾಣಿಸಿರುವುದು ವಿದ್ಯಾರ್ಥಿನಿಯರ ದೈಹಿಕ ತಪಾಸಣೆಗೆ ಕಾರಣವಾಗಿದೆ. ಈ ಅನಾಗರಿಕ ವರ್ತನೆ ಇಂದಿನ ಶಿಕ್ಷಣ ವ್ಯವಸ್ಥೆ ಕುರಿತು ಚಿಂತಿಸುವಂತೆ ಮಾಡಿದೆ.

ಶಾಲೆಯ ಮುಖ್ಯಶಿಕ್ಷಕಿ ಮತ್ತು ಇತರ ಶಿಕ್ಷಕಿಯರು ತಾವೂ ಹೆಣ್ಣೆಂಬುದನ್ನು ಮರೆತು ವಿದ್ಯಾರ್ಥಿನಿಯರ ಮುಟ್ಟಿನ ಪರೀಕ್ಷೆಗೆ ಮುಂದಾಗಿದ್ದು ವಿಪರ್ಯಾಸ. ಹೀಗೆ ಪರೀಕ್ಷೆಗೆ ಒಳಪಡಿಸುವಾಗ ವಿದ್ಯಾರ್ಥಿನಿಯರ ಮುಜುಗರ ಶಿಕ್ಷಕಿಯರ ಗಮನಕ್ಕೆ ಬರಬೇಕಾಗಿತ್ತು. ಇಂದಿನ ತಂತ್ರಜ್ಞಾನದ ಯುಗದಲ್ಲೂ, ಮುಟ್ಟಿನ ಪ್ಯಾಡ್‌ಗಳನ್ನು ಖರೀದಿಸುವಾಗ ಮಹಿಳೆಯರು ಮುಜುಗರಕ್ಕೆ ಒಳಗಾಗುವುದಿದೆ. ಪ್ಯಾಡ್ ತಮ್ಮ ಕೈಸೇರಿದ ತಕ್ಷಣ ಕರವಸ್ತ್ರದಲ್ಲೋ ಕೈಚೀಲದಲ್ಲೋ ಮರೆಮಾಚುತ್ತಾರೆ. ಅಕ್ಕಪಕ್ಕದಲ್ಲಿ ಇರುವವರ ಕಣ್ಣುಗಳಿಗೆ ಆಹಾರವಾಗುವ ಅಸಹಾಯಕತೆಯಿಂದ ಬಳಲುತ್ತಾರೆ.

ಹೆಣ್ಣುಮಕ್ಕಳಲ್ಲಿ ಮುಟ್ಟು ಸಹಜವಾದ ಜೈವಿಕ ಪ್ರಕ್ರಿಯೆಯಾಗಿದೆ. ಮಾನವ ಸಮಾಜದ ವಿಕಸನದಲ್ಲಿ ಮುಟ್ಟಿನ ಪಾತ್ರ ಮತ್ತು ಕೊಡುಗೆ ಗಮನಾರ್ಹ. ಆದರೆ, ಇಂದಿಗೂ ಸಮಾಜದಲ್ಲಿ ಮುಟ್ಟಿನ ಕುರಿತು ಮೂಢನಂಬಿಕೆ ಇದೆ. ಅದೆಷ್ಟೋ ಮಡಿವಂತ ಕುಟುಂಬಗಳಲ್ಲಿ ಮುಟ್ಟಾದ ಮಹಿಳೆಯರು ಮೂರು ದಿನಗಳ ಕಾಲ ಅಸ್ಪೃಶ್ಯತೆಯನ್ನು ಅನುಭವಿಸಬೇಕು. ಅಡುಗೆ ಮನೆ, ದೇವರ ಕೋಣೆಗಳಲ್ಲಿ ಅವರಿಗೆ ಪ್ರವೇಶ ನಿಷಿದ್ಧ. ಆ ದಿನಗಳಲ್ಲಿ ಅವರು ಪೂಜಾ ಕಾರ್ಯಗಳಲ್ಲಿ ಪಾಲ್ಗೊಳ್ಳುವಂತಿಲ್ಲ. ಉತ್ತರ ಕರ್ನಾಟಕದ ಭಾಗದಲ್ಲಿ ಮುಟ್ಟನ್ನು 'ಹೊರಗಾಗುವುದು' ಎಂದು ಹೇಳುವ ರೂಢಿಯಿದೆ. ಹೊರಗಾಗುವುದು ಎಂದರೆ, ಮನೆಯಿಂದ ಹೊರಗಿರುವುದು ಎಂದರ್ಥ.

ಮುಟ್ಟಿನ ಕುರಿತು ಸಮಾಜದಲ್ಲಿ ಮನೆ ಮಾಡಿರುವ ಅಜ್ಞಾನ ಮತ್ತು ಕುರುಡು ಆಚರಣೆಯನ್ನು ಹೋಗಲಾಡಿಸುವುದು ಸುಶಿಕ್ಷಿತರ ಜವಾಬ್ದಾರಿ. ಮುಟ್ಟಾದ ಸಂದರ್ಭದಲ್ಲಿ ಮಹಿಳೆಯರು ಅಶುದ್ಧರಾಗಿರುವರು, ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಯೋಗ್ಯರಾಗಿರುವುದಿಲ್ಲ, ಅವರ ಸ್ಪರ್ಶದಿಂದ ಆಹಾರ ಕಲುಷಿತಗೊಳ್ಳುವುದು ಎನ್ನುವ ಮೂಢನಂಬಿಕೆಗಳು ಇನ್ನೂ ಸಮಾಜದಲ್ಲಿವೆ. ಮುಟ್ಟಾದ ಮಹಿಳೆಯರು ಕ್ರೀಡೆ ಮತ್ತಿತರ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸಬಲರಾಗಿರುವುದಿಲ್ಲ ಎನ್ನುವ ತಪ್ಪುಕಲ್ಪನೆಗಳೂ ಇವೆ. ಸಾರ್ವಜನಿಕವಾಗಿ ಮುಟ್ಟಿನ ಸಂಗತಿಯನ್ನು ಮಾತನಾಡುವುದು ಹಾಗೂ ಚರ್ಚಿಸುವುದು ಸಲ್ಲದು ಎನ್ನುವಂತಹ ಸಾಮಾಜಿಕ ವಾತಾವರಣವಿದೆ.

ಮುಟ್ಟಿನ ಕುರಿತು ಸರಿಯಾದ ತಿಳಿವಳಿಕೆ ಮತ್ತು ಜಾಗೃತಿ ಮೂಡಿಸಲು ಇರುವ ಏಕೈಕ ಪರಿಹಾರ ಶಿಕ್ಷಣ ಮಾತ್ರವಾಗಿದೆ.



ಸುಶಿಕ್ಷಿತ ಕುಟುಂಬಗಳಲ್ಲಿ ಮುಟ್ಟಾದ ಮಹಿಳೆಯರ ಕುರಿತು ಕುಟುಂಬದ ಸದಸ್ಯರ ಅನಾಗರಿಕ ವರ್ತನೆ ಕಡಿಮೆಯಾಗಿರುವುದನ್ನು ಕಾಣಬಹುದು. ಬದಲಾಗುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ಬದಲಾವಣೆಗೆ ಕಾರಣ ಆಗಬೇಕಾದ ಶೈಕ್ಷಣಿಕ ಪರಿಸರದಲ್ಲೇ ವಿದ್ಯಾರ್ಥಿನಿಯರು ಮುಟ್ಟಾಗಿರುವುದನ್ನು ತಿಳಿದುಕೊಳ್ಳಲು ಶಿಕ್ಷಕಿಯರು ಮುಂದಾದುದು ವಿಷಾದಕರ. ಪರಿಶೀಲನೆಗೆ ಒಳಗಾದ ಮಕ್ಕಳ ಮನೋವೇದನೆಯನ್ನು ಅರ್ಥ ಮಾಡಿಕೊಳ್ಳುವುದು ಸುಲಭ ಸಾಧ್ಯವಲ್ಲ.

ಶಾಲೆಗಳಲ್ಲಿ ಮುಟ್ಟಿನ ಕುರಿತು ಬಾಲಕಿಯರಲ್ಲಿ ತಿಳಿವಳಿಕೆ ಮೂಡಿಸುವ ಪ್ರಯತ್ನಗಳಾಗಬೇಕು. ಈ ಕಾರ್ಯಕ್ಕೆಂದೇ ಪ್ರತ್ಯೇಕ ತರಗತಿಗಳನ್ನು ಮೀಸಲಾಗಿರಿಸಬೇಕು. ಮುಟ್ಟಿನ ಸಂದರ್ಭದಲ್ಲೂ ವಿದ್ಯಾರ್ಥಿನಿಯರು ಶಾಲೆಗೆ ಹಾಜರಾಗುವ ವಾತಾವರಣವನ್ನು ಶಿಕ್ಷಕರು ಸೃಷ್ಟಿಸಬೇಕು. ವಿಪರ್ಯಾಸವೆಂದರೆ, ಅದೆಷ್ಟೋ ಶಾಲೆಗಳಲ್ಲಿ ಶಿಕ್ಷಕಿಯರ ಕೊರತೆ ಇದೆ. ಪುರುಷ ಶಿಕ್ಷಕರು ಮುಟ್ಟಿನ ಕುರಿತು ವಿದ್ಯಾರ್ಥಿಗಳೊಡನೆ ಬಹಿರಂಗವಾಗಿ ಚರ್ಚಿಸುವಷ್ಟು ನಮ್ಮ ವ್ಯವಸ್ಥೆ ಇನ್ನೂ ಸುಧಾರಣೆಗೊಂಡಿಲ್ಲ. ಈ ಸಮಸ್ಯೆಯ ನಿವಾರಣೆಗಾಗಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಒಬ್ಬ ಶಿಕ್ಷಕಿ ಯನ್ನಾದರೂ ಕಡ್ಡಾಯವಾಗಿ ನಿಯುಕ್ತಿಗೊಳಿಸಬೇಕು.

ಶಾಲೆ ಮತ್ತು ಕಾಲೇಜುಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸುವ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ವಿಶೇಷವಾಗಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳ ಉಚಿತ ವಿತರಣೆ ಅವಶ್ಯಕ. ಬಡತನ ಮತ್ತು ಶಿಕ್ಷಣದ ಕೊರತೆಯ ಕಾರಣ ಅದೆಷ್ಟೋ ಪಾಲಕರಿಗೆ ಮುಟ್ಟಿನ ಸ್ವಚ್ಛತೆಯ ಬಗ್ಗೆ ತಿಳಿವಳಿಕೆ ಕಡಿಮೆ. ಬಡ ಕುಟುಂಬಗಳಲ್ಲಿ ಪ್ಯಾಡ್‌ಗಳ ಬದಲು ಬಟ್ಟೆಗಳನ್ನು ಉಪಯೋಗಿಸುವವರ ಸಂಖ್ಯೆ ಹೆಚ್ಚು.

ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ, ವಿಶ್ವದಾದ್ಯಂತ ಶೇ 39ರಷ್ಟು ಶಾಲೆಗಳಲ್ಲಿ ಮಾತ್ರ ಮುಟ್ಟಿನ ಕುರಿತು ಶಿಕ್ಷಣ ಮತ್ತು ತಿಳಿವಳಿಕೆಯನ್ನು ನೀಡಲಾಗುತ್ತಿದೆ. ಶಾಲೆಗಳಲ್ಲಿ ಶಿಕ್ಷಣ ಮತ್ತು ತಿಳಿವಳಿಕೆ ನೀಡುವ ಪ್ರಮಾಣ ಇನ್ನೂ ಹೆಚ್ಚಬೇಕಿದೆ. ಶಾಲೆಗಳ ಶೌಚಾಲಯದಲ್ಲಿ ಬಳಸಲು ಸ್ಯಾನಿಟರಿ ಪ್ಯಾಡ್‌ಗಳನ್ನಿಡುವ ವ್ಯವಸ್ಥೆ ಜಾರಿಗೆ ಬರಬೇಕು. ಆದರೆ, ಅದೆಷ್ಟೋ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳಿಲ್ಲ. ಮುಟ್ಟಿನ ಸಂದರ್ಭಗಳಲ್ಲಿ ವಿದ್ಯಾರ್ಥಿನಿಯರು ಶೌಚಾಲಯದ ಕೊರತೆಯಿಂದ ತೊಂದರೆ ಅನುಭವಿಸುವುದು ಸಾಮಾನ್ಯವಾಗಿದೆ. ಮುಟ್ಟಾದ ಬಾಲಕಿಯರನ್ನು ಕುಹಕ ಮತ್ತು ವ್ಯಂಗ್ಯದಿಂದ ನೋಡದಂತೆ ಬಾಲಕರಿಗೂ ತಿಳಿವಳಿಕೆ ನೀಡಬೇಕಾದ ಅಗತ್ಯವಿದೆ.

ಮುಟ್ಟು ಒಂದು ಸಹಜವಾದ ಜೈವಿಕ ಪ್ರಕ್ರಿಯೆ ಎನ್ನುವಂಥ ವಾತಾವರಣವನ್ನು ಶಾಲೆಗಳಲ್ಲಿ ಶಿಕ್ಷಕರು ಸೃಷ್ಟಿಸಬೇಕು. ಮನೆಗಳಲ್ಲಿ ಮತ್ತು ಕೆಲಸ ಮಾಡುವ ಸ್ಥಳಗಳಲ್ಲಿ ಮುಟ್ಟಾದ ಮಹಿಳೆಯರನ್ನು ಗೌರವದಿಂದ ನೋಡುವ ಮನೋಭಾವವನ್ನು ಎಲ್ಲರೂ ರೂಢಿಸಿಕೊಳ್ಳಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬದಲಾದ ಹವಾಮಾನ



ಹವಳ ದಿಬ್ಬ ನಿರ್ನಾಮ

ಜಾಗತಿಕ ತಾಪಮಾನ ಹೆಚ್ಚಳದ ಪರಿಣಾಮಗಳು ಭೂಮಿಯ ಮೇಲಷ್ಟೇ ಅಲ್ಲ, ಸಮುದ್ರದ ನೀರಿನೊಳಗೂ ಕಾಣತೊಡಗಿವೆ. ಸಮುದ್ರದ ನೀರಿನ ಮೇಲ್ಮೈನ ತಾಪಮಾನದಲ್ಲಿ ಹೆಚ್ಚಳವಾಗಿರುವುದು ಮತ್ತು ಅಲೆಗಳು ತೀವ್ರಗೊಂಡಿರುವುದರಿಂದ ಹವಳದ ದಿಬ್ಬಗಳು ಬಿಳಿಚಿಕೊಳ್ಳುತ್ತಿದ್ದು, ಹವಳಗಳು ಜೀವ ಕಳೆದುಕೊಳ್ಳುತ್ತಿವೆ. 1998ರಿಂದ ಭಾರತದ ಲಕ್ಷದ್ವೀಪದಲ್ಲಿ ಈ ರೀತಿ ಶೇ 50ರಷ್ಟು ಹವಳದ ದಿಬ್ಬಗಳು ನಿರ್ನಾಮವಾಗಿವೆ ಎಂದು 24 ವರ್ಷದ ಅಧ್ಯಯನ ವರದಿ ತಿಳಿಸಿದೆ. ಜಾಗತಿಕ ಮಟ್ಟದಲ್ಲಿಯೂ ಇದೇ ಪ್ರವೃತ್ತಿ ಕಂಡುಬಂದಿದ್ದು, ಇದು ಹವಳಗಳ ದಿಬ್ಬದ ಕಣ್ಮರೆಯ ವಿಚಾರ ಮಾತ್ರವೇ ಆಗಿರದೇ ಅರ್ಥ ವ್ಯವಸ್ಥೆ, ಪ್ರಾಕೃತಿಕ ಸಮತೋಲನ ಮತ್ತು ಜೀವಜಾಲದ ಅಳಿವು ಉಳಿವಿನ ಪ್ರಶ್ನೆಯೂ ಆಗಿದೆ

ಪ್ರಜಾವಾಣಿ ವಾರ್ತೆ

ಲಕ್ಷದ್ವೀಪದ ಸಮುದ್ರ ತೀರಗಳಲ್ಲಿ ಕಂಡುಬರುವ ಬಣ್ಣಬಣ್ಣದ ಹವಳದ ದಿಬ್ಬಗಳು ಪ್ರವಾಸಿಗರ ನೆಚ್ಚಿನ ತಾಣಗಳಾಗಿವೆ. ಅಲ್ಲಿ ಇಂಥ ಹಲವು ಹವಳದ ದಿಬ್ಬಗಳಿದ್ದು, ಜಾಗತಿಕ ತಾಪಮಾನ ಬದಲಾವಣೆಯಿಂದ ಅವುಗಳ ಅಸ್ತಿತ್ವಕ್ಕೇ ಅಪಾಯ ಎದುರಾಗಿದೆ. 1998ರಿಂದ 2022ರ ನಡುವೆ ಲಕ್ಷದ್ವೀಪದಲ್ಲಿನ ಹವಳದ ಮುಚ್ಚುಗೆಯು ಶೇ 37.24ರಿಂದ ಶೇ 19.6ಕ್ಕೆ ಕುಸಿದಿದೆ ಎಂದು 'ಡೈವರ್ಸಿಟಿ ಆ್ಯಂಡ್ ಡಿಸ್ಟ್ರಿಬ್ಯೂಷನ್' ಎನ್ನುವ ಜರ್ನಲ್‌ನಲ್ಲಿ ಪ್ರಕಟವಾಗಿರುವ ಅಧ್ಯಯನ ತಿಳಿಸಿದೆ.

ಸುಮಾರು ಒಂದು ಅಡಿ ಎತ್ತರದವರೆಗೆ ಬೆಳೆಯುವ ಮೃದು ಸಮುದ್ರಜೀವಿಗಳೇ ಹವಳಗಳು. ಈ ಜೀವಿಗಳು ತಮ್ಮ ವಾಸಕ್ಕಾಗಿ ನೀರಿನಲ್ಲಿಯೇ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ. ಕ್ರಮೇಣ ಇಂಥ ಅನೇಕ ಗೂಡುಗಳು ಸೇರಿ ಬಣ್ಣಬಣ್ಣದ ಹವಳದ ದಿಬ್ಬಗಳು ರೂಪುಗೊಳ್ಳುತ್ತವೆ. ಹವಳದ ದಿಬ್ಬಗಳಿಂದಲೇ ಕೂಡಿದ ದ್ವೀಪಗಳೂ ರೂಪುಗೊಂಡಿವೆ. ಇವು ರೂಪುಗೊಳ್ಳಲು ಸಾವಿರಾರು ವರ್ಷಗಳೇ ಬೇಕು.

ನೀರಿನಲ್ಲಿ ಹವಳ ಮತ್ತು ಪಾಚಿ ಸಹಜೀವನ ನಡೆಸುತ್ತಿದ್ದು, ಹವಳಗಳು ಅತ್ಯಂತ ಸುಂದರವಾಗಿ ರೂಪುಗೊಳ್ಳಲು, ಚಿತ್ತಾಕರ್ಷಕ ಬಣ್ಣಗಳನ್ನು ಪಡೆಯಲು ಪಾಚಿಯೇ ಮೂಲ ಕಾರಣ. ಬಣ್ಣಬಣ್ಣದ ಮೀನುಗಳು ಸೇರಿದಂತೆ ಸಮುದ್ರಜೀವಿಗಳ ಪೈಕಿ ಶೇ 25ರಷ್ಟು ಜೀವಿಗಳಿಗೆ ಹವಳದ ದಿಬ್ಬಗಳೇ ಆಶ್ರಯತಾಣವಾಗಿವೆ. ಹೆಚ್ಚುತ್ತಿರುವ ತಾಪಮಾನದಿಂದ ಹವಳಗಳು ಪಾಚಿಯನ್ನು ಬಿಟ್ಟು ತೆರಳುತ್ತಿವೆ. ಇದರಿಂದ ಹವಳಗಳು ಅಶಕ್ತಗೊಳ್ಳುತ್ತಿದ್ದು, ತಮ್ಮ ಬಣ್ಣ ಕಳೆದುಕೊಳ್ಳುತ್ತಿವೆ. ಇದು ಮುಂದುವರಿದು, ಹವಳದ ದಿಬ್ಬಗಳು ಕ್ರಮೇಣ ನಾಶವೂ ಆಗುತ್ತಿವೆ.

24 ವರ್ಷಗಳಲ್ಲಿ ಶೇ 50ರಷ್ಟು ನಾಶ: ಲಕ್ಷದ್ವೀಪದ ಇಂಥ ಹವಳದ ದಿಬ್ಬಗಳಲ್ಲಿ ಪ್ರಕೃತಿ ಸಂರಕ್ಷಣಾ ಪ್ರತಿಷ್ಠಾನವು 1998ರಿಂದ ಸುದೀರ್ಘ ಕಾಲ ಅಧ್ಯಯನ ನಡೆಸಿತು. ಹವಾಮಾನ ಬದಲಾವಣೆಯಿಂದ ಸಮುದ್ರದ ಮೇಲ್ಮೈ ತಾಪಮಾನ ಏರುತ್ತಿರುವುದರಿಂದ 24 ವರ್ಷಗಳಲ್ಲಿ ಅಲ್ಲಿ ಶೇ 50ರಷ್ಟು ಹವಳದ ದಿಬ್ಬಗಳು ನಾಶವಾಗಿವೆ ಎಂದು ಅಧ್ಯಯನ ವರದಿ ಉಲ್ಲೇಖಿಸಿದೆ. ಈ ಅವಧಿಯಲ್ಲಿ ಸಂಗ್ರಹಿಸಿದ ದತ್ತಾಂಶವನ್ನು ವಿಶ್ಲೇಷಿಸಿ, ಹವಳವು ಹೆಚ್ಚಿನ ಉಷ್ಣಾಂಶದ ಎಷ್ಟು ಅಲೆಗಳಿಗೆ ತೆರೆದುಕೊಂಡಿದೆ ಮತ್ತು ಅದರಿಂದ ಅದರ ಸಂರಚನೆಯಲ್ಲಿ ಏನೇನು ಬದಲಾವಣೆಗಳು ಘಟಿಸಿವೆ ಎನ್ನುವುದನ್ನು ಅಧ್ಯಯನ ಮಾಡಲಾಗಿದೆ.

ಅವಸಾನದ ಅಂಚಿನಲ್ಲಿರುವ ದಿಬ್ಬಗಳನ್ನು ಮತ್ತು ಅವುಗಳ ಪುನಶ್ಚೇತನಗೊಳ್ಳುವ ಸಾಮರ್ಥ್ಯವನ್ನು ಗುರುತಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿತ್ತು. ಆದಾಗ್ಯೂ, ತಾಪಮಾನದ ಏರಿಕೆಗೆ ಹವಳದ ದಿಬ್ಬಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎನ್ನುವುದು ಅವು ಅಲೆಗಳಿಗೆ ಒಡ್ಡಿಕೊಂಡ ರೀತಿ ಮತ್ತು ಅವು ಎಷ್ಟು ಆಳದಲ್ಲಿವೆ ಎನ್ನುವಂಥ ಸ್ಥಳೀಯ ಅಂಶಗಳನ್ನು ಆಧರಿಸಿರುತ್ತದೆ ಎಂದು ವರದಿ ಹೇಳಿದೆ.



ಲಕ್ಷದ್ವೀಪವೇ ಏಕೆ?

ಹಿಂದೂ ಮಹಾಸಾಗರದ ಉತ್ತರಕ್ಕಿರುವ ಲಕ್ಷದ್ವೀಪ ದ್ವೀಪ ಸಮೂಹಗಳಲ್ಲಿ 12 ಹವಳಗಳ ದಿಬ್ಬಗಳಿವೆ. ಸಮೂಹವು 10 ದ್ವೀಪಗಳನ್ನು ಒಳಗೊಂಡಿದೆ. 2011ರ ಜನಗಣತಿಯ ಪ್ರಕಾರ, ಜಾಗತಿಕವಾಗಿ ಅತ್ಯಂತ ಹೆಚ್ಚು ಸಾಂದ್ರತೆ ಹೊಂದಿರುವ ಹವಳಗಳ ದಿಬ್ಬಗಳು ಇಲ್ಲಿವೆ. ಅಧ್ಯಯನದ ಅವಧಿಯಲ್ಲಿ ಎಲ್‌ನಿನೊ ಪರಿಣಾಮದಿಂದಾಗಿ ಮೂರು ಬಾರಿ ಇಲ್ಲಿನ ಸಾಗರದ ಮೇಲ್ಮೈ ಉಷ್ಣತೆಯಲ್ಲಿ ಹೆಚ್ಚಳ ಕಂಡುಬಂದಿತ್ತು (1998, 2010 ಮತ್ತು 2016).

ಹವಳ ದಿಬ್ಬಗಳ ಮೇಲ್ವಿಚಾರಣೆಗಾಗಿ ಅಧ್ಯಯನಕಾರರು ಕವರಟ್ಟಿ, ಕಡಮಟ್ ಮತ್ತು ಅಗಟ್ಟಿ ಎಂಬ ಮೂರು ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಮಾದರಿ ಸಂಗ್ರಹಕ್ಕಾಗಿ ಹೆಚ್ಚು ಆಳದಲ್ಲಿರುವ (16 ಮೀಟರ್) ಹವಳ ದಿಬ್ಬ ಮತ್ತು ಕಡಿಮೆ ಆಳದಲ್ಲಿರುವ (8 ಮೀಟರ್) ಹವಳ ದಿಬ್ಬಗಳ ಪ್ರದೇಶಗಳನ್ನು ಆಯ್ಕೆ ಮಾಡಿದ್ದರು.

ಒಮ್ಮೆ ಹೆಚ್ಚಿನ ಉಷ್ಣಾಂಶದ ಅಲೆಗಳ ಹೊಡೆತಕ್ಕೆ ಸಿಲುಕಿ ಬಿಳಿಚಿಕೊಂಡ ಹವಳದ ದಿಬ್ಬವು ಪುನಶ್ಚೇತನ ಹೊಂದಲು ಅದಕ್ಕೆ ಒಂದಿಷ್ಟು ಕಾಲಾವಕಾಶ ಬೇಕಾಗುತ್ತದೆ; ಆರು ವರ್ಷಗಳ ನಂತರ ಅದರ ಚೇತರಿಕೆಯ ಲಕ್ಷಣಗಳು ವೇಗ ಪಡೆದುಕೊಳ್ಳುತ್ತವೆ. ತಾಪಮಾನ ಬದಲಾವಣೆಯ ಪರಿಣಾಮಗಳಿಗೆ ಈ ಜೀವಿಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎನ್ನುವುದು ಅವುಗಳ ಜೈವಿಕ ಗುಣಲಕ್ಷಣಗಳನ್ನು ಆಧರಿಸಿರುತ್ತದೆ ಎಂದು ವರದಿ ಹೇಳಿದೆ.

ಸಮುದ್ರ ಜೀವಿಗಳಿಗೆ ಸಂಚಕಾರ: ದಿಬ್ಬಗಳು ನಾಶವಾದರೆ, ಹವಳಗಳು ಮಾತ್ರ ನಾಶವಾಗುವುದಿಲ್ಲ. ಅವುಗಳಲ್ಲಿ ಆಶ್ರಯ ಪಡೆದಿರುವ ಅನೇಕ ರೀತಿಯ ಸಮುದ್ರಜೀವಿಗಳೂ ಅವಸಾನ ಹೊಂದುತ್ತವೆ. ಲಕ್ಷದ್ವೀಪದ ಇತರೆ ಸ್ಥಳಗಳಲ್ಲಿ ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿಯೂ ಭವಿಷ್ಯದ ಜಾಗತಿಕ ತಾಪಮಾನ ಹೆಚ್ಚಳದ ಹೊಡೆತಗಳಿಗೆ ಹವಳದ ದಿಬ್ಬಗಳು ಹೇಗೆ ಪ್ರತಿಸ್ಪಂದಿಸುತ್ತವೆ, ಹೇಗೆ ಬದುಕುಳಿಯುತ್ತವೆ ಎನ್ನುವುದರ ಬಗ್ಗೆ ಒಂದು ಚೌಕಟ್ಟು ರೂಪಿಸುವ ದೃಷ್ಟಿಯಿಂದ ಈ ಅಧ್ಯಯನದ ಫಲಿತಾಂಶವು ಮಹತ್ವಪೂರ್ಣವಾದುದಾಗಿದೆ. ಅವು ಎಷ್ಟು ಆಳದಲ್ಲಿವೆ, ಅವುಗಳ ಪುನಶ್ಚೇತನ ದರ ಎಷ್ಟು ಮತ್ತು ಅವು ಎಂತಹ ಅಲೆಗಳಿಗೆ ಗುರಿಯಾಗಿವೆ ಎನ್ನುವುದರ ಆಧಾರದಲ್ಲಿ ಭಿನ್ನ ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ ಎಂದು ವರದಿ ಹೇಳಿದೆ.

ಹವಳಗಳ ದಿಬ್ಬಗಳು ನಾಶವಾಗುವುದನ್ನು ತಡೆಯಲು ನಿರ್ದಿಷ್ಟ ಪ್ರದೇಶ ಆಧಾರಿತವಾದ ಕ್ರಮಗಳಿಂದ ಮಾತ್ರವೇ ಸಾಧ್ಯವಿಲ್ಲ; ಸೂಕ್ತ ನೀತಿ ನಿಯಮ ರೂಪಿಸುವುದು, ಬೃಹತ್ ಮಟ್ಟದಲ್ಲಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುವುದು ಇಂದಿನ ತುರ್ತಾಗಿದೆ ಎಂದು ವರದಿ ಹೇಳಿದೆ.

ವಿಜ್ಞಾನಿಗಳ ಎಚ್ಚರಿಕೆ: ತಾಪಮಾನ ಬದಲಾವಣೆ, ಸಮುದ್ರದ ನೀರಿನಲ್ಲಿ ಮನುಷ್ಯನ ಅತಿಯಾದ ಹಸ್ತಕ್ಷೇಪ, ಎಲ್‌ನಿನೊ ಪರಿಣಾಮದಿಂದ ಹವಳದ ದಿಬ್ಬಗಳ ಸಾವು ಸಂಭವಿಸುತ್ತಿದೆ. ಜಾಗತಿಕ ಮಟ್ಟದಲ್ಲಿ, 30 ವರ್ಷಗಳಲ್ಲಿ ಅನೇಕ ಹವಳದ ದಿಬ್ಬಗಳು ಕಾಣೆಯಾಗಿವೆ. ಮುಂದಿನ ದಿನಗಳಲ್ಲಿಯೂ ಪರಿಸ್ಥಿತಿ ಹೀಗೇ ಮುಂದುವರಿದರೆ, 2050ರ ಹೊತ್ತಿಗೆ ಮುಕ್ಕಾಲು ಭಾಗದಷ್ಟು ದಿಬ್ಬಗಳು ನಾಮಾವಶೇಷವಾಗುತ್ತವೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಹವಳಗಳು ಮತ್ತು ಹವಳದ ದಿಬ್ಬಗಳಿಗೆ ಪ್ರಕೃತಿಯ ಸಮತೋಲನದ ದೃಷ್ಟಿಯಿಂದ ಮಹತ್ವದ ಸ್ಥಾನವಿದೆ. ಸಮುದ್ರದಲ್ಲಿ ಬಲವಾದ ಅಲೆಗಳು, ಬಿರುಗಾಳಿ ಸೃಷ್ಟಿಯಾದಾಗ, ಅವುಗಳ ತರಂಗ ಶಕ್ತಿಯನ್ನು ಹವಳದ ದಿಬ್ಬಗಳು ತಡೆದು, ಅವುಗಳ ತೀವ್ರತೆಯನ್ನು ಕಡಿಮೆ ಮಾಡುತ್ತವೆ. ಸಮುದ್ರ ತೀರ ಸವಕಳಿ ಆಗದಂತೆ ತಡೆಯುತ್ತವೆ. ಪರೋಕ್ಷವಾಗಿ ಕೋಟ್ಯಂತರ ಜನರ ಜೀವ ಮತ್ತು ಜೀವನೋಪಾಯಕ್ಕೆ ನೆರವಾಗುತ್ತಿದ್ದು, ಪ್ರವಾಸೋದ್ಯಮವೂ ಸೇರಿದಂತೆ ವಿವಿಧ ಉದ್ದಿಮೆಗಳ ಮೂಲಕ ಸಾವಿರಾರು ಕೋಟಿ ರೂಪಾಯಿಗಳ ವಹಿವಾಟಿಗೆ ಕಾರಣವಾಗುತ್ತಿವೆ. ಇವುಗಳ ಅವಸಾನವು ಮನುಷ್ಯನಿಗೆ ಎಚ್ಚರಿಕೆಯ ಸಂದೇಶ ರವಾನಿಸುತ್ತಿದೆ.

24 ವರ್ಷ (1998–2022) ಅಧ್ಯಯನದ ಅವಧಿ

3 ಅಧ್ಯಯನ ನಡೆಸುತ್ತಿದ್ದಾಗ ಸಂಭವಿಸಿದ ಹವಳ ಬಿಳಿಚುವಿಕೆ ಪ್ರಕ್ರಿಯೆ (1998, 2010 ಮತ್ತು 2016)

37.24% 1998ರಲ್ಲಿ ಲಕ್ಷದ್ವೀಪ ಸಮೂಹದಲ್ಲಿದಲ್ಲಿದ್ದ ಹವಳ ದಿಬ್ಬಗಳ ಪ್ರಮಾಣ

19.6% 2022ರ ಹೊತ್ತಿಗೆ ಇದ್ದ ಹವಳ ದಿಬ್ಬಗಳ ಪ್ರಮಾಣ

50% ಹವಳ ದಿಬ್ಬಗಳಲ್ಲಿ ಆದ ಕುಸಿತದ ಪ್ರಮಾಣ

2%-5% ಮೂರು ಬಿಳಿಚುವಿಕೆ ಪ್ರಕ್ರಿಯೆಗಳ ನಂತರ ಹವಳಗಳ ಪುನಶ್ಚೇತನ ದರ

ಅಧ್ಯಯನ ಹೇಳುವುದೇನು?

- ಎಲ್ಲ ಪ್ರಭೇದಗಳೂ ಆಳ ಸಮುದ್ರದಲ್ಲಿ ಆಶ್ರಯ ಪಡೆಯುವುದಿಲ್ಲ. ಪೊರೈಟ್ಸ್ ಮತ್ತು ಪವೊನ ಎಂಬ ಹೆಸರಿನ ಎರಡು ತಳಿಗಳನ್ನು ಬಿಟ್ಟು ಉಳಿದೆಲ್ಲ ಹವಳಗಳು ಕಡಿಮೆ ಆಳದಲ್ಲಿವೆ
- ಬಿಳಿಚುವಿಕೆ ಪ್ರಕ್ರಿಯೆ ನಂತರ ಹವಳಗಳು ಸತ್ತು, ಮತ್ತೆ ಹೊಸ ಹವಳಗಳು ಹುಟ್ಟಲು ಗಣನೀಯ ಪ್ರಮಾಣದ ಸಮಯ ಅವಶ್ಯಕ
- ಮೂರು ಬಿಳಿಚುವಿಕೆ ಪ್ರಕ್ರಿಯೆಗಳ ನಂತರ ಅಧ್ಯಯನ ನಡೆಸಲಾದ ಪ್ರದೇಶದಲ್ಲಿ ಹವಳಗಳ ಪುನಶ್ಚೇತನ ದರ ಶೇ 2ರಿಂದ ಶೇ 5ರಷ್ಟಿತ್ತು
- 47 ಹವಳಗಳ ಪ್ರಭೇದಗಳ ಪೈಕಿ 29 ಪ್ರಭೇದಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು
- ಪ್ರತಿಯೊಂದು ಹವಳ ದಿಬ್ಬದ ಮೇಲೆ ಹೆಚ್ಚು ಉಷ್ಣಾಂಶ ಹೊಂದಿರುವ ಸಾಗರದ ಅಲೆಗಳ ಪರಿಣಾಮ ಭಿನ್ನವಾಗಿತ್ತು. ನೈರುತ್ಯ ಮಾರುತದ ವೇಗವು ಪಶ್ಚಿಮ ದಿಕ್ಕಿನಲ್ಲಿ ಹೆಚ್ಚು ಪ್ರಬಲವಾಗಿದ್ದು, ಪೂರ್ವ ದಿಕ್ಕಿನಲ್ಲಿ ಇದರ ಪ್ರಭಾವ ಕಡಿಮೆ ಇತ್ತು. ಹಾಗಾಗಿ, ಪಶ್ಚಿಮದಲ್ಲಿರುವ ಹವಳ ದಿಬ್ಬಗಳ ಮೇಲೆ ಹೆಚ್ಚು ಶಾಖದ ಅಲೆಗಳು ಪರಿಣಾಮ ಬೀರುತ್ತಿವೆ
- 24 ವರ್ಷಗಳಲ್ಲಿ ಹವಳ ದಿಬ್ಬಗಳ ಪ್ರಮಾಣದಲ್ಲಿ ಶೇ 50ರಷ್ಟು ಕುಸಿತ ಕಂಡರೂ ಪ್ರತಿ ಬಿಳಿಚುವಿಕೆ ಪ್ರಕ್ರಿಯೆ ನಂತರ ಹವಳಗಳ ಸಾಮೂಹಿಕ ಸಾವಿನ ಪ್ರಮಾಣ ಕುಂಠಿತವಾಗಿದೆ
- 2016ರ ಹೆಚ್ಚು ಉಷ್ಣತೆಯ ಅಲೆಯ ಹೊಡೆತದ ನಂತರವೂ ಕವರಟ್ಟಿ, ಕಡಮಟ್ ಪ್ರದೇಶದಲ್ಲಿ ಹವಳಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ
- ಒಂದು ಮತ್ತು ಇನ್ನೊಂದು ಬಿಳಿಚುವಿಕೆ ಪ್ರಕ್ರಿಯೆಯ ನಡುವಿನ ಅವಧಿ ಹೆಚ್ಚಿದಷ್ಟೂ ಹವಳಗಳ ಪುನಶ್ಚೇತನ ದರ ಹೆಚ್ಚಿರುತ್ತದೆ
- ಅಲೆಗಳಿಗೆ ಒಡ್ಡಿಕೊಳ್ಳುವಿಕೆ ಮತ್ತು ಸಮುದ್ರದ ಆಳವು ಪುನಶ್ಚೇತನದ ಒಟ್ಟಾರೆ ಪ್ರವೃತ್ತಿ ಮೇಲೆ ಪರಿಣಾಮ ಬೀರುತ್ತದೆ. ಮೊದಲ (1998) ಬಿಳಿಚುವಿಕೆಯ ನಂತರ ಸಾಗರದ ಹೆಚ್ಚು ಆಳದ ಪ್ರದೇಶದಲ್ಲಿ ಹವಳ ದಿಬ್ಬಗಳು ಶೇ 18.7ರಷ್ಟು ಪ್ರಮಾಣದಲ್ಲಿ ಪುನಶ್ಚೇತನಗೊಂಡಿದ್ದವು. ಕಡಿಮೆ ಆಳದ ಪ್ರದೇಶದಲ್ಲಿ ಈ ಪ್ರಮಾಣ ಶೇ 42.4ರಷ್ಟಿತ್ತು
- ಕೆಲವು ಪ್ರಭೇದಗಳ ಹವಳಗಳು ಬಹುಬೇಗ ಪುನಶ್ಚೇತನಗೊಂಡರೆ, ಇನ್ನೂ ಕೆಲವು ಹವಳಗಳ ಪುನಶ್ಚೇತನ ಪ್ರಕ್ರಿಯೆ ನಿಧಾನವಾಗಿದೆ

ಆಧಾರ: 'ಡೈವರ್ಸಿಟಿ ಆ್ಯಂಡ್ ಡಿಸ್ಟ್ರಿಬ್ಯೂಷನ್' ವರದಿ, ಮಾಧ್ಯಮ ವರದಿಗಳು

ರಾಷ್ಟ್ರೀಯ

ಪ್ರಶ್ನೆಗಾಗಿ ಲಂಚ: ಲೋಕಪಾಲಕ್ಕೆ ವರದಿ ಸಲ್ಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಲೋಕಸಭಾ ಸಂಸದೆ ಮಹುವಾ ಮೊಯಿತ್ರಾ ಹಾಗೂ ಉದ್ಯಮಿ ದರ್ಶನ್ ಹೀರಾನಂದಾನಿ ಅವರ ವಿರುದ್ಧ ದಾಖಲಾಗಿರುವ 'ಪ್ರಶ್ನೆಗಾಗಿ ಲಂಚ' ಪ್ರಕರಣದ ತನಿಖೆ ನಡೆಸುತ್ತಿರುವ ಕೇಂದ್ರ ತನಿಖಾ ಸಂಸ್ಥೆಯು (ಸಿಬಿಐ) ಸೋಮವಾರ ತನ್ನ ವರದಿಯನ್ನು ಲೋಕಪಾಲಕ್ಕೆ ಸಲ್ಲಿಸಿದೆ.



ಮಹುವಾ ಮೊಯಿತ್ರಾ

ಭ್ರಷ್ಟಾಚಾರ ನಿಗ್ರಹ ಸಂಸ್ಥೆಯಾಗಿರುವ ಲೋಕಪಾಲದ ಸೂಚನೆ ಮೇರೆಗೆ ಕಳೆದ ವರ್ಷ ಮಾರ್ಚ್ 21ರಂದು ಮಹುವಾ ಹಾಗೂ ಉದ್ಯಮಿ ದರ್ಶನ್ ವಿರುದ್ಧ ಸಿಬಿಐ ಈ ಪ್ರಕರಣ ದಾಖಲಿಸಿತ್ತು. ಇದೀಗ ಪ್ರಕರಣದ ತನಿಖಾ ವರದಿಯನ್ನು ಸಲ್ಲಿಸಲಾಗಿದೆ.

ವರದಿಯನ್ನು ಪರಿಶೀಲಿಸಿದ ಬಳಿಕ ಲೋಕಪಾಲ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯಮಿ ಗೌತಮ್ ಅದಾನಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿ ಉದ್ಯಮಿ ದರ್ಶನ್ ಹೀರಾನಂದಾನಿ ಅವರ ಆಣತಿಯಂತೆ 2023ರಲ್ಲಿ ಮಹುವಾ ತಮ್ಮ ಸಂಸತ್ ಖಾತೆ ಮೂಲಕ ಸಂಸತ್ತಿನಲ್ಲಿ ಪ್ರಶ್ನೆಗಳನ್ನು ಕೇಳಿದ್ದಾರೆ. ಇದಕ್ಕಾಗಿ ದರ್ಶನ್ ಅವರಿಂದ ಲಂಚ ಪಡೆದಿರುವುದಲ್ಲದೇ, ತಮ್ಮ ಖಾತೆಯ ಲಾಗಿನ್ ವಿವರಗಳನ್ನೂ ಅವರೊಂದಿಗೆ ಹಂಚಿಕೊಂಡಿದ್ದಾರೆಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿದ್ದರು.

ಈ ಆರೋಪಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆಗಳನ್ನು ನಡೆಸಿದ ಬಳಿಕ ಮಹುವಾ ಅವರನ್ನು ಲೋಕಸಭೆಯಿಂದ ಉಚ್ಚಾಟನೆ ಮಾಡಲಾಗಿತ್ತು. ಇದೇ ವೇಳೆ ಲೋಕಪಾಲವು ಸಿಬಿಐ ತನಿಖೆಗೆ ಆದೇಶಿಸಿತ್ತು.

ದಯಾಮರಣಕ್ಕೆ ರಾಷ್ಟ್ರಪತಿಗೆ ಮನವಿ

ಇಂದೋರ್ (ಪಿಟಿಐ): ತೀವ್ರ ಬೆನ್ನುನೋವಿನಿಂದ ಬಳಲುತ್ತಿರುವ ಮಧ್ಯಪ್ರದೇಶದ 52 ವರ್ಷದ ಅವಿವಾಹಿತ ಶಿಕ್ಷಕಿಯೊಬ್ಬರು ದಯಾಮರಣಕ್ಕೆ ಅವಕಾಶ ನೀಡುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ಮಾಡಿದ್ದಾರೆ.

ಇದರ ಬೆನ್ನಲ್ಲೇ, ಸ್ಥಳೀಯಾಡಳಿತವು ಅವರ ಬೇಡಿಕೆಯನ್ನು ತಡೆಯಲು ಯತ್ನಿಸುತ್ತಿದ್ದು, ಶಿಕ್ಷಕಿ ಮಾತ್ರ ತಮ್ಮ ಬೇಡಿಕೆಯಿಂದ ಹಿಂದೆ ಸರಿಯಲು ನಿರಾಕರಿಸಿದ್ದಾರೆ.

ಇಲ್ಲಿನ ಜಬ್ರಾನ್ ಕಾಲೊನಿಯ ಸಮುದಾಯ ಕಟ್ಟಡದಲ್ಲಿರುವ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿರುವ ಚಂದ್ರಕಾಂತ ಜೇಠಾನಿ ಅವರು ಆನುವಂಶಿಕ ಮೂಳೆಗಳ ದೌರ್ಬಲ್ಯ ಹಾಗೂ ಅಸ್ವಸ್ಥತೆಯಿಂದಾಗಿ ತೀವ್ರ ಬೆನ್ನುನೋವು ಅನುಭವಿಸುತ್ತಿದ್ದಾರೆ.



'ಈಗಾಗಲೇ ನನ್ನ ಕಣ್ಣು ಹಾಗೂ ದೇಹವನ್ನು ವೈದ್ಯಕೀಯ ಕಾಲೇಜಿಗೆ ದಾನ ಮಾಡಲು ಒಪ್ಪಿಗೆ ನೀಡಿದ್ದು, ನಾನು ಸತ್ತ ಬಳಿಕ ನಾನು ಅನುಭವಿಸಿದ ಕಾಯಿಲೆ ಕುರಿತಂತೆ ವೈದ್ಯಕೀಯ ವಿದ್ಯಾರ್ಥಿಗಳು ಅಧ್ಯಯನ ನಡೆಸಲಿದ್ದಾರೆ. ಹೀಗಾಗಿ, ದಯಾಮರಣ ನೀಡುವಂತೆ ಕೋರಿ ರಾಷ್ಟ್ರಪತಿ ಅವರಿಗೆ ಮಾಧ್ಯಮಗಳ ಮೂಲಕ ಮನವಿ ಸಲ್ಲಿಸಿದ್ದೇನೆ' ಎಂದು ತಿಳಿಸಿದ್ದಾರೆ.

ನಾಯಿಗೆ ವಾಸಸ್ಥಾನ ಪ್ರಮಾಣಪತ್ರ!



ಪಟ್ನಾ (ಪಿಟಿಐ): 'ಡಾಗ್ ಬಾಬು' ಎಂಬ ನಾಯಿಗೆ ಬಿಹಾರದ ಪಟ್ನಾದಲ್ಲಿ ವಾಸಸ್ಥಾನ ಪ್ರಮಾಣಪತ್ರವನ್ನು ನೀಡಲಾಗಿದ್ದು, ಈ ವಿಚಾರ ವಿವಾದಕ್ಕೀಡಾದ ಬೆನ್ನಲ್ಲೇ ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಡಾಗ್ ಬಾಬು' ಮತ್ತು ಅದರ ವಾಸಸ್ಥಾನ ಪ್ರಮಾಣಪತ್ರದ ಫೋಟೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು. ಈ ಬಗ್ಗೆ ಹಲವು ಜನ ತಕರಾರು ತೆಗೆದರು.

'ಇಂತಹ ಹುಚ್ಚುತನಕ್ಕೆ ಅವಕಾಶ ನೀಡುವ ಬದಲು, ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ಸಲಹೆಯಂತೆ ಚುನಾವಣಾ ಆಯೋಗವು ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್ ಅನ್ನು ಏಕೆ ಪರಿಗಣಿಸುತ್ತಿಲ್ಲ' ಎಂದು ಹಲವರು ಪ್ರಶ್ನಿಸಿದರು.

ಈ ಕುರಿತು ಚರ್ಚೆ ಕಾವೇರುತ್ತಿದ್ದಂತೆ, 'ನಾಯಿಗೆ ನೀಡಿರುವ ವಾಸಸ್ಥಾನ ಪ್ರಮಾಣ ಪತ್ರವನ್ನು ರದ್ದುಗೊಳಿಸಲಾಗಿದೆ' ಎಂದು ಜಿಲ್ಲಾಡಳಿತ ಸೋಮವಾರ ಸ್ಪಷ್ಟನೆ ನೀಡಿತು.

ನಾಯಿಯ ಹೆಸರಿನಲ್ಲಿ ವಾಸಸ್ಥಾನ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿದ ವ್ಯಕ್ತಿ, ಅದಕ್ಕಾಗಿ ಮಾಹಿತಿಯನ್ನು ದಾಖಲಿಸಿದ ಕಂಪ್ಯೂಟರ್ ಆಪರೇಟರ್ ಮತ್ತು ಪ್ರಮಾಣಪತ್ರವನ್ನು ನೀಡಿದ ಅಧಿಕಾರಿಯ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

24 ಗಂಟೆಯೊಳಗೆ ವರದಿ ನೀಡುವಂತೆ ಆದೇಶಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಇಲಾಖಾ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಜಧಾನಿ ನವದೆಹಲಿಯಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಗೆ ಅಂಡರ್ ಪಾಸ್ ಒಂದರಲ್ಲಿ ವಾಹನಗಳು ಕೊಚ್ಚಿ ಹೋಗುತ್ತಿರುವ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳ ಬಳಕೆದಾರರು ವ್ಯಾಪಕವಾಗಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ. ಇದು ನಿಜವಾದ ವಿಡಿಯೊವಲ್ಲ.



ವಿಡಿಯೊ ತುಣುಕಿನ ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಟ ನಡೆಸಿದಾಗ ಹಲವರು ಈ ವಿಡಿಯೊವನ್ನು ಹಂಚಿಕೊಂಡಿರುವುದು ತಿಳಿದು ಬಂತು. ನಂತರ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ, ಈ ಬಗ್ಗೆ ನಂಬಲರ್ಹ ಮಾಧ್ಯಮ ವರದಿಗಳು ಸಿಗಲಿಲ್ಲ. ವಿಡಿಯೊ ತುಣುಕನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಇದು ಎಐ ವಿಡಿಯೊ ಆಗಿರುವ ಅನುಮಾನ ವ್ಯಕ್ತವಾಯಿತು. ವಿಡಿಯೊವನ್ನು ಕ್ಯಾಂಟಿಲಕ್ಸ್ ಎಂಬ ಎಐ ಪತ್ತೆ ಟೂಲ್‌ನಲ್ಲಿ ಹಾಕಿದಾಗ, ಅದು ಎಐ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ನಿರಾಕರಣೆಯ ಮನೋಭಾವ



ದೀಪಾ ಹಿರೇಗುತ್ತಿ

ಕಡಿದಾಳ್ ಮಂಜಪ್ಪನವರು ರಾಜಕಾರಣದಿಂದ ನಿವೃತ್ತಿ ಹೊಂದಿದ ಮೇಲೆ ಕರ್ನಾಟಕದ ಹೈಕೋರ್ಟ್‌ನಲ್ಲಿ ನ್ಯಾಯವಾದಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಆಗ ಯಾರೋ ಅವರನ್ನು ಏಕೆ ವಕೀಲವೃತ್ತಿ ಮಾಡುತ್ತಿದ್ದೀರಿ ಎಂದು ಕೇಳಿದಾಗ ಮಂಜಪ್ಪನವರು, 'ಜೀವನೋಪಾಯಕ್ಕಾಗಿ' ಎಂದು ಉತ್ತರಿಸಿದರು.

ಹೀಗೆ ಉತ್ತರಿಸಿದ ವ್ಯಕ್ತಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು ಎಂಬ ಸಂಗತಿಯನ್ನು ಹೇಳಿದರೆ ಈಗಿನ ಪೀಳಿಗೆಗೆ ನಂಬುವುದು ಕಷ್ಟವಾಗಬಹುದು. ಹತ್ತಾರು ವರ್ಷ ಮಂತ್ರಿಯಾಗಿದ್ದುಕೊಂಡು, ಕೆಲಕಾಲ ಮುಖ್ಯಮಂತ್ರಿ ಹುದ್ದೆಯನ್ನೂ ಅಲಂಕರಿಸಿದ ರಾಜಕಾರಣಿಯೊಬ್ಬರು ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಕೊಳ್ಳುವುದನ್ನು ಇಂದಿನ ದಿನಮಾನದಲ್ಲಿ ಯಾರೂ ಊಹಿಸಲಾಗದು. ಕಾರಣ ರಾಜಕೀಯ ಪ್ರವೇಶಿಸಿದ ಮೇಲೆ ಮಂಜಪ್ಪನವರು ಸಾಲಗಾರರಾದರು. ಸಾಲ ತೀರಿಸಬೇಕಾದರೆ ಅವರು ವಕೀಲಿವೃತ್ತಿ ಕೈಗೊಳ್ಳಲೇಬೇಕಾಯಿತು. ಶಾಸಕರಾಗಿ ಒಂದು ಬಾರಿ ಅಧಿಕಾರ ಸಿಕ್ಕಿದರೆ ಮೂರು ತಲೆಮಾರು ಕುಳಿತು ತಿನ್ನುವಂತೆ ಆಸ್ತಿ ಮಾಡಿಡುವ ರಾಜಕಾರಣಿಗಳ ಮಧ್ಯೆ ರಾಜ್ಯವೊಂದರ ಮುಖ್ಯಮಂತ್ರಿಯಾಗಿ ಹೊಟ್ಟೆಪಾಡಿಗಾಗಿ ಯೋಚಿಸಬೇಕಾದ ಮಂಜಪ್ಪನಂಥವರು ನಮ್ಮ ರಾಜ್ಯದಲ್ಲಿ ಇದ್ದರು ಎಂಬ ಸಂಗತಿಯೇ ನಾವೆಲ್ಲ ಹೆಮ್ಮೆ ಪಡಬೇಕಾದದ್ದು.

ಹೀಗೆ ಮಂಜಪ್ಪನವರು ವಕೀಲಿವೃತ್ತಿ ಮಾಡುತ್ತಿರುವಾಗ ಅವರ ಮನೆಗೆ ಸರ್ ಎಂ. ವಿಶ್ವೇಶ್ವರಯ್ಯನವರು ಬಂದಿದ್ದರು. 'ಬಹಳ ವರ್ಷಗಳಿಂದ ಮೈಸೂರು ರಾಜ್ಯದಲ್ಲಿ ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ಗುರುತಿಸಿದ್ದೇನೆ. ನಿಮ್ಮ ಮನೆಗೆ ಸ್ಫೂರ್ತಿ ಪಡೆಯಲು ಬಂದಿದ್ದೇನೆ' ಎಂದಿದ್ದರು ಸರ್ ಎಂವಿ.

ರಾಜಕಾರಣವೆಂದರೆ ದೀನ ದುರ್ಬಲರ ಉದ್ಧಾರಕ್ಕೆ ದಾರಿ ಮಾಡಿಕೊಡುವ ಒಂದು ಅತ್ಯುತ್ತಮವಾದ ಅವಕಾಶ. ಬಡತನ ನಿವಾರಣೆಗಾಗಿ ಶ್ರಮಿಸುತ್ತ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತ, ಅಧಿಕಾರದ ಅಮಲು ತಲೆಗೆ ಹತ್ತದಂತೆ ಎಚ್ಚರ ವಹಿಸುತ್ತ ಸಾಗಬೇಕಾದ ಸುದೀರ್ಘ ಹಾದಿ. ಆದರೆ ಅದು ಜನಪ್ರಿಯತೆ, ಸಂಪತ್ತಿಗೆ ರಹದಾರಿ ಎಂಬ ತಪ್ಪು ಅಭಿಪ್ರಾಯದಿಂದ ರಾಜಕೀಯ ಕಲುಷಿತಗೊಂಡಿದೆ. ಅಧಿಕಾರ ಇರುವುದೇ ತಮ್ಮ ಹಿತಕ್ಕಾಗಿ ಎಂದು ನಂಬಿದವರಿಗೆ ಈ ನಿರಾಕರಣೆ, ನಿರ್ಲಿಪ್ತಿಯ ಮನೋಭಾವ ಬಹುಶಃ ಅರ್ಥವೇ ಆಗಲಿಕ್ಕಿಲ್ಲ. ಜೇಡರ ದಾಸಿಮಯ್ಯ ಹೇಳಿರುವಂತೆ, 'ಕರಿಯನಿತ್ತೊಡೆ ಒಲ್ಲೆ, ಸಿರಿಯನಿತ್ತೊಡೆ ಒಲ್ಲೆ, ಹಿರಿದಪ್ಪ ರಾಜ್ಯವಿತ್ತೊಡೆ ಒಲ್ಲೆ' ಎಂಬ ನಿರಾಕರಣ ಮನೋಭಾವವನ್ನು ಕಿಂಚಿತ್ತಾದರೂ ತಮ್ಮೊಳಗೆ ಇಳಿಸಿಕೊಳ್ಳುವ ಮನೋಭಾವವಿರುವ ವ್ಯಕ್ತಿಗಳು ಬೆರಳೆಣಿಕೆಯಷ್ಟು. ಈ ಭ್ರಷ್ಟ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವವರನ್ನು ಹಗಲಿನಲ್ಲೇ ದೀಪ ಹಿಡಿದುಕೊಂಡು ಹುಡುಕಬೇಕಾಗಿರುವಂತಹ ಪರಿಸ್ಥಿತಿ ನಮ್ಮದು.


ಆದ್ದರಿಂದ ತಮ್ಮ ಎಪ್ಪತ್ತರ ಇಳಿವಯಸ್ಸಿನಲ್ಲೂ ಕರಿಕೋಟು ಹಾಕಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದ ಮಾಜಿ ಮುಖ್ಯಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನಂತಹ ಮಹಾನುಭಾವರನ್ನು ನಾವು ಆಗಾಗ ಸ್ಮರಿಸುತ್ತಿರಬೇಕು. ಎಳೆಯರಿಗೆ ಇಂತಹ ವಿಶಿಷ್ಟ ವ್ಯಕ್ತಿಗಳನ್ನು ಪರಿಚಯಿಸುತ್ತಿರಬೇಕು. ಆಗಲಾದರೂ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಅಧಿಕಾರ, ಹಣದ ಹಿಂದೆ ಓಡುತ್ತಿರುವ ನಾವೆಲ್ಲ ಒಂದು ಕ್ಷಣ ನಿಂತು ಯೋಚಿಸಬಹುದು. ಆತ್ಮಾವಲೋಕನ ಮಾಡಿಕೊಳ್ಳಬಹುದು.

ಗುಂಡಣ್ಣ



ಪದಬಂಧ 6118

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಕೈ ಕೊನೆಗಿಟ್ಟರೆ ಹೆದರಿಕೆಯೇ? (4)
3.ಮೃಗಜಲ ಇಲ್ಲಿ ಗೋಚರಿಸುತ್ತಿದೆ (4)
5.ಮೃತ್ಯುದೇವತೆ ಕೊನೆಗಿದ್ದಾಗಿನ ಸೂತ್ರ (3)
7.ತರ್ಕ ಮಾಡುತ್ತಿರುವ ವ್ಯಾಪಾರಿ (3)
9.ನಾವೆಯನ್ನು ನಡೆಸುವವನು (3)
10.ಈತ ವಿಲಾಸಪ್ರಿಯ (3)
11.ವಾಲಿಯ ಮಗನಿವನು (3)
15.ಅತಿಶಯವಾದ ಪ್ರೀತಿ (4)
16.ವನದಲ್ಲಿ ಸಿಕ್ಕಿರುವ ಆದಾಯ (4)

ಮೇಲಿಂದ ಕೆಳಕ್ಕೆ
1.ಈಕೆ ಒಡಹುಟ್ಟಿದವಳು (3)
2.ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವ ವಸ್ತು (2)
3.ಈತ ಲಗ್ನವಾಗುತ್ತಿರುವವ (5)
4.ಹಾಲು ಮತ್ತು ಮೊಸರಿನ ಸಾರವತ್ತಾದ ಭಾಗ (2)
6.ಎಂದಿನಂತೆ ಎಂದು ಹೀಗೆ ಹೇಳಿ (5)
8.ಕಸ್ತೂರಿಯನ್ನು ಕೊಡುವ ಕೊಂಬಿಲ್ಲದ ಜಿಂಕೆ (5)
9.ಒಳಜಗಳವಿದು (5)
12.ದಶಮಾನದ ಹಲ್ಲು! (3)
13.ಸಂಕಟದ ಸಮಯದಲ್ಲಿ ಕಾಣಿಸಿದ ಸೇತುವೆ (2)
14.ಅಭಾವದಲ್ಲಿ ಬಂದಿಳಿದ ಅಕ್ಕನ ಗಂಡ (2)

6117ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮಾಸ 3.ಅರಸ
6.ದಯಾಳು 7.ರಮಣಿ
8.ಗಟಾರ 10.ಮದ್ದು
11.ಕನ್ನಡಿ 13.ಹೇಣ
15.ಕದನ 16.ವಿಜಯ
17.ಹಾರವ 18.ಕೆಡವು
19.ನವೀನ

ಮೇಲಿಂದ ಕೆಳಕ್ಕೆ:
1.ಸವಿಗನಸು 2.ಸದರ
3.ಅಳು 4.ಸರಹದ್ದು
5.ಪಾಣಿನಿ 9.ಕಂಕಣ
10.ಮಡಿಲು 12.ವಿಮಾನಯಾನ
13.ಹೆಬ್ಬಯಕೆ 14.ರವಿಕೆ
15.ಕವನ 16.ಹಾವು

ಸುಡೊಕು 6502

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9	4		5			2	1
3		5	2		1	7	9	
	1			9				5
5		7			9	1		
	6			2			8	
9		8	6			5		2
1		2		8			6	
			5		6	2		3
6		3		4			5	

6501 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಜುಲೈ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪಂಚಮಿ ಗಂ. 24-47 **ನಕ್ಷತ್ರ:** ಉತ್ತರಾಫಲ್ಗುಣಿ ಗಂ. 19-28 **ಯೋಗ:** ಶಿವ ಗಂ. 27-05 **ಕರಣ:** ಬವ ಗಂ. 12-01, ಕರ್ಕಾಟಕ ಮಾಸದ 13 ನೇ ದಿನ. **ಮಳೆ ನಕ್ಷತ್ರ :** ಪುಷ್ಯ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 04-30 **ಸೂರ್ಯೋದಯ :** 06-19 ಸೂರ್ಯಾಸ್ತ : 06-56, **ಮುಸ್ಲಿಂ ದಿನಾಂಕ :** 03 ಸಫರ್, ದಿನ ವಿಶೇಷ : ನಾಗರ ಪಂಚಮಿ, **ಅದೃಷ್ಟ ಸಂಖ್ಯೆ :** 1, 9

ಮೇಷ: ಕೃಷಿಭೂಮಿಯನ್ನು ಖರೀದಿಸುವ ವಿಚಾರದಲ್ಲಿ ಅಕ್ಕಪಕ್ಕದ ರೈತರು ಕೊಡುವ ಸಲಹೆಯಿಂದ ಅನುಕೂಲವಾಗುವಂಥ ಸನ್ನಿವೇಶ ಒದಗಿ ಬರಲಿದೆ. ಹಣದ ವಿಚಾರದಲ್ಲಿ ಜಿಗುಟುತನ ತೋರಿ ಅವಹೇಳನಕ್ಕೆ ಒಳಗಾಗುವಿರಿ.

ವೃಷಭ: ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ. ದಿನಾಂತ್ಯದಲ್ಲಿ ಆಶ್ಚರ್ಯ ಸುದ್ದಿ ಕೇಳುವಿರಿ. ಆಪ್ತ ಸಹಾಯಕ್ಕೆ ಧನ್ಯವಾದ ತಿಳಿಸಲು ಮರೆಯದಿರಿ. ಸಂಪರ್ಕವನ್ನು ಭದ್ರ ಮಾಡಿಕೊಳ್ಳಿ.

ಮಿಥುನ: ಆಫೀಸಿನ ಸಿಬ್ಬಂದಿಯೊಂದಿಗೆ ಮಾತುಗಳನ್ನು ಕಡಿಮೆ ಮಾಡಿ. ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡಬೇಕಾದ ಸಂದರ್ಭ ಬರುವುದು. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಗಮನಿಸಿ.

ಕರ್ಕಾಟಕ: ಮಾನಸಿಕ ನೆಮ್ಮದಿ ಇರುವುದು. ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯತೆಯ ಸನ್ನಿವೇಶ ಎದುರಾಗುವುದು. ಮಗನ ಓದಿನ ಬಗ್ಗೆ ಗಮನಹರಿಸಿ.

ಸಿಂಹ: ಮಾರಾಟ ಪ್ರತಿನಿಧಿಗಳು ಈ ದಿನದ ಗುರಿಯನ್ನು ಸುಲಭವಾಗಿ ಮುಟ್ಟುವುದರಿಂದ ಸಂತೋಷ ಇಮ್ಮಡಿಯಾಗಲಿದೆ. ಪೊಲೀಸ್ ವೃತ್ತಿಯಲ್ಲಿ ಇರುವವರು ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಕನ್ಯಾ: ಮಹಿಳೆಯರಿಗೆ ತನ್ನ ತವರು ಮನೆಯಲ್ಲಿ ನಡೆದ ದುರ್ಘಟನೆ ಭಾವುಕರನ್ನಾಗಿ ಮಾಡಲಿದೆ. ವಾಹನ ಚಾಲನೆ ಅಥವಾ ಕಬ್ಬಿಣ ಕೆಲಸ ಮಾಡುವವರು ಕಾಳಜಿ ವಹಿಸಿ. ವಿದ್ಯಾರ್ಥಿಗಳು ಅಭ್ಯಾಸ ನಡೆಸಿ.

ತುಲಾ: ಆಡಳಿತಾಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ. ದ್ವಿಚಕ್ರ ವಾಹನಗಳ ಮಾರಾಟಗಾರರು ಭರ್ಜರಿ ವಹಿವಾಟು ನಡೆಸುವರು. ಆಹಾರದ ವ್ಯತ್ಯಾಸದಿಂದ, ವಾತಾವರಣದ ಬದಲಾವಣೆಯಿಂದ ಅನಾರೋಗ್ಯ ಉಂಟಾಗಲಿದೆ.

ವೃಶ್ಚಿಕ: ಕ್ರೀಡೆಗಳಲ್ಲಿ ಸಮಯ ಕಳೆಯುವಿರಿ. ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆಗಳು ಬರಲಿವೆ. ಯಾವುದೇ ತೀರ್ಮಾನ ತೆಗೆದುಕೊಳ್ಳಬೇಡಿ. ಕಾಲು ನೋವು ನಿವಾರಣೆಗೆ ಅಭ್ಯಂಗ ಮಾಡಿರಿ.

ಧನು: ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು. ಮಧ್ಯಮ ವರ್ಗದವರಿಗೆ ಹಣದ ಅಭಾವ ಇರುವುದಿಲ್ಲ. ವಿವಾಹದ ವಿಷಯಗಳು ತೀರ್ಮಾನಕ್ಕೆ ಬರಲು ಕೌಟುಂಬಿಕವಾಗಿ ಚರ್ಚೆಯಾಗುವುದು.


ಮಕರ: ಸಂಶೋಧನಾ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಮುನ್ನಡೆ ಕಂಡುಬರುತ್ತದೆ. ಅಧಿಕವಾದ ಕೆಲಸಗಳ ಬಗ್ಗೆ ಗಮನ ಹರಿಸಿ ಪೂರ್ವತಯಾರಿ ಮಾಡಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣವಾಗಿರುತ್ತದೆ.

ಕುಂಭ: ಷೇರು ಮಾರಾಟದಿಂದ ಅಧಿಕ ಲಾಭ ಹೊಂದಬಹುದು. ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯುವುದು. ಧಾರ್ಮಿಕ ನಡೆಗೆ ಶೀಘ್ರ ಫಲವನ್ನು ಹೊಂದುವ ಯೋಗವಿದೆ.

ಮೀನ: ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷವಾಗುವುದು. ಹಿರಿಯರ ಮಾತಿನಂತೆ ನಡೆದುಕೊಳ್ಳುವಿರಿ. ಮಗನ ವಿದ್ಯಾಭ್ಯಾಸದಲ್ಲಿ ಅಡೆತಡೆಗಳು ಇದ್ದರೂ, ಪ್ರಗತಿಗೆ ಕೊರತೆ ಆಗುವುದಿಲ್ಲ.

ವಿನಿಮಯ ದರ: ಡಾಲರ್ 86.70 | ಪೌಂಡ್ 116.23 | ಯುರೊ 101.09 | ಯೆನ್ (100ಕ್ಕೆ) 58

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,837
ಇಂದಿನ ಅಂತ್ಯ:	24,680
ದಿನದ ಕನಿಷ್ಠ:	24,646
	↓ 156

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹465
	12 ಕ್ಕೆ	₹65
ಮೈಸೂರು:	100 ಕ್ಕೆ	₹460

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1230 (1235)
ಸೂರ್ಯಕಾಂತಿ (ರಿಫೈನ್ಡ್)	₹1360 (1365)
ಪಾಮೋಲಿನ್	₹1195 (1200)

ಕೈಗಾರಿಕಾ ಉತ್ಪಾದನೆ ಕುಂಠಿತ

10 ತಿಂಗಳ ಕನಿಷ್ಠ ಮಟ್ಟಕ್ಕೆ ಬೆಳವಣಿಗೆ ದಾಖಲು: ಎನ್‌ಎಸ್‌ಒ ವರದಿ



ಮುಖ್ಯಾಂಶಗಳು
- ಗಣಿಗಾರಿಕೆ, ವಿದ್ಯುತ್ ಉತ್ಪಾದನೆ ಮೇಲೆ ಮಳೆ ಪರಿಣಾಮ
- ಜೂನ್ ತಿಂಗಳಿನಲ್ಲಿ ಶೇ 1.5ರಷ್ಟು ಬೆಳವಣಿಗೆ ದಾಖಲು

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆಯು ಜೂನ್‌ನಲ್ಲಿ 10 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ಜೂನ್ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 4.9ರಷ್ಟಿತ್ತು. ಅದು ಈ ಬಾರಿ ಶೇ 1.5ಕ್ಕೆ ಇಳಿಕೆಯಾಗಿದೆ.

ಮುಂಗಾರು ಮಳೆಯು ವಾಡಿಕೆಗಿಂತ ಮೊದಲೇ ಆರಂಭವಾಗಿ ಗಣಿಗಾರಿಕೆ ಮತ್ತು ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮ ಬೀರಿದ್ದರಿಂದ ವಲಯದ ಬೆಳವಣಿಗೆ ಇಳಿಕೆ ಕಂಡಿದೆ ಎಂದು ಮಾಸಿಕ ವರದಿ ತಿಳಿಸಿದೆ.

ತಯಾರಿಕಾ ವಲಯದ ಉತ್ಪಾದನೆಯು ಶೇ 3.9ಕ್ಕೆ ಏರಿಕೆಯಾಗಿದೆ. ಕಳೆದ ಜೂನ್‌ನಲ್ಲಿ ಶೇ 3.5ರಷ್ಟಿತ್ತು. ಗಣಿಗಾರಿಕೆ ಉತ್ಪಾದನೆಯು ಶೇ 10.3ರಷ್ಟಿತ್ತು. ಅದು ಈ ಬಾರಿ ಶೇ 8.7ಕ್ಕೆ ಇಳಿದಿದೆ. ವಿದ್ಯುತ್ ಉತ್ಪಾದನೆ ಶೇ 8.6ರಿಂದ ಶೇ 2.6ಕ್ಕೆ ಇಳಿದಿದೆ.

ಕಳೆದ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕೈಗಾರಿಕಾ ಉತ್ಪಾದನಾ ಶೇ 5.4ರಷ್ಟು ಬೆಳವಣಿಗೆ ಆಗಿತ್ತು. ಈ ಬಾರಿ ಶೇ 2ಕ್ಕೆ ಇಳಿದಿದೆ. ಇದು 11 ತ್ರೈಮಾಸಿಕದ ಕನಿಷ್ಠ ಮಟ್ಟವಾಗಿದೆ. ಮೂಲಸೌಕರ್ಯ/ನಿರ್ಮಾಣ ವಲಯದ ಬೆಳವಣಿಗೆ ಶೇ 8.2ರಿಂದ ಶೇ 7.2ಕ್ಕೆ ಇಳಿದಿದೆ ಎಂದು ತಿಳಿಸಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಈ ಪ್ರತಿಯೊಂದು ಲೆಕ್ಕಹಾಕಲಾಗುತ್ತದೆ.

'ಜೂನ್ ತಿಂಗಳ ಮಧ್ಯದಲ್ಲಿ ಹೆಚ್ಚಿನ ಮಳೆ ಸುರಿಯಿತು. ಇದು ಗಣಿಗಾರಿಕೆ ಮತ್ತು ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮ ಬೀರಿತು' ಎಂದು ಐಸಿಆರ್‌ಎನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ನಾಡಿಗೆ ದೊಡ್ಡದು ನಾಗರ ಹಬ್ಬ

● ನವೀನ ಗಂಗೋತ್ರಿ



ದೇಶದ ನಾಲ್ಕೂ ದಿಕ್ಕಿನ ರಾಜ್ಯಗಳಲ್ಲಿ ನಾಗರಪಂಚಮಿ ಹಬ್ಬವು ಬೇರೆ ಬೇರೆ ಹೆಸರಿನಲ್ಲಿ ಆಚರಣೆಯಲ್ಲಿದೆ. ನಮ್ಮ ರಾಜ್ಯಗಳ ಭಾಷೆ ಮತ್ತು ಭೂಭಾಗಗಳು ಬೇರೆಯಾದರೂ ಸಾಂಸ್ಕೃತಿಕವಾಗಿ ನಾವು ಒಂದೇ ಎಂಬುದಕ್ಕೆ ಇರುವ ಹಲವಾರು ಉದಾಹರಣೆಗಳಲ್ಲಿ ಇದು ಒಂದು–ನೀರಸ್ವಪ ನಾಗನ ಕುರಿತಾಗಿ ಇರುವ ಪೂಜ್ಯಭಾವ.

'ನಾಗರ ಪಂಚಮಿ ನಾಡಿಗೆ ದೊಡ್ಡದು' ಎಂಬ ಜನಪದರ ಹಾಡಿನ ಸಾಲನ್ನು ನಾವೆಲ್ಲ ಅಲ್ಲಲ್ಲಿ ಕೇಳಿದ್ದೇವೆ. ಆಯಾ ಪ್ರದೇಶಕ್ಕೆ ಅನುಗುಣವಾಗಿ ಬೇರೆ ಬೇರೆ ಹಬ್ಬಗಳು ದೊಡ್ಡದು ಎನ್ನಿಸಿಕೊಳ್ಳುತ್ತವೆ. ದಕ್ಷಿಣೋತ್ತರ ಕನ್ನಡದ ನಾಗಾರಾಧನೆಯ ಭಾಗದಲ್ಲಿ ಬಲು ಭಯ, ಶ್ರದ್ಧೆ ಮತ್ತು ಭಕ್ತಿಯಿಂದ ಹಾಗೂ ಹೆಚ್ಚಿನ ಸಾರ್ವಜನಿಕ ತೋರ್ಪಡಿಕೆ ಇಲ್ಲದೆ ನಡೆಯುವ ಈ ಹಬ್ಬ ಉತ್ತರ ಕರ್ನಾಟಕದ ಭಾಗದಲ್ಲಿ ಅನುವಾಗಿಯೇ ದೊಡ್ಡ ಹಬ್ಬ ಎನ್ನಿಸಿಕೊಂಡು ಸಾರ್ವಜನಿಕ ಸ್ವರೂಪವನ್ನು ಪಡೆಯುತ್ತದೆ. ದೊಡ್ಡ ಹಬ್ಬವೆಂದರೆ ಮೇಲೆ ಒಂದೇ ದಿನದಲ್ಲಿ ಮುಗಿಯುವುದಲ್ಲ. ಹಾಗಾಗಿ ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಇದು ನಾಗರ ಅಮಾವಾಸ್ಯೆ (ಆಷಾಢ ಅಮಾವಾಸ್ಯೆ), ನಾಗರ ಚತುರ್ಥಿ ಮತ್ತು ಪಂಚಮಿ ಸೇರಿ ಮೂರು ದಿನದ ಹಬ್ಬವಾಗುತ್ತದೆ. ನಾಗಾಪಂಚಮಿಯನ್ನೇ 'ರೊಟ್ಟಿಪಂಚಮಿ' ಎಂದು ಕರೆಯುವುದು ಉತ್ತರ ಕರ್ನಾಟಕದಲ್ಲಿ ರೂಢಿ. ಇಲ್ಲಿನ ಆಹಾರಸಂಸ್ಕೃತಿಯಲ್ಲಿ ರೊಟ್ಟಿಗಿರುವ ಸ್ಥಾನಮಾನ ಅನನ್ಯ. ಇದಕ್ಕೆ ಸಂವಾದಿಯಾಗಿ ಉತ್ತರ ಕನ್ನಡದ ಗ್ರಾಮೀಣ ಭಾಗದಲ್ಲಿ ನಾಗರಪಂಚಮಿಯಂದು 'ಚಪ್ಪರೊಟ್ಟಿ' ಎಂದು ಕರೆಯಲಾಗುವ ಉಪ್ಪಿಲ್ಲದ ಅಕ್ಕಿರೊಟ್ಟಿಯನ್ನು ಮಾಡಿ ನಾಗನಿಗೆ ನೈವೇದ್ಯ ಮಾಡುವ ಸಂಪ್ರದಾಯ ಉಂಟು.

ಇನ್ನು ಈ ಹೊತ್ತಿನಲ್ಲಿ ಉತ್ತರ ಕರ್ನಾಟಕದಲ್ಲಿ ಮದುವೆ ಮಾಡಿಕೊಟ್ಟ ತಂಗಿಯಂದಿರನ್ನು ಅಣ್ಣಂದಿರು ಈ ಹಬ್ಬಕ್ಕೆಂದು ತವರಿಗೆ ಕರೆಯುವುದು ಬಲು ಮಹತ್ತ್ವದ ಒಂದು ಆಚರಣೆ. ಈ ಹಿನ್ನೆಲೆಯಲ್ಲಿ ಪ್ರಸಿದ್ಧವಾದ, 'ಪಂಚಮಿ ಹಬ್ಬ ಉಳಿದಾವ ದಿನ ನಾಕ, ಅಣ್ಣ ಬರಲಿಲ್ಲ ಯಾಕ ಕರಿಯಾಕ' ಎಂದಿತ್ಯಾದಿ ಜನಪದ ಹಾಡುಗಳಲ್ಲಿ ಈ ಹಬ್ಬದ ಬಣ್ಣಗಳನ್ನು ಕಾಣಬಹುದು. ಜೀವಂತ ನಾಗನನ್ನು ತಂದು ಪೂಜಿಸುವುದು ಆಚರಣೆಯ ಸೇರಿದಂತೆ ಗ್ರಾಮದ ಮಹಿಳೆಯರೆಲ್ಲ ಸೇರಿ ಉಯ್ಯಾಲೆ ಆಟವಾಡುವ ತನಕ ನಾನಾ ವಿಧದ ಆಚರಣೆ ಜಾರಿಯಲ್ಲಿದೆ. ಸಮುದಾಯ ಬದುಕಿನ ಸುಂದರ ಅನುಭೂತಿಕ ಸಾಲಿನಲ್ಲಿ ಪಂಚಮಿ ಹಬ್ಬದ ಉಯ್ಯಾಲೆ, ಗೋಕರಂಟ, ಸಖಿಯರೊಡನೆ ತನಿ ಎರೆಯುವುದು, ಗುಂಪಾಗಿ ಹಾಡು ಹೇಳುವುದು, ಚಪ್ಪಾಳೆ ತಟ್ಟಿಕೊಂಡು ನರ್ತಿಸುವುದು–ಇವೆಲ್ಲವೂ ಸೇರಿವೆ.

ಈ ಹಬ್ಬದಂಥ ನಿರಾಡಂಬರವಾದ ಹಬ್ಬಗಳು ಭಕ್ತಿಭಾವ ಮತ್ತು ಪರಿಸರದೊಟ್ಟಿಗಿನ ಸಹಬಾಳ್ವೆಯನ್ನು ಸಾರುತ್ತಲೇ ಸಾಧಿಸುವ ಇನ್ನೊಂದು ದೊಡ್ಡ ವಿಕ್ರಮವೆಂದರೆ ಅದು ಆಯಾ ಪ್ರದೇಶದ ಆಹಾರಸಂಸ್ಕೃತಿಯನ್ನು ಜತನದಿಂದ ಕಾಪಾಡುವುದು, ಜೀವಂತ ಉಳಿಸುವುದು. ಆಧುನಿಕತೆಯ ಒಳಗಿನ ಅಡಿಯಿಂದ ಹೆಚ್ಚು ಉಳಿಸುವ ಸರಳ ಮತ್ತು ಸ್ವಾಭಾವಿಕವಾದ ಜೀವಂತ ಸಂಸ್ಕೃತಿಯ ಬಲು ದೊಡ್ಡ ಗುರುತು–ಅದು ಆಹಾರದ್ದು. ಅದನ್ನು ಉಳಿಸುವಲ್ಲಿ ನಾಗರಪಂಚಮಿಯಂಥ ಹಬ್ಬಗಳ ಕೊಡುಗೆ ದೊಡ್ಡದು. ಕನಿಷ್ಠಪಕ್ಷ ಅದೊಂದು ದಿನ, ಆಯಾ ಪ್ರದೇಶಕ್ಕೆ ವಿಶಿಷ್ಟವೆನಿಸಿದ ಆಹಾರವನ್ನು ತಯಾರಿಸುವ ಮತ್ತು ಸವಿಯುವ ಸಂದರ್ಭ ಈ ಹಬ್ಬದಲ್ಲಿ ಒದಗಿಬರುತ್ತದೆ.

ಚಿಟಿಕೆ ಸುದ್ದಿ

ಬೆಳ್ಳಿ ದರ ಕೆ.ಜಿಗೆ ₹1 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹500 ಕಡಿಮೆಯಾಗಿ, ₹98,020ರಂತೆ ಮಾರಾಟವಾಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹97,750 ಆಗಿದೆ.

ಬೆಳ್ಳಿ ದರವು ಕೆ.ಜಿಗೆ ₹1 ಸಾವಿರ ಕಡಿಮೆಯಾಗಿ, ₹1.13 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪೆಟ್ರೋನೆಟ್ ಘಟಕದ ವಿಸ್ತರಣೆಗೆ ₹12 ಸಾವಿರ ಕೋಟಿ ಸಾಲ ಅಗತ್ಯ

ನವದೆಹಲಿ (ರಾಯಿಟರ್ಸ್): ದೇಶದ ಪ್ರಮುಖ ಅನಿಲ ಆಮದುದಾರ ಕಂಪನಿ ಪೆಟ್ರೋನೆಟ್ ಎಲ್‌ಎನ್‌ಜಿ, ₹12,116 ಕೋಟಿ ಸಾಲ ಪಡೆಯಲು ನಿರ್ಧರಿಸಿದೆ. ಈ ಹಣವನ್ನು ಘಟಕದ ವಿಸ್ತರಣೆಗೆ ಬಳಸಿಕೊಳ್ಳಲಾಗುವುದು ಎಂದು ಕಂಪನಿಯ ಹಣಕಾಸು ವಿಭಾಗದ ಮುಖ್ಯಸ್ಥ ಸೌರವ್ ಮಿತ್ರ ಸೋಮವಾರ ತಿಳಿಸಿದ್ದಾರೆ.

ಕಂಪನಿಯು ಗುಜರಾತ್‌ನಲ್ಲಿ ಪೆಟ್ರೋಕೆಮಿಕಲ್ ಘಟಕವನ್ನು ಸ್ಥಾಪಿಸುತ್ತಿದೆ. ಇದಕ್ಕೆ ಅಂದಾಜು ₹20,600 ಕೋಟಿ ವೆಚ್ಚವಾಗಲಿದೆ.

ಅಲ್ಲದೆ, ಮುಂದಿನ ಕೆಲವು ವರ್ಷದಲ್ಲಿ ₹30 ಸಾವಿರ ಕೋಟಿಯನ್ನು ಖರ್ಚು ಮಾಡಲಿದ್ದು, ಈ ಪೈಕಿ ಹೆಚ್ಚಿನ ಹಣವನ್ನು ಪೆಟ್ರೋಕೆಮಿಕಲ್ ಯೋಜನೆಗಳನ್ನು ನಿರ್ಮಿಸಲು ಉದ್ದೇಶಿಸಿದೆ ಎಂದು ತಿಳಿಸಿದ್ದಾರೆ.

2026–27ರ ಆರ್ಥಿಕ ವರ್ಷದಲ್ಲಿನ ಕಂಪನಿಯ ಬಂಡವಾಳ ವೆಚ್ಚವು ಪ್ರಸಕ್ತ ಆರ್ಥಿಕ ವರ್ಷಕ್ಕೆ ಅಂದಾಜು ಮಾಡಲಾಗಿರುವ ₹5 ಸಾವಿರ ಕೋಟಿಗಿಂತಲೂ ಹೆಚ್ಚಿರಲಿದೆ ಎಂದು ಹೇಳಿದೆ. ಕಳೆದ ವಾರ ಕಂಪನಿ ಆಡಳಿತ ಮಂಡಳಿಯು, ಒಡಿಶಾದಲ್ಲಿ ವಾರ್ಷಿಕ 50 ಲಕ್ಷ ಟನ್ ಸಾಮರ್ಥ್ಯದ ಎಲ್‌ಎನ್‌ಜಿ ಆಮದು ಟರ್ಮಿನಲ್ ನಿರ್ಮಿಸಲು ಅನುಮೋದನೆ ನೀಡಿತ್ತು.

ಸೆನ್ಸೆಕ್ಸ್, ನಿಫ್ಟಿ ಇಳಿಕೆ



ಮುಂಬೈ (ಪಿಟಿಐ): ದೇಶದ ಷೇರುಪೇಟೆಯ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರುಗಳು ಮಾರಾಟ ಒತ್ತಡಕ್ಕೆ ಸಿಲುಕಿದ್ದು ಮತ್ತು ಭಾರತ–ಅಮೆರಿಕದ ವ್ಯಾಪಾರ ಒಪ್ಪಂದದ ಅನಿಶ್ಚಿತತೆಯಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 572 ಅಂಶ ಇಳಿಕೆಯಾಗಿ, 80,891ಕ್ಕೆ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 156 ಅಂಶ ಕಡಿಮೆಯಾಗಿ, 24,680ಕ್ಕೆ ಕೊನೆಗೊಂಡಿದೆ.

ಟಿಸಿಎಸ್ ಜೊತೆ ಐ.ಟಿ ಸಚಿವಾಲಯ ಸಂಪರ್ಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯೊಂದಿಗೆ ಸಚಿವಾಲಯವು ಸಂಪರ್ಕದಲ್ಲಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಸೋಮವಾರ ತಿಳಿಸಿದೆ.

ಟಿಸಿಎಸ್ ಕಂಪನಿ ಉದ್ಯೋಗಿಗಳನ್ನು ವಜಾಗೊಳಿಸುವುದಾಗಿ ಹೇಳಿರುವ ನಿರ್ಧಾರವು ಕಳವಳ ಮೂಡಿಸಿದೆ. ಯಾವ ಕಾರಣಕ್ಕಾಗಿ ಈ ಕ್ರಮ ಕೈಗೊಂಡಿದೆ ಎಂದು ಪರಿಶೀಲಿಸಲಾಗುವುದು. ಸರ್ಕಾರವು ಈ ಬೆಳವಣಿಗೆ ಬಗ್ಗೆ ತೀವ್ರ ನಿಗಾ ವಹಿಸಿದ್ದು, ಕಂಪನಿ ಜೊತೆ ಸಂಪರ್ಕದಲ್ಲಿದೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶದ ಅತಿದೊಡ್ಡ ಐ.ಟಿ ಸೇವಾ ಪೂರೈಕೆದಾರ ಕಂಪನಿ ಟಿಸಿಎಸ್ ತನ್ನ 12 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿರುವುದಾಗಿ ಭಾನುವಾರ ಹೇಳಿತ್ತು.

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹272-588
ದ್ವಿತಳಿ (ಬಿ.ವಿ)	₹261-696

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹208.50
ಆರ್‌ಎಸ್‌ಎಸ್-5	₹202.50
ಗುಡ್ ಲಾಟ್	₹186

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹26000-26100
ದಾವಣಗೆರೆ	₹18500-18500
ತಿಪಟೂರು	₹25000-28000

ರಬ್ಬರ್ ಧಾರಣೆ ಕೊಂಚ ಏರಿಕೆ

ಆರ್‌ಎಸ್‌ಎಸ್– 4 ದರ್ಜೆಗೆ ಕೆ.ಜಿಗೆ ₹208 ದಾಟಿದ ಬೆಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: ರಬ್ಬರ್ ಧಾರಣೆ ಒಂದು ವಾರದಿಂದ ನಿಧಾನಗತಿಯಲ್ಲಿ ಏರಿಕೆ ಕಾಣುತ್ತಿದೆ. ಸೋಮವಾರ ಕ್ಯಾಂಪ್ಕೊ ಮಾರುಕಟ್ಟೆಯಲ್ಲಿ 'ಆರ್‌ಎಸ್‌ಎಸ್–4' ಗ್ರೇಡ್‌ಗೆ (ರಿಬ್ಬ್ಡ್ ಸ್ಮೋಕ್ಡ್ ಶೀಟ್) ಕೆ.ಜಿಗೆ ಗರಿಷ್ಠ ₹208.50 ದರ ದೊರೆತಿದೆ.

ಶನಿವಾರ ಆರ್‌ಎಸ್‌ಎಸ್– 4 ದರ್ಜೆಯ ರಬ್ಬರ್‌ಗೆ ಕೆ.ಜಿಗೆ ₹209 ಧಾರಣೆ ಇತ್ತು. 2024ರ ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ₹232 ರವರೆಗೆ ಏರಿಕೆ ಕಂಡಿದ್ದ ಧಾರಣೆ, ನಂತರ ತುಸು ಇಳಿಮುಖವಾಗಿತ್ತು. ಕೆ.ಜಿಗೆ ಸರಾಸರಿ ₹180ರಿಂದ ₹190 ಇದ್ದ ದರ ಒಂದೂವರೆ ತಿಂಗಳಿನಿಂದ ತುಸು ಏರುಗತಿಯಲ್ಲಿ ಸಾಗಿದ್ದು ₹205 ದಾಟಿತ್ತು.

'ಮಳೆಗಾಲದಲ್ಲೂ ರಬ್ಬರ್ ಟ್ಯಾಪಿಂಗ್ ಮುಂದುವರಿಸುವ ಬೆಳೆಗಾರರು ಮೇ 15ರಿಂದ ರಬ್ಬರ್ ಮರಗಳಿಗೆ ಪ್ಲಾಸ್ಟಿಕ್ ಹೊದಿಕೆ ಹಾಕಲು ಪ್ರಾರಂಭಿಸುತ್ತಾರೆ. ಈ ಬಾರಿ ಕೆಲವು ಕಡೆಗಳಲ್ಲಿ ಪ್ಲಾಸ್ಟಿಕ್ ಹೊದಿಕೆ ಹಾಕಿದ್ದರೂ, ಸತತ ಮಳೆಯು ಟ್ಯಾಪಿಂಗ್‌ಗೆ ಅಡ್ಡಿಯಾಗಿದೆ. ಹೀಗಾಗಿ, ಮಾರುಕಟ್ಟೆಗೆ ರಬ್ಬರ್ ಶೀಟ್‌ಗಳ ಪೂರೈಕೆ ಕಡಿಮೆಯಾಗಿದೆ' ಎನ್ನುತ್ತಾರೆ ಬೆಳೆಗಾರ ಮುರಳಿ ಮುಳ್ಳಂಕೊಚ್ಚಿ.

ಮಳೆ ಕಡಿಮೆಯಾಗಿ ಪೂರ್ಣ ಪ್ರಮಾಣದಲ್ಲಿ ಟ್ಯಾಪಿಂಗ್ ಶುರುವಾದರೆ, ಇನ್ನು ಒಂದು ತಿಂಗಳಲ್ಲಿ ಧಾರಣೆಯು ಹಿಂದಿನ ಮಟ್ಟಕ್ಕೆ ಮರಳುವ ಸಾಧ್ಯತೆ ಇದೆ ಎಂದು ಇನ್ನೊಬ್ಬ ಬೆಳೆಗಾರರು ಹೇಳಿದರು.

ದಶಕದ ಹಿಂದೆ ರಬ್ಬರ್ ಧಾರಣೆ ಕೆ.ಜಿಗೆ ₹245ರವರೆಗೂ ತಲುಪಿತ್ತು. ನಂತರ ಇಳಿಮುಖವಾಗುತ್ತ, ₹120ಕ್ಕೆ ಬಂದು ನಿಂತಿತ್ತು. ರಬ್ಬರ್ ಟ್ಯಾಪಿಂಗ್ ದರ ಹೆಚ್ಚಳ ಆಗಿರುವುದರಿಂದ ಕೆ.ಜಿಗೆ ₹250 ದರ ಲಭಿಸಿದರೆ ಲಾಭ ಎನ್ನುತ್ತಾರೆ ಬೆಳೆಗಾರರು.

ಮರ ಕಡಿಯುತ್ತಿರುವ ಬೆಳೆಗಾರರು

ರಬ್ಬರ್ ಶೀಟ್ ಜತೆಗೆ ಮರಕ್ಕೂ ಒಳ್ಳೆಯ ಧಾರಣೆ ಸಿಗುತ್ತಿದೆ. ಒಂದು ಮರ ಸರಾಸರಿ ₹2 ಸಾವಿರದಿಂದ ₹2,250ಕ್ಕೆ ಮಾರಾಟವಾಗುತ್ತಿದೆ. ಹೀಗಾಗಿ, ಕೇರಳ ಹಾಗೂ ದಕ್ಷಿಣ ಕನ್ನಡ ಗಡಿಯ ಅನೇಕ ಬೆಳೆಗಾರರು ಇನ್ನೂ ಟ್ಯಾಪಿಂಗ್ ಮುಂದುವರಿಸಬಹುದಾದ ರಬ್ಬರ್ ಮರಗಳನ್ನೂ ಕಡಿದು ಮಾರುತ್ತಿದ್ದಾರೆ. ಹೀಗಾಗಿ ರಬ್ಬರ್ ಶೀಟ್ ಮಾರುಕಟ್ಟೆಗೆ ಪೂರೈಕೆ ಕಡಿಮೆ ಇದೆ. ಇದು ಕೂಡ ರಬ್ಬರ್ ಧಾರಣೆ ಏರಿಕೆಗೆ ಕಾರಣವಾಗಿರಬಹುದು ಎನ್ನುತ್ತಾರೆ ಬೆಳೆಗಾರರು.

ಮಲಬಾರ್‌ನಿಂದ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಹಾಲಕ್ಷ್ಮಿ ವ್ರತದ ಅಂಗವಾಗಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ವಿಶೇಷ ಕೊಡುಗೆ ಪ್ರಕಟಿಸಿದೆ.

ಹಬ್ಬದ ಅಂಗವಾಗಿ, ಗ್ರಾಹಕರಿಗೆ ಚಿನ್ನ, ಕತ್ತರಿಸದ ಮತ್ತು ಹರಳುಗಳ ಆಭರಣದ ಮೇಲಿನ ಮೇಕಿಂಗ್ ಶುಲ್ಕದಲ್ಲಿ ಶೇ 30ರಷ್ಟು ರಿಯಾಯಿತಿ ನೀಡಲಾಗುವುದು. ಅಲ್ಲದೆ, ಹೆಚ್ಚುವರಿಯಾಗಿ ಬ್ರ್ಯಾಂಡ್ ವಜ್ರಗಳ ಮಾರಾಟ ಮೌಲ್ಯದ ಮೇಲೆ ಶೇ 30ರಷ್ಟು ರಿಯಾಯಿತಿ ಇದೆ. ಈ ಕೊಡುಗೆಗಳು ಆಗಸ್ಟ್ 8ರವರೆಗೆ ಮಾತ್ರ ಇರಲಿದೆ. ಗ್ರಾಹಕರು ಹತ್ತಿರದ ಮಲಬಾರ್ ಮಳಿಗೆಗೆ ಭೇಟಿ ನೀಡಿ ಕೊಡುಗೆ ಪಡೆದುಕೊಳ್ಳಬೇಕು ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ತಿಳಿಸಿದೆ. ಪ್ರತಿಯೊಂದು ಖರೀದಿಗೂ ಒಂದು ವರ್ಷದ ಉಚಿತ ವಿಮೆ, ಜೀವಿತಾವಧಿ ಉಚಿತ ನಿರ್ವಹಣೆ, ಹಳೆಯ ಚಿನ್ನ ಮತ್ತು ವಜ್ರಗಳಿಗೆ ಶೇ 100ರಷ್ಟು ವಿನಿಮಯ ಮೌಲ್ಯವನ್ನು ನೀಡಲಾಗುತ್ತದೆ ಎಂದು ತಿಳಿಸಿದೆ.

ಸ್ಟಾರ್‌ಲಿಂಕ್‌ಗೆ 20 ಲಕ್ಷ ಗ್ರಾಹಕರನ್ನು ಮಾತ್ರ ಹೊಂದಲು ಅನುಮತಿ: ಕೇಂದ್ರ

ನವದೆಹಲಿ (ಪಿಟಿಐ): ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಯು, ದೇಶದಲ್ಲಿ 20 ಲಕ್ಷ ಸಂಪರ್ಕಗಳನ್ನು ಮಾತ್ರ ನೀಡಲಿದೆ ಎಂದು ಕೇಂದ್ರ ಸಂವಹನ ಖಾತೆಯ ರಾಜ್ಯ ಸಚಿವ ಪೆಮ್ಮಸಾನಿ ಚಂದ್ರಶೇಖರ್ ಸೋಮವಾರ ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಸೇರಿದಂತೆ ದೂರಸಂಪರ್ಕ ಸೇವೆ ಒದಗಿಸುವ ಖಾಸಗಿ ಕಂಪನಿಗಳಿಗಿದ್ದ ಆತಂಕ ಇದೀಗ ಕಡಿಮೆಯಾಗಿದೆ.

ಸ್ಟಾರ್‌ಲಿಂಕ್ 20 ಲಕ್ಷ ಗ್ರಾಹಕರನ್ನು ಮಾತ್ರ ಹೊಂದಬಹುದಾಗಿದ್ದು, 200 ಎಂಬಿಪಿಎಸ್‌ವರೆಗಿನ ವೇಗವನ್ನು ನೀಡಲಿದೆ. ಇದು ಇತರೆ ದೂರಸಂಪರ್ಕ ಕಂಪನಿಗಳ ಸೇವೆಗಳ ಮೇಲೆ ಪರಿಣಾಮ ಬೀರದು ಎಂದು ತಿಳಿಸಿದ್ದಾರೆ.

ಈ ಸೇವೆಗಳ ದರ ಅತ್ಯಧಿಕವಾಗಿದ್ದು, ಮಾಸಿಕ ವೆಚ್ಚ ಸುಮಾರು ₹3 ಸಾವಿರ ಇರಬಹುದು. ಬಿಎಸ್‌ಎನ್‌ಎಲ್ 4ಜಿ ಅಳವಡಿಕೆ ಪೂರ್ಣಗೊಂಡಿದೆ. ಈಗ ದರ ಹೆಚ್ಚಿಸುವ ಯಾವುದೇ ಯೋಜನೆ ಇಲ್ಲ. ಮಾರುಕಟ್ಟೆ ಪಡೆಯುವುದು ನಮಗೆ ಮುಖ್ಯವಾಗಿದೆ ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 28-07-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1193 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1275)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,900 (97,800)
ಬೆಳ್ಳಿ ಕೆ.ಜಿಗೆ	1,13,000 (1,12,950)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಕುಮಟಾ	
ಚಾಲಿ	38969-43299
ಚಿಪ್ಪು	24569-29999
ಕೋಕ	7019-23089
ಫ್ಯಾಕ್ಟರಿ	4272-29890
ಹೊಸಚಾಲಿ	36500-42299
ಪುತ್ತೂರು	
ಕೋಕ	20000-27500
ಹೊಸತು	26000-48500
ಸಾಗರ	
ಬಿಳಿಗೋಟು	10786-26770
ಚಾಲಿ	20999-38019
ಕೋಕ	9000-24599
ಕೆಂಪುಗೋಟು	18989-29199
ರಾಶಿ	30899-57709
ಸಿಪ್ಪೆಗೋಟು	6122-20109
ಶಿವಮೊಗ್ಗ	
ಬೆಟ್ಟೆ	48240-59600
ಗೊರಬಲು	17750-31151
ರಾಶಿ	45007-57499
ಸರಕು	63810-92440
ಸಿದ್ದಾಪುರ	
ಬಿಳಿಗೋಟು	25809-32890
ಚಾಲಿ	34289-42799
ಕೋಕ	16319-25699
ಕೆಂಪುಗೋಟು	21119-23400
ರಾಶಿ	46099-48599
ತಟ್ಟಿಬೆಟ್ಟೆ	30119-34099
ಶಿರಸಿ	
ಬೆಟ್ಟೆ	28123-35009
ಬಿಳಿಗೋಟು	23399-37099
ಚಾಲಿ	39098-44299
ಕೆಂಪುಗೋಟು	14399-27109
ರಾಶಿ	43892-46809
ಯಲ್ಲಾಪುರ	
ಬಿಳಿಗೋಟು	21511-33199
ಚಾಲಿ	37009-44000
ಕೋಕ	10899-19699
ಕೆಂಪುಗೋಟು	18099-248999
ರಾಶಿ	42319-55119
ತಟ್ಟಿಬೆಟ್ಟೆ	30706-33105

ಅಂತಿಮ 50ರ ಪಟ್ಟಿಯಲ್ಲಿ ಭಾರತದ 5 ವಿದ್ಯಾರ್ಥಿಗಳು

ಲಂಡನ್ (ಪಿಟಿಐ): ಸಮಾಜದ ಮೇಲೆ ದೊಡ್ಡ ಪ್ರಮಾಣದಲ್ಲಿ ಪ್ರಭಾವ ಬೀರುವ ವಿದ್ಯಾರ್ಥಿಗಳಿಗೆ ಕೊಡುವ 1ಲಕ್ಷ ಡಾಲರ್ (₹86 ಲಕ್ಷ) ಮೊತ್ತದ 'ಜಾಗತಿಕ ವಿದ್ಯಾರ್ಥಿ ಪ್ರಶಸ್ತಿ'ಯ ಅತ್ಯುತ್ತಮ 50ರ ಆಯ್ಕೆ ಪಟ್ಟಿಯಲ್ಲಿ ಭಾರತದ ಐವರು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

16 ವರ್ಷ ತುಂಬಿದ ವಿದ್ಯಾರ್ಥಿಗಳು ಈ ಪ್ರಶಸ್ತಿಗಾಗಿ ನೋಂದಾಯಿಸಿಕೊಳ್ಳಬಹುದು. ನೋಂದಣಿ ಮಾಡಿಕೊಂಡ ಶೈಕ್ಷಣಿಕ ಸಂಸ್ಥೆ ಅಥವಾ ವಿದ್ಯಾರ್ಥಿಗಳಿಗೆ ತರಬೇತಿ ಹಾಗೂ ಕೌಶಲ ಕಾರ್ಯಕ್ರಮಗಳನ್ನು ಹೇಳಿಕೊಡಲಾಗುತ್ತದೆ. ಅರೆಕಾಲಿಕ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಕೋರ್ಸ್ ಕಲಿಯಲು ಅವಕಾಶವಿದೆ.

'ದಿ ಇಂಟರ್‌ನ್ಯಾಷನಲ್ ಸ್ಕೂಲ್ ಬೆಂಗಳೂರು' ವಿದ್ಯಾರ್ಥಿ ಜಹಾನ್ ಅರೋರಾ, ಜೈಪುರದ ಜಯಶ್ರೀ ಪೆರಿವಾಲ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಆದರ್ಶ್ ಕುಮಾರ್, ಮನ್ನತ್ ಸಮ್ರಾ, ಮಹಾರಾಷ್ಟ್ರ ಕಸಮ್‌ಪುರದ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿ ಧೀರಜ್ ಗತ್‌ಮಾನೆ, ದೆಹಲಿಯ ಹೆರಿಟೇಜ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಶಿವಂಶ್ ಗುಪ್ತಾ ಅವರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಅರೋರಾ ಅವರು ಎಚ್‌ಐವಿ ಪಾಸಿಟಿವ್ ಹೊಂದಿರುವವರ ಏಳ್ಗೆಗಾಗಿ ದೇಣಿಗೆ ಸಂಗ್ರಹ ಕಾರ್ಯಕ್ಕಾಗಿ ಆಯ್ಕೆಯಾಗಿದ್ದಾರೆ.

'ನಾನಿಲ್ಲದಿದ್ದರೆ ಪಾಕ್ ವಿರುದ್ಧ ಭಾರತ ಯುದ್ಧ ಮಾಡುತ್ತಿತ್ತು'

ಲಂಡನ್ (ಪಿಟಿಐ): ಎಲ್ಲ ವ್ಯಾಪಾರ ಒಪ್ಪಂದಗಳನ್ನು ಸ್ಥಗಿತಗೊಳಿಸುವ ಬೆದರಿಕೆ ಹಾಕುವ ಮೂಲಕ ಸಕಾಲಕ್ಕೆ ಮಧ್ಯಪ್ರವೇಶಿಸಿದ್ದರಿಂದ ಭಾರತ ಮತ್ತು ಪಾಕಿಸ್ತಾನ ಯುದ್ಧ ನಿಲ್ಲಿಸಿದವು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಹೇಳಿದ್ದಾರೆ.

ಸ್ಕಾಟ್ಲೆಂಡ್‌ನಲ್ಲಿ ಮಾತನಾಡಿದ ಟ್ರಂಪ್, 'ಭಾರತ ಮತ್ತು ಪಾಕಿಸ್ತಾನ ಸೇರಿ ಜಗತ್ತಿನ ಆರು ಪ್ರಮುಖ ಯುದ್ಧಗಳನ್ನು ತಡೆಯಲಾಗಿದೆ' ಎಂದಿದ್ದಾರೆ.

ಕದನ ವಿರಾಮಕ್ಕೆ ಒಪ್ಪಿಗೆ

ಪುತ್ರಜಯ (ಎಎಫ್‌ಪಿ/ಎಪಿ): ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವೆ ಐದು ದಿನಗಳಿಂದ ನಡೆಯುತ್ತಿದ್ದ ಗಡಿ ಸಂಘರ್ಷ ಶಮನಗೊಂಡಿದ್ದು, ತಕ್ಷಣದಿಂದಲೇ ಬೇಷರತ್ ಕದನ ವಿರಾಮಕ್ಕೆ ಉಭಯ ರಾಷ್ಟ್ರಗಳು ಒಪ್ಪಿಗೆ ಸೂಚಿಸಿವೆ.

ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಪ್ರಾದೇಶಿಕ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆದಿದ್ದು, ಸಹಜ ಸ್ಥಿತಿಗೆ ಮರಳಲು ಅಗತ್ಯ ಕ್ರಮ ಕೈಗೊಳ್ಳಲು ಎರಡೂ ರಾಷ್ಟ್ರಗಳು ಒಪ್ಪಿಗೆ ಸೂಚಿಸಿವೆ ಎಂದು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ತಿಳಿಸಿದ್ದಾರೆ.

ಕಾಂಬೋಡಿಯಾ ಪ್ರಧಾನ ಮಂತ್ರಿ ಹನ್ ಮಾನೆಟ್ ಹಾಗೂ ಥಾಯ್ಲೆಂಡ್‌ನ ಹಂಗಾಮಿ ಪ್ರಧಾನ ಮಂತ್ರಿ ಫುಮ್ತಮ್ ವೇಚಯಾಚೈ ಅವರು, ಕದನ ವಿರಾಮ ಜಾರಿಗೆ ಬರುವಂತೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದ್ದಾರೆ.

ಇದು ಶಾಂತಿ ಮತ್ತು ಭದ್ರತೆ ಪುನರ್ ಸ್ಥಾಪಿಸಲು ಪ್ರಮುಖ ಹೆಜ್ಜೆಯಾಗಿದೆ. ಗಡಿಯಲ್ಲಿನ ಉದ್ವಿಗ್ನ ಪರಿಸ್ಥಿತಿ ಹಾಗೂ ವಿವಾದವನ್ನು ಶಮನಗೊಳಿಸಲು ಉಭಯ ದೇಶಗಳ ಮಿಲಿಟರಿ ಹಾಗೂ ಅಧಿಕಾರಿಗಳು ಸಭೆ ನಡೆಸಲಿದ್ದಾರೆ.

13 ಜಾಗ ತೋರಿಸಿದ ದೂರುದಾರ

ಒಂದನೇ ಪುಟದಿಂದ...

ಸಾಕ್ಷಿ ದೂರುದಾರ ಸೋಮವಾರ ತೋರಿಸಿರುವ 13 ಜಾಗಗಳೂ ಧರ್ಮಸ್ಥಳ ಪೊಲೀಸ್ ಠಾಣೆಯಿಂದ 1 ಕಿ.ಮೀ ವ್ಯಾಪ್ತಿಯ ಕಾಡಿನಲ್ಲಿವೆ. ಮೊದಲು ತೋರಿಸಿದ ಎಂಟು ಜಾಗಗಳು ನೇತ್ರಾವತಿ ನದಿ ದಂಡೆಯಲ್ಲಿದ್ದರೆ, ಉಳಿದ ನಾಲ್ಕು ಜಾಗಗಳು ನೇತ್ರಾವತಿ ಸೇತುವೆಯಿಂದ ಸ್ನಾನಘಟ್ಟದ ಕಡೆಗೆ ರಾಜ್ಯ ಹೆದ್ದಾರಿ–37ರ ಪಕ್ಕದಲ್ಲಿವೆ. ಒಂದು ಜಾಗ ಮಾತ್ರ ಸ್ನಾನಘಟ್ಟ ಸಮೀಪದ ಕಿರು ಅಣೆಕಟ್ಟೆಯ ಪಕ್ಕದ ಬಯಲು ಜಾಗದಲ್ಲಿದೆ.

ಸಾಕ್ಷಿ ದೂರುದಾರ ವಕೀಲರ ತಂಡದ ಜೊತೆಗೆ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಬೆಳಿಗ್ಗೆ 10 ಗಂಟೆ ಸುಮಾರಿಗೆ ಹಾಜರಾಗಿದ್ದರು. ಅಲ್ಲಿಂದ ಬೆಳಿಗ್ಗೆ 11.50ರ ಸುಮಾರಿಗೆ ಎಸ್‌ಐಟಿ ಅಧಿಕಾರಿಗಳು ಬಿಗಿ ಪೊಲೀಸ್ ಬಂದೋಬಸ್ತ್‌ನೊಂದಿಗೆ ಆತನನ್ನು ಧರ್ಮಸ್ಥಳ ಸ್ನಾನಘಟ್ಟದ ಬಳಿಗೆ ಕರೆದೊಯ್ದರು. ಮೊದಲ ದಿನ ಸುಮಾರು 15 ಜಾಗಗಳನ್ನು ಗುರುತಿಸಲು ಎಸ್‌ಐಟಿ ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದರು. ಮಧ್ಯಾಹ 2 ಗಂಟೆವರೆಗೆ ಸಾಕ್ಷಿ ದೂರುದಾರ ನೇತ್ರಾವತಿ ನದಿ ಪಕ್ಕದ ಎಂಟು ಜಾಗಗಳನ್ನು ತೋರಿಸಿದ್ದರು. ಬಳಿಕ ಧರ್ಮಸ್ಥಳ ಪೊಲೀಸ್ ಠಾಣೆಗೆ ಆತನನ್ನು ಕರೆದೊಯ್ದ ಎಸ್‌ಐಟಿ ಅಧಿಕಾರಿಗಳು ಅಲ್ಲಿ ಆತನಿಗೆ ಊಟದ ವ್ಯವಸ್ಥೆ ಮಾಡಿದರು. ಊಟ ಮುಗಿಸಿದ ಬಳಿಕ ಎಸ್‌ಐಟಿ ಅಧಿಕಾರಿಗಳು, ಭದ್ರತಾ ಸಿಬ್ಬಂದಿ ಮತ್ತೆ ಆತನನ್ನು ಕಾಡಿನೊಳಕ್ಕೆ ಕರೆದೊಯ್ದು ಜಾಗದ ಹುಡುಕಾಟ ಮುಂದುವರಿಸಿದರು.

ಮಧ್ಯಾಹ್ನ ಊಟದ ಬಳಿಕ ರಾಜ್ಯ ಹೆದ್ದಾರಿ ಪಕ್ಕದ ಕಾಡಿನಲ್ಲಿ ನಾಲ್ಕು ಜಾಗಗಳನ್ನು ತೋರಿಸಿದ್ದರು. ಬಳಿಕ ಸ್ನಾನಘಟ್ಟ ಸಮೀಪದ ಕಿರು ಅಣೆಕಟ್ಟೆಯ ಪಕ್ಕದ ಜಾಗ ತೋರಿಸಿದರು. ಒಟ್ಟು 13 ಜಾಗಗಳನ್ನು ಗುರುತಿಸುವ ಪ್ರಕ್ರಿಯೆ ಮುಗಿಸುವಷ್ಟರಲ್ಲಿ ಸಂಜೆಯಾಗಿತ್ತು. ಸ್ನಾನಘಟ್ಟದ ಬಳಿ ನೇತ್ರಾವತಿ ನದಿಯ ಆಚೆ ಬದಿಯಲ್ಲೂ ಜಾಗವನ್ನು ಗುರುತಿಸಬೇಕಿತ್ತು. ಸೇತುವೆ ಮೂಲಕ ಸಾಗಿ ಕನ್ಯಾಡಿ ಬಳಿಯ ರಸ್ತೆ ಮೂಲಕ ನದಿಯ ಇನ್ನೊಂದು ಬದಿಗೆ ಸಾಕ್ಷಿ ದೂರುದಾರರನ್ನು ಕರೆದೊಯ್ಯುವಷ್ಟರಲ್ಲಿ ಸಂಜೆ 6 ಗಂಟೆ ದಾಟಿತ್ತು. ಹಾಗಾಗಿ ಜಾಗಗಳ ಹುಡುಕಾಟ ಪ್ರಕ್ರಿಯೆಯನ್ನು ದಿನದ ಮಟ್ಟಿಗೆ ಸ್ಥಗಿತಗೊಳಿಸಲಾಯಿತು.

'ಸಾಕ್ಷಿ ದೂರುದಾರ ತೋರಿಸಿರುವ ಜಾಗಗಳಲ್ಲಿ ಕೆಲವು ಕಡೆ ಒಂದಕ್ಕಿಂತ ಹೆಚ್ಚು ಮೃತದೇಹಗಳನ್ನು ಹೂತಿರಬಹುದು. ಅವುಗಳನ್ನು ಹೊರಗೆ ತೆಗೆದ ಬಳಿಕವಷ್ಟೇ ಆ ಜಾಗಗಳಲ್ಲಿ ಎಷ್ಟು ಮೃತದೇಹಗಳಿವೆ ಎಂಬುದು ನಿಖರವಾಗಿ ಗೊತ್ತಾಗಲಿದೆ. ಮೃತದೇಹಗಳನ್ನು ಹೂತುಹಾಕಲಾಗಿದೆ ಎನ್ನಲಾದ ಜಾಗಗಳನ್ನು ಗುರುತಿಸುವ ಕಾರ್ಯ ಮಂಗಳವಾರವೂ ಮುಂದುವರಿಯಲಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವಿಶೇಷ ತನಿಖಾ ತಂಡದ ಡಿಐಜಿ ಎಂ.ಎನ್. ಅನುಚೇತ್ ಅವರು ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಭೇಟಿ ನೀಡಿ ತನಿಖೆಯ ಬಗ್ಗೆ ಮಾರ್ಗದರ್ಶನ ಮಾಡಿದರು. ಆಂತರಿಕ ಭದ್ರತಾ ವಿಭಾಗದ ಎಸ್.ಪಿ ಜಿತೇಂದ್ರ ಕುಮಾರ್ ದಯಾಮ ಹಾಗೂ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮಂಗಳೂರು ವಲಯದ ಎಸ್.ಪಿ ಸಿ.ಎ.ಸೈಮನ್ ಮತ್ತಿತರ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದರು. ಸಾಕ್ಷಿ ದೂರುದಾರರನ್ನು ಮಂಗಳೂರಿನ ಮಲ್ಲಿಕಟ್ಟೆಯ ಪ್ರವಾಸಿ ಬಂಗಲೆಯಲ್ಲಿ ಎಸ್‌ಐಟಿ ಅಧಿಕಾರಿಗಳು ಶನಿವಾರ ಮತ್ತು ಭಾನುವಾರ ವಿಚಾರಣೆಗೆ ಒಳಪಡಿಸಿದ್ದರು. ಎಸ್‌ಐಟಿ ಮುಖ್ಯಸ್ಥರಾಗಿರುವ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ, ತನಿಖೆಯ ಬಗ್ಗೆ ಎಸ್‌ಐಟಿ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದ್ದರು.

ಡ್ರೋನ್ ಚಿತ್ರೀಕರಣ

ಶವಗಳನ್ನು ಹೂತಿಡಲಾಗಿದೆ ಎನ್ನಲಾದ ಬಯಲು ಪ್ರದೇಶದ ಜಾಗ ಗುರುತಿಸುವ ಪ್ರಕ್ರಿಯೆಯನ್ನು ಡ್ರೋನ್ ಕ್ಯಾಮೆರಾದಲ್ಲಿ ಚಿತ್ರೀಕರಿಸಲಾಯಿತು. ಆದರೆ ಕಾಡಿನ ಒಳಗೆ ಬಾನೆತ್ತರ ಬೆಳೆದ ಮರಗಳ ನಡುವಿನ ಜಾಗಗಳನ್ನು ಗುರುತಿಸುವಾಗ ಡ್ರೋನ್ ಚಿತ್ರೀಕರಣ ಸಾಧ್ಯವಾಗಲಿಲ್ಲ.



ಸಾಕ್ಷಿ ದೂರುದಾರ ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಬಳಿ ಸೋಮವಾರ ಎಸ್‌ಐಟಿ ಅಧಿಕಾರಿಗಳಿಗೆ ಜಾಗ ತೋರಿಸಿದರು
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್



> ಬೆಳಗ್ಗೆ 6–7 ಗಂಟೆಗೆ ಶೋಗಳನ್ನು ಕೇವಲ ಸ್ಟಾರ್‌ಗಳ ಸಿನಿಮಾಗಳಿಗೆ ನೋಡಿದ್ದೆ. ಆದರೆ ಹೊಸಬರ ಈ ಸಿನಿಮಾಗೂ 6–7 ಗಂಟೆಯ ಶೋ ಹಾಕಿದ್ದೇವು. ಇದು ಹೌಸ್‌ಫುಲ್ ಆಗಿತ್ತು. ಬೇಡಿಕೆಗೆ ತಕ್ಕಂತೆ ಶೋಗಳನ್ನು ಹೇಗೆ ಹೆಚ್ಚಿಸಬೇಕು ಎನ್ನುವುದು ಗೊತ್ತಾಗುತ್ತಿಲ್ಲ.
> **ರಾಜ್ ಬಿ.ಶೆಟ್ಟಿ,** ನಟ

ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಒರತೆ ಹೊಸಬರ ಸೃಷ್ಟಿಗೆ ಪರಾಕು

4+ ಲಕ್ಷ ಒಟ್ಟು ಮಾರಾಟವಾದ ಟಿಕೆಟ್‌ಗಳು

₹6ರಿಂದ **₹7** ಕೋಟಿ ಮೊದಲ ನಾಲ್ಕು ದಿನಗಳ ಕಲೆಕ್ಷನ್

550+ ಭಾನುವಾರ ಭಾರತದಾದ್ಯಂತ ಹೌಸ್‌ಫುಲ್ ಪ್ರದರ್ಶನ ಕಂಡ ಶೋಗಳು

2.90+ ಲಕ್ಷ, ಬುಕ್ ಮೈ ಶೋ ಮೂಲಕ ಮಾರಾಟವಾದ ಟಿಕೆಟ್‌ಗಳು



• ಅಭಿಲಾಷ್ ಪಿ.ಎಸ್.

ವಾರದ ಹಿಂದೆ (ಜುಲೈ 21) ನಟ ರಿಷಬ್ ಶೆಟ್ಟಿ ನಿರ್ದೇಶನದ 'ಕಾಂತಾರ' ಸಿನಿಮಾದ ಪ್ರೀಕ್ವೆಲ್‌ನ ಮೇಕಿಂಗ್ ವಿಡಿಯೊ ಬಿಡುಗಡೆಯಾದಾಗ, ಎಷ್ಟು ಅದ್ದೂರಿಯಾಗಿದೆ ಈ ಸಿನಿಮಾ ಎಂಬ ಉದ್ಗಾರ ಎಲ್ಲರಿಂದಲೂ ಬಂದಿತ್ತು. ಅದಕ್ಕಿಂತ ಒಂದು ವಾರದ ಹಿಂದೆ (ಜುಲೈ 15) 'ಸು ಫ್ರಮ್ ಸೋ' ಸಿನಿಮಾದ ಟ್ರೇಲರ್ ರಿಲೀಸ್ ಆಗಿತ್ತು. ಆದರೆ ಇದರ ಬಗ್ಗೆ ಹೆಚ್ಚಿನವರಿಗೆ ಮಾಹಿತಿಯೇ ಇರಲಿಲ್ಲ. ಆದರೆ ಇಂದು ಈ ಸಿನಿಮಾದ ಟಿಕೆಟ್‌ಗಾಗಿ ಕಾಯುವ ಸ್ಥಿತಿ ನಿರ್ಮಾಣವಾಗಿದೆ! ಹೆಚ್ಚಿನ ಚಿತ್ರಮಂದಿರಗಳಲ್ಲಿ ಈ ಸಿನಿಮಾ ಕಳೆದ ನಾಲ್ಕು ದಿನಗಳಿಂದ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದ್ದು, ಹಲವೆಡೆ ಬೆಳಗ್ಗೆ 8 ರಿಂದಲೇ ಶೋಗಳು ಆರಂಭವಾಗುತ್ತಿವೆ.

ಕನ್ನಡ ಸಿನಿಮಾಗಳಿಗೆ, ಚಿತ್ರಮಂದಿರಗಳಿಗೆ ಜನರು ಬರುತ್ತಿಲ್ಲ ಎನ್ನುವ ಮಾತಿನಿಂದ 'ಸು ಫ್ರಂ ಸೋ'ಗೆ ಟಿಕೆಟ್ ಸಿಗುತ್ತಿಲ್ಲ ಎನ್ನುವಲ್ಲಿಯವರೆಗೆ ಬದಲಾವಣೆ ಬಂದಿದೆ. ಜನರು ಬಜೆಟ್, ಮೇಕಿಂಗ್, ಸ್ಟಾರ್ ಸಿನಿಮಾ, ಪ್ರಚಾರ, ಯಾವ ಪ್ರದೇಶದವರು ಮಾಡಿದ ಸಿನಿಮಾ ಎನ್ನುವುದನ್ನು ಪಕ್ಕಕ್ಕಿಟ್ಟು ಕಥೆ, ಮನರಂಜನೆಗೆ ಆದ್ಯತೆ ನೀಡುತ್ತಾರೆ ಎನ್ನುವುದನ್ನು 'ಸು ಫ್ರಂ ಸೋ' ಸಾಬೀತುಪಡಿಸಿದೆ. ಹಿಂದಿಯ 'ಸೈಯಾರಾ', ಹಾಲಿವುಡ್‌ನ 'ಎಫ್1' ಹಾಗೂ ತೆಲುಗಿನ 'ಹರಿ ಹರ ವೀರಮಲ್ಲು' ನಡುವೆ 'ಸು ಫ್ರಂ ಸೋ' ಅಪಾರ ಸಂಖ್ಯೆಯ ಪ್ರೇಕ್ಷಕರನ್ನು ಸೆಳೆದಿದೆ.

ಜೆ.ಪಿ.ತೂಮಿನಾಡು ನಿರ್ದೇಶನದ, ಶಶಿಧರ್ ಶೆಟ್ಟಿ ಬರೋಡ, ರವಿ ರೈ ಕಳಸ, ರಾಜ್ ಬಿ.ಶೆಟ್ಟಿ ನಿರ್ಮಿಸಿರುವ ಈ ಸಿನಿಮಾ ಸದ್ದಿಲ್ಲದೆ ಮೊದಲ ಹೆಜ್ಜೆ ಇಟ್ಟಿತ್ತು. ಸಿನಿಮಾದ ಪೂರ್ಣ ಕೆಲಸ ಮುಗಿದ ಬಳಿಕ ಕಳೆದ ಜೂನ್ 21ರಂದು ಮೊದಲ ಪೋಸ್ಟರ್ ರಿಲೀಸ್ ಮಾಡಿತ್ತು ಚಿತ್ರತಂಡ. ಗಿಬ್ಲಿ ಶೈಲಿಯಲ್ಲಿದ್ದ ಭಿನ್ನವಾದ ಪೋಸ್ಟರ್‌ನಲ್ಲಿ ಚಿತ್ರದ ಶೀರ್ಷಿಕೆಯಿತ್ತು.

ಆ.1ಕ್ಕೆ ಕೇರಳದಲ್ಲಿ ರಿಲೀಸ್

'ಸು ಫ್ರಮ್ ಸೋ' ಸಿನಿಮಾ ಆ.1ರಂದು ಕೇರಳದಲ್ಲಿ ರಿಲೀಸ್ ಆಗುತ್ತಿದೆ. ಈ ಸಿನಿಮಾವನ್ನು ನಟ ದುಲ್ಕರ್ ಸಲ್ಮಾನ್ ಅವರ ನಿರ್ಮಾಣ ಸಂಸ್ಥೆ ರಿಲೀಸ್ ಮಾಡುತ್ತಿದೆ. ಹೈದರಾಬಾದ್, ಮುಂಬೈ, ಚೆನ್ನೈ, ದೆಹಲಿಯಲ್ಲಿ ಈಗಾಗಲೇ ಕನ್ನಡದ 'ಸು ಫ್ರಮ್ ಸೋ' ಪ್ರದರ್ಶನ ಕಾಣುತ್ತಿದೆ. ಉತ್ತರ ಭಾರತದ ವಿತರಣಾ ಹಕ್ಕುಗಳನ್ನು ಎಎ ಫಿಲ್ಮ್ಸ್ ಪಡೆದುಕೊಂಡಿದೆ. ಪಿಎಚ್‌ಎಫ್ ಸಂಸ್ಥೆಯು ಹೊರ ದೇಶಗಳ ವಿತರಣೆಯನ್ನು ಪಡೆದುಕೊಂಡಿದೆ. ಆ.7ರಂದು ಹಿಂದಿಯಲ್ಲಿ ಹಾಗೂ ತೆಲುಗಿನಲ್ಲಿ ಡಬ್ ಆಗಿ ಸಿನಿಮಾ ರಿಲೀಸ್ ಆಗುತ್ತಿದೆ. 'ಸಿನಿಮಾ ಬಿಡುಗಡೆ ಮೊದಲೇ ಚಿತ್ರತಂಡ ಒಟಿಟಿ ಕಂಪನಿಯೊಂದರ ಜೊತೆ ಮಾತುಕತೆ ನಡೆಸಿತ್ತು. ಆಗ ಅವರು ದರ ಚರ್ಚಿಸಿದ್ದರು. ಸಿನಿಮಾ ಬಿಡುಗಡೆಯಾದ ಬಳಿಕ ನಾವೇ ಒಂದು ಒಳ್ಳೆಯ ದರ ನಿಗದಿ ಮಾಡುವ ಹಂತಕ್ಕೆ ಬಂದಿದ್ದೇವೆ' ಎಂದು ಚಿತ್ರತಂಡದ ಮೂಲಗಳು ತಿಳಿಸಿವೆ.

'ಸು ಫ್ರಮ್ ಸೋ'; ಇದೇನಪ್ಪ ಎಂದು ಕೆಲವರು ಆಗಲೇ ತಲೆ ಕೆಡಿಸಿಕೊಂಡಿದ್ದರು. ಚಿತ್ರದ ಶೀರ್ಷಿಕೆಯ ಪೂರ್ಣ ಅರ್ಥವನ್ನು ಅದರಲ್ಲಿ ಅಡಗಿಸಿತ್ತು ತಂಡ. ಒಂದು ಶವದ ಸುತ್ತ ನಡೆಯುವ ಕಥೆ, ಆ ಶವ ಯಾರದ್ದು ಹಾಗೂ ಎಲ್ಲಿಯದ್ದು ಎನ್ನುವುದನ್ನು 'ಕುಂಕುಮ' ಹಾಗೂ 'ಲೊಕೇಷನ್' ಚಿಹ್ನೆ ಬಳಸಿ ವಿವರಿಸಲಾಗಿತ್ತು. ಬಳಿಕ 'ಡಾಂಕ್ಸ್ ಆ್ಯಂಥಮ್' ಹಾಡು ಬಿಡುಗಡೆ ಮಾಡಿತ್ತು ತಂಡ. ಅದಕ್ಕೆ ರೀಲ್ಸ್ ಮಾಡಿದವರ ವಿಡಿಯೊಗಳನ್ನು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ತಂಡ ಹಾಕಿಕೊಂಡಿತ್ತು. ಜುಲೈ 15ಕ್ಕೆ ಚಿತ್ರದ ಟ್ರೇಲರ್ ರಿಲೀಸ್ ಆಯಿತು. ಅದರಲ್ಲಿ 'ಸು ಫ್ರಮ್ ಸೋ' ಅಂದರೆ 'ಸುಲೋಚನಾ ಫ್ರಮ್ ಸೋಮೇಶ್ವರ' ಎಂದು ತಿಳಿಸಲಾಗಿತ್ತು. ಸಿನಿಮಾ ಬಿಡುಗಡೆಗೂ ಮುನ್ನ ಚಿತ್ರತಂಡ ಎರಡು ಪತ್ರಿಕಾ ಪ್ರಕಟಣೆ ಕೊಟ್ಟಿತ್ತು, ಒಂದು ಸುದ್ದಿಗೋಷ್ಠಿ ಮಾಡಿತ್ತು!

38 ಪೇಯ್ಡ್ ಪ್ರೀಮಿಯರ್!

ಹೊಸಬರ ಸಿನಿಮಾಗಳಿಗೆ ಪ್ರೇಕ್ಷಕರೇ ಬರುತ್ತಿಲ್ಲ ಎನ್ನುವುದನ್ನು ಪರೀಕ್ಷಿಸಲು ಚಿತ್ರತಂಡ ಮುಂದಾಗಿತ್ತು. ಸೆಲೆಬ್ರಿಟಿ ಶೋಗಳು, ವಿಡಿಯೊ ಸಂದರ್ಶನಗಳಲ್ಲಿ ಜನರಿಗೆ ನಂಬಿಕೆ ಹೋಗಿದೆ ಎನ್ನುವುದನ್ನು ಅರಿತಿದ್ದೇವೆ ಎಂದಿದ್ದ ಚಿತ್ರತಂಡ ಪ್ರಚಾರಕ್ಕೆ ಯೋಜನೆಯೊಂದನ್ನು ರೂಪಿಸಿತ್ತು. ಜುಲೈ 25ರಂದು ರಾಜ್ಯದಾದ್ಯಂತ ಸಿನಿಮಾ ಬಿಡುಗಡೆಗೂ ಮುನ್ನ, ಜುಲೈ 21ರಂದು ತಂಡವು ಮಂಗಳೂರಿನಲ್ಲಿ ಮೊದಲ ಪೇಯ್ಡ್ ಪ್ರೀಮಿಯರ್ (ಟಿಕೆಟ್ ಸಹಿತ) ಏರ್ಪಡಿಸಿತ್ತು. ಜುಲೈ 22ರಂದು ಶಿವಮೊಗ್ಗದಲ್ಲಿ, ಜುಲೈ 23ರಂದು ಮೈಸೂರಿನಲ್ಲಿ ಹಾಗೂ ಜುಲೈ 24ರಂದು ಬೆಂಗಳೂರಿನಲ್ಲಿ ಒಂದೊಂದು ಪ್ರೀಮಿಯರ್ ಏರ್ಪಡಿಸಲು ಯೋಜನೆ ಹಾಕಿಕೊಂಡಿದ್ದ ತಂಡಕ್ಕೆ ಹೊಸ ಸಮಸ್ಯೆ ಶುರುವಾಗಿತ್ತು. ಪ್ರೀಮಿಯರ್‌ಗಳು ಭರ್ತಿಯಾಗಿ ಹೆಚ್ಚಿನ ಪ್ರೀಮಿಯರ್‌ಗಳಿಗೆ ಬೇಡಿಕೆ ಬಂದಿತ್ತು. ಹೀಗೆ ಜುಲೈ 25ಕ್ಕೂ ಮುನ್ನವೇ ಮೈಸೂರು, ಉಡುಪಿ, ಬೆಂಗಳೂರು, ಮಣಿಪಾಲ್, ಸುರತ್ಕಲ್, ಕುಂದಾಪುರ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಮುಂತಾದ ಕಡೆ ಒಟ್ಟು 38 ಹೌಸ್‌ಫುಲ್ ಪೇಯ್ಡ್ ಪ್ರೀಮಿಯರ್ ಶೋಗಳು ನಡೆದವು. ಸೆಲೆಬ್ರಿಟಿ ಶೋಗಳನ್ನು ನಡೆಸದೆ ಜನರನ್ನೇ ಸೆಲೆಬ್ರಿಟಿಗಳನ್ನಾಗಿ ಮಾಡಿದ ತಂಡ, ಅವರ ಮಾತುಗಳಿಗೆ ವೇದಿಕೆ ಕಲ್ಪಿಸಿತು. ಎಲ್ಲಾ ಮಾದರಿಯ ಸೆಲೆಬ್ರಿಟಿಗಳನ್ನು, ರೀಲ್ಸ್–ಮೀಮ್ಸ್ ಮಾಡುವವರನ್ನು ದೂರವೇ ಇಟ್ಟಿತು. ಸಿನಿಮಾದೊಳಗಿನ ಕಥೆ, ನಟನೆ, ಮನರಂಜನೆ ಗಟ್ಟಿಯಾಗಿದ್ದ ಕಾರಣ ಜನರನ್ನೇ ತಂಡ ನಂಬಿತ್ತು.

ಕೆ.ಜಿ.ಎಫ್. ಸಿನಿಮಾ ಸರಣಿ ಬಳಿಕ ಸಿನಿಮಾ ಅದ್ದೂರಿಯಾಗಿದ್ದರಷ್ಟೇ ಜನ ಚಿತ್ರಮಂದಿರಗಳಿಗೆ ಬರುತ್ತಾರೆ ಎನ್ನುವ ಮಾತೂ ಹುಟ್ಟಿಕೊಂಡಿತ್ತು. ಬಳಿಕ ಈ ಅದ್ದೂರಿತನಕ್ಕೇ ಜೋತುಬಿದ್ದ ಹಲವು ಚಿತ್ರತಂಡಗಳು ಗಟ್ಟಿಯಾದ ಕಥೆ ಮಾಡಿಕೊಳ್ಳದೆ ಎಡವಿರುವ ಉದಾಹರಣೆಗಳು ನಮ್ಮಲ್ಲಿವೆ. ಈ ನಡುವೆ ಹೆಚ್ಚಿನ ಸೆಟ್ ಬಳಸದೆ, ಮನರಂಜನೆಗೇ ಹೆಚ್ಚಿನ ಒತ್ತು ಕೊಟ್ಟು ಸುಮಾರು ₹5 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ 'ಸು ಫ್ರಮ್ ಸೋ' ಹೊಸ ಇತಿಹಾಸ ಸೃಷ್ಟಿಸಿದೆ.

ಸಿನಿಮಾ ಪ್ರಚಾರವಾಗಬೇಕು

ಸಿನಿಮಾದಲ್ಲಿ ರಾಜ್ ಬಿ.ಶೆಟ್ಟಿ ಒಂದು ಪಾತ್ರವನ್ನು ನಿರ್ವಹಿಸಿದ್ದಾರೆ ಎನ್ನುವುದನ್ನು ಚಿತ್ರತಂಡ ಜನರಿಂದ ಗುಟ್ಟಾಗಿ ಇಟ್ಟಿತ್ತು. 'ನಾನು ಯಾರನ್ನೂ ತಲೆಯಲ್ಲಿಟ್ಟುಕೊಂಡು ಪಾತ್ರಗಳನ್ನು ಬರೆದಿರಲಿಲ್ಲ. ಪಾತ್ರಗಳಿಗೆ ಕಲಾವಿದರ ಆಯ್ಕೆ ನಂತರ ನಡೆಯಿತು. ರಾಜ್ ಬಿ.ಶೆಟ್ಟಿ ಬಂದರು ಎಂದು ಹೆಚ್ಚುವರಿ ದೃಶ್ಯ ಸೇರಿಸಿಲ್ಲ. ರಾಜ್ ಅವರನ್ನು ಒಂದು ಹಾಸ್ಯ ಪಾತ್ರದಲ್ಲಿ ಪ್ರೇಕ್ಷಕರು ನೋಡದೆ ಬಹಳ ವರ್ಷವಾಯಿತು. ಅವರ ಕಾಮಿಡಿ ಸೆನ್ಸ್ ಬಹಳ ಚೆನ್ನಾಗಿದೆ. ಜೊತೆಗೆ ಹೊಸಬರ ತಂಡದೊಟ್ಟಿಗೆ ರಾಜ್ ಅವರು ಇದ್ದರೆ ಅವರಿಗಿರುವ ಅಭಿಮಾನಿಗಳನ್ನೂ ಸೆಳೆಯಬಹುದು ಎನ್ನುವುದಿತ್ತು. ರಾಜ್ ಅವರನ್ನು ಕಾಮಿಡಿ ಪಾತ್ರಗಳಲ್ಲೇ ನೋಡಲಿಚ್ಛಿಸುವ ಒಂದಿಷ್ಟು ಜನರಿದ್ದಾರೆ. ಈ ಸಿನಿಮಾದಲ್ಲಿ ಅವಕಾಶವಿದ್ದ ಕಾರಣ ಅವರೂ ಒಪ್ಪಿಕೊಂಡರು. ಈ ಸಿನಿಮಾದಲ್ಲಿ ಅವರಿದ್ದಾರೆ, ಇವರಿದ್ದಾರೆ ಎನ್ನುವುದು ಹೆಚ್ಚಿನ ಪ್ರಚಾರವಾಗದೆ ಇಡೀ ಸಿನಿಮಾವೇ ಪ್ರಚಾರವಾಗಬೇಕು ಎನ್ನುವುದು ನಮ್ಮ ಉದ್ದೇಶವಾಗಿತ್ತು. ರಾಜ್ ಇದ್ದಾಗ ಜನರಿಗೆ ನಿರೀಕ್ಷೆ ಬೇರೆ ಇರುತ್ತದೆ. ಹೀಗಾಗಿ ಅವರ ಪಾತ್ರವನ್ನು ಬಿಟ್ಟುಕೊಟ್ಟಿಲ್ಲ' ಎನ್ನುತ್ತಾರೆ ನಿರ್ದೇಶಕ ಜೆ.ಪಿ.ತೂಮಿನಾಡು.

> ಈ ಚಿತ್ರವು ನನ್ನನ್ನು 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ದಿನಗಳಿಗೆ ಕರೆದುಕೊಂಡು ಹೋಯಿತು. ಆ ಚಿತ್ರದಲ್ಲಿ ನಟಿಸಿದ್ದ ಅನೇಕ ಕಲಾವಿದರು 'ಸು ಫ್ರಮ್ ಸೋ'ದಲ್ಲಿಯೂ ಇರುವುದು ಹಳೆಯ ನೆನಪುಗಳನ್ನು ಮರುಕಳಿಸುವಂತೆ ಮಾಡಿತು.
> **ರಿಷಬ್ ಶೆಟ್ಟಿ,** ನಟ

'ಜನರಿಂದಲೇ ಪ್ರಚಾರ ಆಗಬೇಕು'

'ಸುಮಾರು ಒಂದು ತಿಂಗಳ ಹಿಂದೆ ಈ ಸಿನಿಮಾ ಘೋಷಣೆ ಮಾಡಿದಾಗ ನನಗೆ ಯಾವ ನಿರೀಕ್ಷೆಯೂ ಇರಲಿಲ್ಲ. ಇದು ನನ್ನ ನಿರ್ದೇಶನದ ಚೊಚ್ಚಲ ಸಿನಿಮಾ. ಲೈಟರ್ ಬುದ್ಧ ಫಿಲ್ಮ್ಸ್ ನಡಿ ಈ ಹಿಂದೆ ಸಿನಿಮಾ ಸಿದ್ಧಗೊಂಡ ಬಳಿಕವೇ ಅದರ ಬಗ್ಗೆ ಮಾತನಾಡಿದ್ದೆವು. ಈ ಸಿನಿಮಾಗೂ ಹಾಗೇ ಮಾಡಿದ್ದೆವು. ಒಂದು ಸಿನಿಮಾಗೆ ಪ್ರಚಾರ ಬೇಕೇ ಬೇಕು. ಆದರೆ ಅದು ಜನರಿಂದಲೇ ಆಗಬೇಕು. ಒಮ್ಮೆ ಜನರಿಗೆ ಇಷ್ಟವಾದರೆ ಸಿನಿಮಾ ತನ್ನಿಂದ ತಾನೇ ಸಾಗುತ್ತದೆ. ಸಾಮಾಜಿಕ ಮಾಧ್ಯಮಗಳು ಇಲ್ಲದ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ಆಗ ಸೆಲೆಬ್ರಿಟಿ ಶೋ ಎನ್ನುವುದೇ ಇರಲಿಲ್ಲ. ನಾವು ಸಣ್ಣವರಿದ್ದಾಗ ಸಿನಿಮಾ ನೋಡಿ ಬಂದವರು ಸಿನಿಮಾ ಹೇಗಿದೆ ಎನ್ನುವುದನ್ನು ಹೇಳುತ್ತಿದ್ದರು. ಆವಾಗ ಆ ಸಿನಿಮಾ ನೋಡಬೇಕು ಎಂದು ಅನಿಸುತ್ತಿತ್ತು. ಜನರು ಇಷ್ಟಪಟ್ಟ ನಂತರ ಅವರೇ ಮಾಡುವ ಪ್ರಚಾರದ ಪರಿಣಾಮ ದೊಡ್ಡದಾಗಿರುತ್ತದೆ' ಎನ್ನುತ್ತಾರೆ ನಿರ್ದೇಶಕ ಜೆ.ಪಿ. ತೂಮಿನಾಡು.

'ಇತರೆ ಚಿತ್ರತಂಡಗಳು ನಮ್ಮ ಈ ಮಾದರಿ ಅನುಸರಿಸಿದರೆ ಜನರು ಬರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ನಿರೀಕ್ಷೆಗೂ ಮೀರಿ ಇದು ಜನರನ್ನು ಸೆಳೆದಿದೆ. ಜನರಿಗೆ ಸಿನಿಮಾ ಇಷ್ಟವಾದರಷ್ಟೇ ಹೀಗಾಗಲು ಸಾಧ್ಯ. ಇಲ್ಲವಾದಲ್ಲಿ ಮೂರ್ನಾಲ್ಕು ಪ್ರೀಮಿಯರ್‌ಗಳಲ್ಲೇ ಸಿನಿಮಾ ಮುಗಿಯುತ್ತಿತ್ತು. ರಿಲೀಸ್ ಕೂಡಾ ಕಷ್ಟವಾಗುತ್ತಿತ್ತು. ಅವರ ಸಿನಿಮಾವನ್ನು ಹೇಗೆ ಪ್ರಚಾರ ಮಾಡಬೇಕು ಎನ್ನುವುದನ್ನು ಅವರೇ ಯೋಚಿಸಬೇಕು' ಎಂದರು ಜೆ.ಪಿ.ತೂಮಿನಾಡು.



ಜೆ.ಪಿ.ತೂಮಿನಾಡು



ಶೀಘ್ರ ತೆರೆಗೆ 'ಡೆವಿಲ್'

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ, ದರ್ಶನ್ ನಟನೆಯ 'ಡೆವಿಲ್–ದಿ ಹೀರೊ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಡಬ್ಬಿಂಗ್ ಕೂಡಾ ಮುಗಿದಿದೆ ಎಂದು ಚಿತ್ರತಂಡ ತಿಳಿಸಿದೆ. ಶೀಘ್ರದಲ್ಲೇ ಸಿನಿಮಾ ತೆರೆಕಾಣಲಿದೆ ಎಂದು ಪ್ರಕಾಶ್ ವೀರ್ ಹೇಳಿದ್ದಾರೆ.

ಜೆ.ಜಯಮ್ಮ ನಿರ್ಮಾಣ ಮಾಡಿರುವ ಈ ಚಿತ್ರದ ಹಾಡುಗಳ ಚಿತ್ರೀಕರಣ ಇತ್ತೀಚೆಗಷ್ಟೇ ಬ್ಯಾಂಕಾಕ್‌ನಲ್ಲಿ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸ ಬಿರುಸಿನಿಂದ ಸಾಗಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. 'ಎಲ್ಲಾ ಕಲಾವಿದರ ಡಬ್ಬಿಂಗ್ ಪೂರ್ಣವಾಗಿದೆ. ಸದ್ಯದಲ್ಲೇ ಹಾಡೊಂದನ್ನು ಬಿಡುಗಡೆ ಮಾಡುತ್ತೇವೆ' ಎಂದು ಪ್ರಕಾಶ್ ವೀರ್ ತಿಳಿಸಿದ್ದಾರೆ.



ಶೈನ್ ಶೆಟ್ಟಿ, ಅಂಕಿತಾ ಅಮರ್

ಆ. 22ಕ್ಕೆ 'ಜಸ್ಟ್ ಮ್ಯಾರೀಡ್'

'ಬಿಗ್‌ಬಾಸ್' ಖ್ಯಾತಿಯ ನಟ ಶೈನ್ ಶೆಟ್ಟಿ ಹಾಗೂ 'ಇಬ್ಬನಿ ತಬ್ಬಿದ ಇಳೆಯಲಿ' ಖ್ಯಾತಿಯ ಅಂಕಿತಾ ಅಮರ್ ನಟಿಸಿರುವ 'ಜಸ್ಟ್ ಮ್ಯಾರೀಡ್' ಸಿನಿಮಾ ಆಗಸ್ಟ್ 22ರಂದು ತೆರೆಕಾಣಲಿದೆ.

ಈ ಸಿನಿಮಾವನ್ನು ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್.ಬಾಬಿ ಅವರು ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದು, ಸಿ.ಆರ್ ಬಾಬಿ ಅವರೇ ಕಥೆ, ಚಿತ್ರಕಥೆ ಬರೆದು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಈಗಾಗಲೇ ಟೀಸರ್ ಹಾಗೂ ಹಾಡುಗಳ ಮೂಲಕ ಪ್ರೇಕ್ಷಕರನ್ನು ತಲುಪಿರುವ ಈ ಸಿನಿಮಾದಲ್ಲಿ ಪ್ರೇಮಕಥೆಯೊಂದಿಗೆ ಕೌಟುಂಬಿಕ ಕಥೆಯೂ ಇದೆ. ದೇವರಾಜ್, ಅಚ್ಯುತ್ ಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ.

'ಮತದಾರರ ಕರಡು ಪಟ್ಟಿ ಪ್ರಕಟಣೆಗೆ ಮಧ್ಯಂತರ ತಡೆ ಇಲ್ಲ'

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಕರಡು ಪಟ್ಟಿ ಪ್ರಕಟಣೆಗೆ ಮಧ್ಯಂತರ ತಡೆ ನೀಡಲು ನಿರಾಕರಿಸಿದ ಸುಪ್ರೀಂ ಕೋರ್ಟ್, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಸಲ್ಲಿಸಲಾದ ಎಲ್ಲಾ ಅರ್ಜಿಗಳ ಕುರಿತು ಒಟ್ಟಿಗೆ ನಿರ್ಧಾರಕ್ಕೆ ಬರಲಾಗುವುದು ಎಂದು ತಿಳಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ಈ ಕುರಿತ ಅರ್ಜಿಗಳ ಅಂತಿಮ ವಿಚಾರಣೆಯನ್ನು ಜುಲೈ 29ಕ್ಕೆ ನಿಗದಿಪಡಿಸಿದೆ.

ಎನ್‌ಜಿಒ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಗೋಪಾಲ್ ಶಂಕರ್ ನಾರಾಯಣನ್, ಮತದಾರರ ಕರಡು ಪಟ್ಟಿ ಬಿಡುಗಡೆಗೆ ತಡೆ ನೀಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ಅರ್ಜಿದಾರರು, ಮಧ್ಯಂತರ ಪರಿಹಾರಕ್ಕಾಗಿ ಒತ್ತಾಯಿಸುವಂತಿಲ್ಲ. ಈಗ ಆ ರೀತಿ ಮಾಡಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ತೀರ್ಪನ್ನು ಉಲ್ಲೇಖಿಸಿತು.

ಈ ಹಿಂದಿನ ಆದೇಶದಂತೆ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಪರಿಗಣಿಸುವುದನ್ನು ಮುಂದುವರಿಸಬೇಕು ಎಂದು ಎಂದು ಆಯೋಗಕ್ಕೆ ನ್ಯಾಯಪೀಠ ತಿಳಿಸಿದೆ. ಈ ಎರಡು ದಾಖಲೆಗಳು 'ಊಹಾತ್ಮಕ ನಿಜಾಯಿತಿ ಹೊಂದಿರುತ್ತವೆ' ಎಂದು ತಿಳಿಸಿದೆ.

ಎಸ್‌ಐಆರ್: ಚರ್ಚೆಗೆ ಬಿಗಿ ಪಟ್ಟು

ವಿರೋಧ ಪಕ್ಷಗಳ ಸಂಸದರಿಂದ ಸಂಸತ್ತಿನಲ್ಲಿ ಸೋಮವಾರವೂ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಸೋಮವಾರವೂ ಪ್ರತಿಭಟನೆ ನಡೆಸಿದವು.

ಹೀಗಾಗಿ ರಾಜ್ಯಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ಫಲಪ್ರದ ಚರ್ಚೆ ನಡೆಸದೆ ಕಲಾಪವನ್ನು ಮುಂದೂಡಲಾಯಿತು, ಹಲವು ಅಡಚಣೆಗಳ ಮಧ್ಯೆ ಲೋಕಸಭೆಯ ಬೆಳಗಿನ ಕಲಾಪ ನಡೆಯಿತು.

ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ಕನಿಮೊಳಿ ಮತ್ತು ಅಖಿಲೇಶ್ ಯಾದವ್ ಸೇರಿದಂತೆ 'ಇಂಡಿಯಾ' ಮೈತ್ರಿಕೂಟದ ಸಂಸದರು ಸಂಸತ್ತಿನ 'ಮಕರ ದ್ವಾರ'ದ ಹೊರಗೆ ಪ್ರತಿಭಟನೆ ನಡೆಸಿದರು. ಖರ್ಗೆ ಮತ್ತಿತರರ ಘೋಷಣೆಗಳಿಗೆ ಉಳಿದ ಸಂಸದರು ದನಿಗೂಡಿಸುತ್ತಿದ್ದುದು ಕಂಡುಬಂತು.

ರಾಜ್ಯಸಭೆಯಲ್ಲಿ ಮಧ್ಯಾಹ್ನ 11ರಿಂದ 1 ಗಂಟೆವರೆಗಿನ ಶೂನ್ಯ ಅವಧಿ ಮತ್ತು ಪ್ರಶ್ನಾವಳಿ ಸಮಯದಲ್ಲಿ ತೀವ್ರ ಗದ್ದಲ ಉಂಟಾಗಿದ್ದರಿಂದ ಎರಡು ಬಾರಿ ಕಲಾಪವನ್ನು ಮುಂದೂಡಲಾಯಿತು. ಮಧ್ಯಾಹ್ನ 2 ಗಂಟೆ ನಂತರವೂ ಪ್ರತಿಭಟನೆ ಮುಂದುವರಿದ ಕಾರಣ ಕಲಾಪವನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು. ಎಸ್‌ಐಆರ್ ಕುರಿತು ಚರ್ಚೆ ನಡೆಸುವಂತೆ ಸಲ್ಲಿಸಲಾದ 26 ಮನವಿಗಳನ್ನೂ ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ಅವರು ತಳ್ಳಿಹಾಕಿದರು.

'ಮತದಾನದ ಹಕ್ಕು ಕಸಿಯುವ ಯತ್ನ'

ಜನರ ಹಕ್ಕುಗಳ ಪರವಾಗಿ 'ಇಂಡಿಯಾ'ವು ಸಂಸತ್ತಿನಲ್ಲಿ ಸೋಮವಾರವೂ ಧ್ವನಿ ಎತ್ತಿತು. ದೇಶದಾದ್ಯಂತ ಎಸ್‌ಐಆರ್ ಅನುಷ್ಠಾನವು ದುರ್ಬಲ ವರ್ಗಗಳ ಜನರ ಮತದಾನದ ಹಕ್ಕನ್ನು ಕಸಿಯುವ ವ್ಯವಸ್ಥಿತ ಯತ್ನವಾಗಿದ್ದು, ಇದನ್ನು ಸಹಿಸಲು ಸಾಧ್ಯವೇ ಇಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ಆರ್‌ಎಸ್‌ಎಸ್–ಬಿಜೆಪಿಯ ಮನುವಾದಿ ಮನಸ್ಥಿತಿಯು ಮೇಲುಗೈ ಸಾಧಿಸಲು ಅವಕಾಶ ನೀಡುವುದಿಲ್ಲ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಬಿಹಾರದಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಸೋಮವಾರವೂ ಪ್ರತಿಭಟನೆ ನಡೆಸಿದವು. ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ, ಅಖಿಲೇಶ್ ಯಾದವ್ ಮತ್ತಿತರರು ಇದ್ದರು ಪಿಟಿಐ ಚಿತ್ರ

ತರೂರ್ ಮೌನ ವ್ರತ

ಲೋಕಸಭೆಯಲ್ಲಿ 'ಆಪರೇಷನ್ ಸಿಂಧೂರ' ಕುರಿತ ವಿಶೇಷ ಚರ್ಚೆಯಲ್ಲಿ ಪಕ್ಷದ ಪರವಾಗಿ ಮಾತನಾಡಬೇಕೆಂಬ ಕಾಂಗ್ರೆಸ್ ಪಕ್ಷದ ಸೂಚನೆಯನ್ನು ಪಾಲಿಸಲು ತಿರುವನಂತಪುರ ಸಂಸದ ಶಶಿ ತರೂರ್ ನಿರಾಕರಿಸಿದ್ದಾರೆ. ಇದರಿಂದಾಗಿ, ಕಾಂಗ್ರೆಸ್ ಹಾಗೂ ತರೂರ್ ನಡುವಿನ ಅಂತರ ಇನ್ನಷ್ಟು ಹೆಚ್ಚಿದೆ.

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೂಚನೆಯ ಮೇರೆಗೆ ಲೋಕಸಭೆಯ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೊಯ್ ಅವರು ತರೂರ್ ಅವರಿಗೆ ದೂರವಾಣಿ ಕರೆ ಮಾಡಿ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಕೇಳಿಕೊಂಡರು. ಇದಕ್ಕೆ ತರೂರ್ ಒಪ್ಪಲಿಲ್ಲ. 'ಬಂದರು ಮಸೂದೆ ಕುರಿತ ಚರ್ಚೆಯಲ್ಲಿ ಮಾತನಾಡುತ್ತೇನೆ' ಎಂಬುದಾಗಿ ತಿಳಿಸಿದರು ಎಂದು ಮೂಲಗಳು ಹೇಳಿವೆ.

ಸಂಸತ್ ಭವನದಲ್ಲಿ ತರೂರ್ ಅವರಲ್ಲಿ ಪತ್ರಕರ್ತರು, '16 ಗಂಟೆಗಳ ವಿಶೇಷ ಚರ್ಚೆಯಲ್ಲಿ ಮಾತನಾಡುತ್ತೀರಾ' ಎಂದು ಪ್ರಶ್ನಿಸಿದರು. 'ನನ್ನದು ಮೌನ ವ್ರತ' ಎಂದು ಅವರು ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಕಾಲ್ತುಳಿತ: ಇಬ್ಬರು ಮೃತ, 36 ಜನರಿಗೆ ಗಾಯ



ಕಾಲ್ತುಳಿತದಲ್ಲಿ ಗಾಯಗೊಂಡು ಆಸ್ಪತ್ರೆ ಸೇರಿರುವವರ ಆರೈಕೆಯಲ್ಲಿ ತೊಡಗಿದ್ದ ಕುಟುಂಬಸ್ಥರು ಪಿಟಿಐ ಚಿತ್ರ

ಬಾರಾಬಂಕಿ (ಉತ್ತರ ಪ್ರದೇಶ) (ಪಿಟಿಐ): ಹೈದರಗಢದ ಅವಸಾನೇಶ್ವರ ದೇವಾಲಯದಲ್ಲಿ ಸೋಮವಾರ ಕಾಲ್ತುಳಿತ ಸಂಭವಿಸಿ, ಇಬ್ಬರು ಮೃತಪಟ್ಟಿದ್ದಾರೆ ಮತ್ತು 36 ಮಂದಿ ಗಾಯಗೊಂಡಿದ್ದಾರೆ.

ಮಂಗಗಳು ಎಳೆದಾಡಿದ್ದರಿಂದ ವಿದ್ಯುತ್ ತಂತಿಯೊಂದು ತಗಡಿನ ಶೆಡ್ ಮೇಲೆ ಬಿದ್ದು ವಿದ್ಯುತ್ ಪ್ರವಹಿಸಿದೆ. ಇದರಿಂದ ಜನರು ಗಾಬರಿಗೊಂಡು ಕಾಲ್ತುಳಿತ ಸಂಭವಿಸಿದೆ. ಶ್ರಾವಣ ನಿಮಿತ್ತ ದೇವಾಲಯದಲ್ಲಿ ಆಯೋಜಿಸಿದ್ದ ಜಲಾಭಿಷೇಕದಲ್ಲಿ ಜನರು ಭಾಗಿಯಾಗಿದ್ದ ವೇಳೆ ಈ ದುರಂತ ನಡೆದಿದೆ.

ಪ್ರಶಾಂತ್ (22) ಮತ್ತು 30 ವರ್ಷದ ವ್ಯಕ್ತಿಯೊಬ್ಬರು ದುರಂತದಲ್ಲಿ ಮೃತಪಟ್ಟವರು. ಗಾಯಗೊಂಡ 10 ಜನರನ್ನು ತ್ರಿವೇಣಿಗಂಜ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರಲ್ಲಿ ಐವರ ಸ್ಥಿತಿ ಗಂಭೀರವಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಉನ್ನತ ಆಸ್ಪತ್ರೆಗೆ ದಾಖಲಿಸಲಾಗಿದೆ ಮತ್ತು ಇತರ 26 ಜನರನ್ನು ಹೈದರಗಢ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಶಶಾಂಕ್ ತ್ರಿಪಾಠಿ ತಿಳಿಸಿದ್ದಾರೆ.

ಮಣಿಪುರ: ಐವರು ಉಗ್ರರ ಬಂಧನ

ಇಂಫಾಲ್ (ಪಿಟಿಐ): ಇಂಫಾಲ್ ಹಾಗೂ ತೌಬಾಲ್ ಜಿಲ್ಲೆಯಲ್ಲಿ ಸುಲಿಗೆ ಪ್ರಕರಣಗಳಲ್ಲಿ ತೊಡಗಿದ್ದ, ಮೂರು ನಿಷೇಧಿತ ಸಂಘಟನೆಗಳ ಐವರು ಉಗ್ರಗಾಮಿಗಳನ್ನು ಭದ್ರತಾ ಪಡೆಗಳು ಬಂಧಿಸಿವೆ.

ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಾರ್ಟಿ (ಅಪುನ್ಬಾ ಸಿಟಿ ಮೈತೇಯಿ)ಗೆ ಸೇರಿದ ಮೂವರು ಸಕ್ರಿಯ ಸದಸ್ಯರನ್ನು ಭಾನುವಾರ ಬಂಧಿಸಲಾಗಿದೆ. ಇವರಲ್ಲಿ ಇಬ್ಬರು ಸುಲಿಗೆ ಹಣವನ್ನು ಸಂಗ್ರಹಿಸಲು ಹುಯಿಡ್ರೋಮ್ ಗ್ರಾಮದಿಂದ ಹೋಗುವಾಗ ಬಂಧಿಸಲಾಗಿದೆ. ಇವರು ನೀಡಿದ ಸುಳಿವು ಆಧರಿಸಿ, ಕೈರಂಗ್ ಮಾನಿಂಗ್ ಲೈಕೈ ಪ್ರದೇಶದಲ್ಲಿ ಮತ್ತೊಬ್ಬನನ್ನು ಬಂಧಿಸಲಾಯಿತು ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ನಿಷೇಧಿತ ಕಾಂಗ್ಲಿ ಯವೊಲ್ ಕನ್ನಾ ಲುಪ್ (ಎಸ್‌ಒಆರ್‌ಇಪಿಎ)ನ ಸದಸ್ಯನನ್ನು ತೌಬಾಲ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಕೆಸಿಪಿ (ಎಂಎಫ್‌ಎಲ್)ಗೆ ಸೇರಿದ ಉಗ್ರನನ್ನು ಇಂಫಾಲ್ ಪೂರ್ವ ಜಿಲ್ಲೆಯ ಎಶಿಂಗ್‌ಥೆಂಬಿ ಮಾಪಾನ್‌ನಲ್ಲಿರುವ ಅವರ ನಿವಾಸದಲ್ಲಿ ಬಂಧಿಸಲಾಯಿತು ಎಂದು ಮಾಹಿತಿ ನೀಡಿದ್ದಾರೆ.

ಗುಂಡಿನ ದಾಳಿ: ಯೋಧ ಸಾವು

ಸೋನಿಪತ್ (ಪಿಟಿಐ): ಹರಿಯಾಣದ ಸೋನಿಪತ್ ಜಿಲ್ಲೆಯಲ್ಲಿ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಯುವಕರು ನಡೆಸಿದ ಗುಂಡಿನ ದಾಳಿಯಲ್ಲಿ ಸಿಆರ್‌ಪಿಎಫ್ ಯೋಧ ಕೃಷ್ಣ (30) ಮೃತಪಟ್ಟಿದ್ದಾರೆ.

ಸೋಮವಾರ ಮುಂಜಾನೆ ಕೃಷ್ಣ ಅವರು ಮನೆಗೆ ಬರುತ್ತಿದ್ದಾಗ ಈ ದಾಳಿ ನಡೆದಿದೆ. ಕೆಲ ದಿನಗಳ ಹಿಂದೆ ಕಾವಡ್ ಯಾತ್ರೆ ವೇಳೆ ಕೃಷ್ಣ ಅವರೊಂದಿಗೆ ಗ್ರಾಮದ ಕೆಲ ಯುವಕರು ಜಗಳವಾಡಿದ್ದರು. ಅವರೇ ಈ ಕೃತ್ಯ ಎಸಗಿರುವ ಶಂಕೆ ಇದೆ ಎಂದು ಸದರ್ ಗುಹಾನ ಠಾಣೆ ಇನ್‌ಸ್ಪೆಕ್ಟರ್ ಲಾಲ್ ಸಿಂಗ್ ತಿಳಿಸಿದ್ದಾರೆ.

ಸರ್ಕಾರ– ವಿಪಕ್ಷ 'ಸಿಂಧೂರ' ಸಂಘರ್ಷ

ಒಂದನೇ ಪುಟದಿಂದ...

ಭಯೋತ್ಪಾದಕರು ಮುಂಬೈ ಮೇಲೆ ದಾಳಿಯ ಬಳಿಕ ಯುಪಿಎ ಸರ್ಕಾರದ ನಿಷ್ಕ್ರಿಯತೆಯಿಂದಾಗಿ ಭದ್ರತಾ ವ್ಯವಸ್ಥೆ ಮೇಲೆ ಕೆಟ್ಟ ಪರಿಣಾಮ ಬೀರಿತು ಎಂದು ಅವರು ದೂರಿದರು.

ಇದಕ್ಕೆ ತಿರುಗೇಟು ನೀಡಿದ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೊಯ್, 'ಭಾರತ–ಪಾಕ್ ನಡುವಿನ ಕದನ ವಿರಾಮ ಘೋಷಣೆಗೆ ನಾನೇ ಕಾರಣ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 26 ಸಲ ಹೇಳಿಕೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಶರಣಾಗಿದ್ದು ಯಾರಿಗೆ' ಎಂದು ಪ್ರಶ್ನಿಸಿದರು. ಸಿಂಧೂರ ಕಾರ್ಯಾಚರಣೆಯ ಸಂದರ್ಭದಲ್ಲಿ ಐದು ರಫೇಲ್ ಯುದ್ಧ ವಿಮಾನಗಳನ್ನು ನಾಶಪಡಿಸಲಾಗಿದೆ ಎಂದು ಪಾಕಿಸ್ತಾನ ಹೇಳಿಕೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಬಿಹಾರದಲ್ಲಿನ ಮತದಾರರ ಪಟ್ಟಿಯ ಪರಿಷ್ಕರಣೆ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ವಿಪಕ್ಷಗಳು ಆಗ್ರಹಿಸಿದವು. ಹೀಗಾಗಿ, ಮಧ್ಯಾಹ್ನ 2 ಗಂಟೆವರೆಗೆ ಸುಗಮವಾಗಿ ಕಲಾಪ ನಡೆಯಲಿಲ್ಲ. ಮಧ್ಯಾಹ್ನ 2 ಗಂಟೆಗೆ ಆರಂಭವಾದ ವಿಶೇಷ ಚರ್ಚೆ ತಡರಾತ್ರಿಯವರೆಗೆ ಮುಂದುವರಿಯಿತು. ಮಂಗಳವಾರವೂ ವಿಶೇಷ ಚರ್ಚೆ ನಡೆಯಲಿದೆ.

ಗೊಗೊಯ್ ವಾಗ್ದಾಳಿ

ಒಂದನೇ ಪುಟದಿಂದ...

- ನಾವು ಭಯೋತ್ಪಾದಕದ ಮೂಲಸೌಕರ್ಯಗಳನ್ನು ನಾಶಪಡಿಸಿದ್ದೇವೆ ಎಂದು ಮೋದಿ ಅವರು ಪುಲ್ವಾಮಾ ದಾಳಿಯ ಸಂದರ್ಭದಲ್ಲಿ ಹೇಳಿದ್ದರು. ಈಗಲೂ ಅದೇ ಹೇಳಿಕೆ ನೀಡುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಅತ್ಯಂತ ಭಯಾನಕ ಭಯೋತ್ಪಾದಕ ದಾಳಿಗಳು ನಡೆದಿವೆ. ಇವುಗಳ ಹೊಣೆ ಹೊರುವವರು ಯಾರು?
- ಐದರಿಂದ ಆರು ರಫೇಲ್ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದ್ದೇವೆ ಎಂದು ಪಾಕಿಸ್ತಾನ ಹೇಳಿಕೊಳ್ಳುತ್ತಿದೆ. ಒಂದೊಂದು ವಿಮಾನ ಹಲವು ಕೋಟಿ ಮೌಲ್ಯ ಹೊಂದಿವೆ. ದೇಶದಲ್ಲಿ 35 ರಫೇಲ್ ಯುದ್ಧ ವಿಮಾನಗಳಿವೆ. ಕೆಲವನ್ನು ಪಾಕಿಸ್ತಾನ ಸೇನೆ ಹೊಡೆದುರುಳಿಸಿದ್ದರೆ ಅದು ದೊಡ್ಡ ನಷ್ಟವೇ.
- ಭಯೋತ್ಪಾದಕರ ದಾಳಿ ನಡೆದು 100 ದಿನಗಳು ಕಳೆದಿವೆ. ಅಮಾಯಕ 26 ಪ್ರವಾಸಿಗರನ್ನು ನಿರ್ದಯವಾಗಿ ಕೊಂದ ಉಗ್ರರನ್ನು ಈವರೆಗೆ ಪತ್ತೆ ಹಚ್ಚಿ ಶಿಕ್ಷಿಸಿಲ್ಲ
- ಉಗ್ರರ ದಾಳಿ ಹಾಗೂ ಆಪರೇಷನ್ ಸಿಂಧೂರ ಕಾರ್ಯಾಚರಣೆಯ ನಂತರ ಬೇರೆ ದೇಶಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ಭಾರತ ವಿಫಲವಾಯಿತು ಎನ್ನಬಹುದು. ಪಾಕಿಸ್ತಾನಕ್ಕೆ ಐಎಂಎಫ್ ಸಹಾಯವನ್ನು ತಡೆಯಲು ಭಾರತಕ್ಕೆ ಏಕೆ ಸಾಧ್ಯವಾಗಲಿಲ್ಲ?
- ಭಯೋತ್ಪಾದನೆಯ ಬೆನ್ನೆಲುಬು ಮುರಿಯಲಾಗಿದೆ ಎಂದು ಗೃಹ ಸಚಿವರು ಹೇಳುತ್ತಲೇ ಇದ್ದರು. ಹಾಗಿದ್ದರೆ ಉರಿ, ಬಾಲಕೋಟ್ ಮತ್ತು ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದಿದ್ದು ಹೇಗೆ?

'ಮೋದಿ–ಟ್ರಂಪ್ ಮಾತನಾಡಿರಲಿಲ್ಲ'

ಒಂದನೇ ಪುಟದಿಂದ...

- ನಾನು ಎರಡು ವಿಷಯಗಳನ್ನು ಸ್ಪಷ್ಟಪಡಿಸುತ್ತೇನೆ. ಮೊದಲನೆಯದಾಗಿ, ಪಾಕ್–ಭಾರತದ ನಡುವಿನ ಬಿಕ್ಕಟ್ಟಿನ ಮಾತುಕತೆಗೂ ಅಮೆರಿಕದ ಜತೆಗಿನ ವ್ಯಾಪಾರಕ್ಕೂ ಸಂಬಂಧ ಕಲ್ಪಿಸುವುದು ಸರಿಯಲ್ಲ. ಎರಡನೆಯದಾಗಿ, ಪಹಲ್ಗಾಮ್ ದಾಳಿಯ ದಿನದಿಂದ ಜೂನ್ 17ರ ವರೆಗೆ ಮೋದಿ ಹಾಗೂ ಟ್ರಂಪ್ ನಡುವೆ ಯಾವುದೇ ದೂರವಾಣಿ ಮಾತುಕತೆ ನಡೆದಿಲ್ಲ
- ಚೀನಾದ ಬಗ್ಗೆ ನಮಗೆ ಇಂದು ಎಚ್ಚರಿಕೆ ನೀಡುವ ನಾಯಕರೇ ಈ ಹಿಂದೆ ಆ ದೇಶದಿಂದ 3ಜಿ ಹಾಗೂ 4ಜಿ ಬರಲು ಅವಕಾಶ ನೀಡಿದರು
- ಡೋಕ್ಲಾಮ್ ಬಿಕ್ಕಟ್ಟಿನ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಚೀನಾದ ರಾಯಭಾರಿಯಿಂದ ಮಾಹಿತಿ ಪಡೆದ ವಿಷಯವನ್ನು ನಾನು ಸದನಕ್ಕೆ ನೆನಪಿಸಲು ಬಯಸುತ್ತೇನೆ
- ಏಳು ಸಂಸದೀಯ ನಿಯೋಗಗಳು 33 ರಾಷ್ಟ್ರಗಳಿಗೆ ತೆರಳಿ ಭಯೋತ್ಪಾದನೆಯ ಬಗ್ಗೆ ನಮ್ಮ ಶೂನ್ಯ ಸಹಿಷ್ಣುತೆಯನ್ನು ವಿಶ್ವ ನಾಯಕರಿಗೆ ವಿವರಿಸುವ ಮೂಲಕ ಭಾರತವನ್ನು ಹೆಮ್ಮೆಪಡುವಂತೆ ಮಾಡಿದ್ದೇವೆ

> ಪಾಕಿಸ್ತಾನ ಆಕ್ರಮಿಸಿಕೊಂಡಿರುವ ಕಾಶ್ಮೀರಿ ಭೂಮಿಯನ್ನು ನೀವು ಮರಳಿ ತರುವುದನ್ನು ನಾವು ನೋಡಲು ಬಯಸುತ್ತೇವೆ. ಆದರೆ, ನೀವು ಕದನ ವಿರಾಮವನ್ನು ಏಕೆ ಘೋಷಿಸಿದ್ದೀರಿ ಎಂದು ನಮಗೆ ತಿಳಿಯಬೇಕು?
> **ಕಲ್ಯಾಣ್ ಬ್ಯಾನರ್ಜಿ,** ಟಿಎಂಸಿ ಸಂಸದ

> ವಿರೋಧ ಪಕ್ಷದವರಿಗೆ ನಮ್ಮ ವಿದೇಶಾಂಗ ಸಚಿವರ ಮೇಲೆ ನಂಬಿಕೆ ಇಲ್ಲ. ಆದರೆ, ಅವರಿಗೆ ಬೇರೆ ಯಾವುದೋ ದೇಶದ ಮೇಲೆ ನಂಬಿಕೆ ಇದೆ ಎಂಬುದರ ಬಗ್ಗೆ ನನಗೆ ಆಕ್ಷೇಪ ಇದೆ. ನಾವು 20 ವರ್ಷ ಆಡಳಿತ ಪಕ್ಷದಲ್ಲೇ ಇರುತ್ತೇವೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ಪಾಕಿಸ್ತಾನದ ಯಾವುದೇ ಭಾಗದಲ್ಲಿ ಉಗ್ರರು ಸುರಕ್ಷಿತ ಅಲ್ಲ ಎಂಬುದನ್ನು ಸಿಂಧೂರ ಕಾರ್ಯಾಚರಣೆ ತೋರ್ಪಡಿಸಿತ್ತು. ಈ ಕಾರ್ಯಾಚರಣೆಯು ಹೊಸ ತಲೆಮಾರಿನ ಯುದ್ಧ ಕೌಶಲದಿಂದ ಕೂಡಿತ್ತು
> **ತೇಜಸ್ವಿ ಸೂರ್ಯ,** ಸಂಸದ

'ಒತ್ತಡಕ್ಕೆ ಮಣಿದಿಲ್ಲ'

ಒಂದನೇ ಪುಟದಿಂದ...

- ಭಾರತವು ಮೊದಲು ಸ್ನೇಹದ ಹಸ್ತ ಚಾಚುತ್ತದೆ. ಆದರೆ, ಯಾವುದೇ ದೇಶವು ದ್ರೋಹ ಮಾಡಿದರೆ ಯಾವ ರೀತಿ ತಿರುಗೇಟು ನೀಡಬೇಕು ಎಂಬುದು ಗೊತ್ತಿದೆ
- ಭಾರತದ ಗಡಿಗಳನ್ನು ರಕ್ಷಿಸಲು ಸಶಸ್ತ್ರ ಪಡೆಗಳು ಯಾವಾಗಲೂ ಜಾಗರೂಕವಾಗಿರುತ್ತವೆ. ಮಿಲಿಟರಿ ಕಾರ್ಯಾಚರಣೆಯ ಮೂಲಕ ಒಂಬತ್ತು ಭಯೋತ್ಪಾದಕ ತಾಣಗಳ ವಿರುದ್ಧ ಪರಿಣಾಮಕಾರಿ ಮತ್ತು ಸುಸಂಘಟಿತ ದಾಳಿ ಮಾಡಲಾಗಿದೆ. ಏಳು ಭಯೋತ್ಪಾದಕ ಶಿಬಿರಗಳು ಸಂಪೂರ್ಣವಾಗಿ ನಾಶವಾದವು. ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಪಾಕಿಸ್ತಾನದೊಳಗೆ ಉಂಟಾದ ಹಾನಿಯ ಪುರಾವೆಗಳು ಭಾರತದ ಬಳಿ ಇವೆ

ದಾಳಿಯ ಸಂಚುಕೋರನ ಹತ್ಯೆ

ಒಂದನೇ ಪುಟದಿಂದ...

ಉಗ್ರ ಹಸೀಮ್ ಅಲಿಯಾಸ್ ಸುಲೇಮಾನ್ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಯ ಸಂಚುಕೋರನಾಗಿದ್ದ ಎಂದು ಭದ್ರತಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಉಗ್ರರು ಬಳಸಿದ್ದ ಸಾಧನವನ್ನೇ ಹೋಲುವ ತಾಂತ್ರಿಕ ಸಿಗ್ನಲ್ ಪತ್ತೆಯಾದ ಹಿನ್ನೆಲೆಯಲ್ಲಿ ಮುನ್ನಾರ್ ಗ್ರಾಮ ಹಾಗೂ ಹರ್ವನ್ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಯ ವಿಶೇಷ ಘಟಕದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ಗುಂಡಿನ ಚಕಮಕಿ ನಡೆದಿದ್ದು, ಮೂವರು ಉಗ್ರರ ಹತ್ಯೆ ಮಾಡಲಾಗಿದೆ.

ಘಟನಾ ಸ್ಥಳದಿಂದ ಒಂದು ಎಂ–4 ಕಾರ್ಬೈನ್ ರೈಫಲ್, 2 ಎಕೆ–ರೈಫಲ್‌ಗಳು ಹಾಗೂ ಮದ್ದು–ಗುಂಡು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಇನ್ನೂ ಪ್ರಗತಿಯಲ್ಲಿದ್ದು, ಅದು ಪೂರ್ಣಗೊಂಡ ಬಳಿಕ ಇತರೆ ಮಾಹಿತಿಯನ್ನು ಬಹಿರಂಗಪಡಿಸಲಾಗುವುದು ಎಂದು ಕಾಶ್ಮೀರ ವಲಯದ ಐಜಿಪಿ ವಿ.ಕೆ.ಬಿದ್ರಿ ಹೇಳಿದ್ದಾರೆ.

ಫೋನ್ ಸಿಗ್ನಲ್‌ನಿಂದ ಉಗ್ರರ ಬೇಟೆ

ಸ್ಯಾಟಲೈಟ್ ಫೋನ್‌ನ ಸಿಗ್ನಲ್‌ನ ಸಹಾಯದಿಂದಾಗಿ ಭದ್ರತಾ ಪಡೆಗಳು ಪಹಲ್ಗಾಮ್ ದಾಳಿ ನಡೆಸಿದ್ದ ಉಗ್ರರ ಜಾಲವನ್ನು ಭೇದಿಸಲು ಸಾಧ್ಯವಾಗಿದೆ ಎಂದು ಮೂಲಗಳು ತಿಳಿಸಿವೆ.

ಪಹಲ್ಗಾಮ್‌ನಲ್ಲಿ ಉಗ್ರರು ಬಳಸಿದ್ದ ಹುವಾಯಿ ಸ್ಯಾಟಲೈಟ್ ಫೋನ್ ದಾಳಿಯ ಬಳಿಕ ಸ್ತಬ್ಧಗೊಂಡಿತ್ತು. ದಾಳಿಯ 3 ತಿಂಗಳ ಬಳಿಕ, ಎರಡು ದಿನಗಳ ಹಿಂದಷ್ಟೇ ಫೋನ್ ಸಕ್ರಿಯವಾಗಿದೆ.

ಭದ್ರತಾ ಪಡೆಗಳು ಫೋನ್ ಸಿಗ್ನಲ್ ಸುಳಿವು ಹಿಡಿದು ಹೊರಟಾಗ ದಾಚೀಗಾಮ್‌ನ ಅರಣ್ಯ ಪ್ರದೇಶದಲ್ಲಿನ ಉಗ್ರರ ಜಾಲ ಪತ್ತೆಯಾಯಿತು ಎಂದು ಮೂಲಗಳು ತಿಳಿಸಿವೆ.

ಉಗ್ರರ ಸಹಚರನ ಬಂಧನ

ಉಗ್ರರಿಗೆ ನೆರವು ನೀಡುತ್ತಿದ್ದ ವ್ಯಕ್ತಿಯೊಬ್ಬನನ್ನು ಭದ್ರತಾ ಸಿಬ್ಬಂದಿ ಕುಪ್ವಾಡ ಜಿಲ್ಲೆಯಲ್ಲಿ ಸೋಮವಾರ ಬಂಧಿಸಿದ್ದಾರೆ. ಬಂಧಿತನನ್ನು ಮಾರ್ಸರಿ ಗ್ರಾಮದ ನಿವಾಸಿ ವಾಲಿ ಮೊಹಮ್ಮದ್ ಮೀರ್ ಎಂದು ಗುರುತಿಸಲಾಗಿದೆ. ಆತನಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆತ ವಿವಿಧ ಉಗ್ರ ಸಂಘಟನೆಗಳ ಸಂಪರ್ಕದಲ್ಲಿದ್ದು, ಉಗ್ರರಿಗೆ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಪೂರೈಕೆ ಮಾಡುತ್ತಿದ್ದ ಎಂದು ತಿಳಿದುಬಂದಿದೆ.

ದಿವ್ಯಾಗೆ ಕಿರೀಟ, ಗ್ರ್ಯಾಂಡ್‌ಮಾಸ್ಟರ್ ಪಟ್ಟ

ಫಿಡೆ ಮಹಿಳಾ ಚೆಸ್ ವಿಶ್ವಕಪ್ ಫೈನಲ್: ಹೋರಾಡಿ ಸೋತ ಅನುಭವಿ ಕೋನೇರು ಹಂಪಿ

ದಿವ್ಯಾ ದೇಶಮುಖ್ ಸಾಧನೆಯ ಹಾದಿ

ಜನನ: 2005 ಡಿಸೆಂಬರ್ 9
ಊರು: ನಾಗ್ಪುರ, ಮಹಾರಾಷ್ಟ್ರ
ತಂದೆ: ಡಾ.ಜಿತೇಂದ್ರ ದೇಶಮುಖ್,
ತಾಯಿ: ಡಾ.ನಮ್ರತಾ ದೇಶಮುಖ್ (ಇಬ್ಬರೂ ವೈದ್ಯರು)
2012: ರಾಷ್ಟ್ರೀಯ 7 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ
2014: ವಿಶ್ವ 10 ವರ್ಷದೊಳಗಿವರ ಚಾಂಪಿಯನ್ (ಡರ್ಬನ್)
2017: ವಿಶ್ವ 12 ವರ್ಷದೊಳಗಿನವರ ಚಾಂಪಿಯನ್ (ಬ್ರೆಜಿಲ್)
2021: ಮಹಿಳಾ ಗ್ರ್ಯಾಂಡ್‌ಮಾಸ್ಟರ್ (ಡಬ್ಲ್ಯುಜಿಎಂ)
2020: ಆನ್‌ಲೈನ್ ಒಲಿಂಪಿಯಾಡ್‌ನಲ್ಲಿ ಚಿನ್ನ ಗೆದ್ದ ಮಹಿಳಾ ತಂಡದಲ್ಲಿದ್ದ ಆಟಗಾರ್ತಿ
2022: ಚೆಸ್ ಒಲಿಂಪಿಯಾಡ್‌ನಲ್ಲಿ ವೈಯಕ್ತಿಕ ಕಂಚಿನ ಪದಕ
2023: ಇಂಟರ್‌ನ್ಯಾಷನಲ್ ಮಾಸ್ಟರ್
2023: ಏಷ್ಯನ್ ಮಹಿಳಾ ಚಾಂಪಿಯನ್
2024: ಮಹಿಳಾ ವಿಶ್ವ ಜೂನಿಯರ್ ಚಾಂಪಿಯನ್
2024: ಒಲಿಂಪಿಯಾಡ್‌ನಲ್ಲಿ ಡಬಲ್ ಚಿನ್ನ (ವೈಯಕ್ತಿಕ ಮತ್ತು ತಂಡ ವಿಭಾಗ)
2025: ಫಿಡೆ ಮಹಿಳಾ ವಿಶ್ವಕಪ್ ಚಾಂಪಿಯನ್, ಗ್ರ್ಯಾಂಡ್ ಮಾಸ್ಟರ್


ವಿಶ್ವಕಪ್ ಟ್ರೋಫಿಯೊಂದಿಗೆ ದಿವ್ಯಾ ದೇಶಮುಖ್

ಪ್ರಜಾವಾಣಿ ವಾರ್ತೆ/ ಪಿಟಿಐ

ಬಟುಮಿ (ಜಾರ್ಜಿಯಾ): ಭಾರತದ ಯುವ ತಾರೆ ದಿವ್ಯಾ ದೇಶಮುಖ್ ಅವರಿಗೆ ಕಪ್ಪು ಸಮುದ್ರದ ತಟದಲ್ಲಿರುವ ಈ ಸುಂದರ ನಗರದಲ್ಲಿ ಸೋಮವಾರ ಅವಳಿ ಸಂಭ್ರಮ. ಫೈನಲ್‌ನಲ್ಲಿ ಸ್ವದೇಶದ ಅನುಭವಿ ಕೋನೇರು ಹಂಪಿ ಅವರನ್ನು ಸೋಲಿಸಿ ಫಿಡೆ ಚೆಸ್ ಮಹಿಳಾ ವಿಶ್ವಕಪ್ ಕಿರೀಟ ಧರಿಸಿದ ಅವರು ಜೊತೆಯಲ್ಲೇ 'ಗ್ರ್ಯಾಂಡ್ ಮಾಸ್ಟರ್' ಬಿರುದಿಗೂ ಪಾತ್ರರಾದರು.

ಈ ಪ್ರತಿಷ್ಠಿತ ಟೂರ್ನಿಯಲ್ಲಿ ಮೊದಲ ಬಾರಿ ಭಾರತದ ಆಟಗಾರ್ತಿಯರು ಫೈನಲ್ ತಲುಪಿದ್ದೇ ಚಾರಿತ್ರಿಕ ಸಂದರ್ಭವಾಗಿತ್ತು. 19 ವರ್ಷ ವಯಸ್ಸಿನ ದಿವ್ಯಾ ಟೈಬ್ರೇಕರ್‌ನ ಎರಡನೇ ರ್‍ಯಾಪಿಡ್ ಆಟದಲ್ಲಿ ಗ್ರ್ಯಾಂಡ್‌ಮಾಸ್ಟರ್ ಹಂಪಿ ಅವರನ್ನು ಸೋಲಿಸಿ ಫೈನಲ್ ಪಂದ್ಯವನ್ನು 2.5–1.5 ರಿಂದ ಗೆದ್ದರು. ಟೂರ್ನಿಗೆ ಮೊದಲು ಅವರ ಬಳಿ ಒಂದೂ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಇರಲಿಲ್ಲ. ಫಿಡೆ ನಿಯಮಗಳ ಪ್ರಕಾರ ಟೂರ್ನಿ ಗೆದ್ದ ಆಟಗಾರ್ತಿ, ಯಾವುದೇ ಪ್ರಕ್ರಿಯೆಯ ಅಗತ್ಯವಿಲ್ಲದೇ ನೇರವಾಗಿ ಗ್ರ್ಯಾಂಡ್ ಮಾಸ್ಟರ್ ಬಿರುದು ಪಡೆಯುತ್ತಾರೆ.

ಉತ್ತಮ ಲಯದಲ್ಲಿದ್ದ 19 ವರ್ಷ ವಯಸ್ಸಿನ ದಿವ್ಯಾ, ಇಲ್ಲಿ ಎಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿ ವಿಶ್ವಕಪ್ ಗೆದ್ದ ಮೊದಲ ಭಾರತೀಯ ಆಟಗಾರ್ತಿಯಾದರು. ಟ್ರೋಫಿಯ ಜೊತೆಗೆ ₹43.30 ಲಕ್ಷ ಬಹುಮಾನ ಅವರ ಪಾಲಾಯಿತು. ಅವರ ಈ ದೊಡ್ಡ ಮಟ್ಟದ ಯಶಸ್ಸು ಭಾರತದ ಚೆಸ್‌ಗೆ ಬಲ ತುಂಬಲಿದೆ. ದಿವ್ಯಾ ಈ ಟೂರ್ನಿಯಲ್ಲಿ 15ನೇ ಶ್ರೇಯಾಂಕ ಪಡೆದಿದ್ದರು. ಆದರೆ ಶಾಂತಚಿತ್ತ ಮತ್ತು ಏಕಾಗ್ರತೆಯಿಂದ ಆಡಿ ತಮಗಿಂತ ಮೇಲಿನ ರ್‍ಯಾಂಕಿನ ಆಟಗಾರ್ತಿಯರನ್ನು ಮಣಿಸುತ್ತ ಹೋದರು.

ಫೈನಲ್‌ನ ಮೊದಲ ಎರಡು ಕ್ಲಾಸಿಕಲ್ ಆಟಗಳು (ಶನಿವಾರ ಮತ್ತು ಭಾನುವಾರ) ಡ್ರಾ ಆಗಿದ್ದವು. ಹೀಗಾಗಿ ವಿಜೇತರ ನಿರ್ಧಾರಕ್ಕೆ ಟೈಬ್ರೇಕ್ ಪಂದ್ಯಗಳನ್ನು ಆಡಿಸಲಾಯಿತು. ಸೋಮವಾರ ನಡೆದ ಎರಡೂ ರ್‍ಯಾಪಿಡ್ ಆಟಗಳು ಹೋರಾಟದಿಂದ ಕೂಡಿದ್ದವು. ದಿವ್ಯಾ ಮತ್ತು ಹಂಪಿ ತಮ್ಮ ರೇಟಿಂಗ್ ಸಾಮರ್ಥ್ಯಕ್ಕಿಂತ ಮೇಲಿನ ಮಟ್ಟದಲ್ಲಿ ಆಡಿದರು. ಮೊದಲ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ದಿವ್ಯಾಗೆ ಅಲ್ಪ ಮೇಲುಗೈ ಇತ್ತು. ಹಂಪಿ ಅವರು ರೂಕ್ ಮತ್ತು ಬಿಷಪ್‌ಗಾಗಿ ತಮ್ಮ ಕ್ವೀನ್ ಕೊಟ್ಟರು. ಅವರು ಭದ್ರ ಕೋಟೆ ಕಟ್ಟಿದ್ದರಿಂದ ಆಟ ಡ್ರಾ ಆಯಿತು.

ಎರಡನೇ ಆಟದಲ್ಲಿ ಹಂಪಿ ಅವರು ಆರಂಭಿಕ ನಡೆಗಳ ನಂತರ ಒತ್ತಡಕ್ಕೆ ಸಿಲುಕಿದರು. ಒಂದು ಹಂತದಲ್ಲಿ ಅವರ ಬಳಿ ಎಂಟು ನಿಮಿಷಗಳಿದ್ದರೆ, ದಿವ್ಯಾ ಬಳಿ 16 ನಿಮಿಷಗಳಿದ್ದವು. ಆದರೆ ಕೊನೆಯ ಹಂತದಲ್ಲಿ ಮತ್ತೆ ಒತ್ತಡದಲ್ಲಿ ಹಂಪಿ ತಪ್ಪು ಮಾಡಿದರು. ಇದರಿಂದ ದಿವ್ಯಾ ಅವರಿಗೆ ತಮ್ಮ ಕಾಲಾಳನ್ನು ಎದುರಾಳಿಯ ಕೊನೆಯ ಫೈಲ್‌ನತ್ತ ಮುನ್ನಡೆಸಲು ದಾರಿಯಾಯಿತು. ಪಂದ್ಯ ತ್ಯಜಿಸಿ 38 ವರ್ಷ ವಯಸ್ಸಿನ ಹಂಪಿ, ಎದುರಾಳಿಗೆ ಹಸ್ತಲಾಘವ ನೀಡಿದರು. ಈ ವೇಳೆ ದಿವ್ಯಾ ಅವರು ಭಾವೋದ್ವೇಗ ತಡೆಯಲಾಗದೇ ಕಣ್ಣೀರಾದರು. ಅವರನ್ನು ತಾಯಿ ಡಾ.ನಮ್ರತಾ ದೇಶಮುಖ್ ಅಪ್ಪಿ, ಬೆನ್ನು ತಟ್ಟಿದರು.

'ಈ (ಗೆಲುವಿನ) ವಿವರಣೆಗೆ ಸಮಯ ಬೇಕು. ಗ್ರ್ಯಾಂಡ್‌ಮಾಸ್ಟರ್ ಪಟ್ಟ ನನಗೆ ಈ ರೀತಿ ಒದಗಬೇಕೆಂಬುದು ವಿಧಿಲಿಖಿತವಾಗಿತ್ತು. ಏಕೆಂದರೆ ಈ ಟೂರ್ನಿಗೆ ಮೊದಲು ನನ್ನ ಬಳಿ ಒಂದೂ ನಾರ್ಮ್ ಇರಲಿಲ್ಲ. ಈಗ ನಾನು ಗ್ರ್ಯಾಂಡ್‌ಮಾಸ್ಟರ್' ಎಂದು ವೈದ್ಯ ದಂಪತಿಯ ಮಗಳಾದ ದಿವ್ಯಾ ತಕ್ಷಣದ ಪ್ರತಿಕ್ರಿಯೆ ನೀಡಿದರು.

ಗಮನಾರ್ಹ ಎಂದರೆ, ಇಂದಿನ ಫೈನಲ್ ಟೈಬ್ರೇಕ್ ಪಂದ್ಯಗಳಿಗೆ ಮೊದಲು, ಫೇವರಿಟ್ ಆಟಗಾರ್ತಿ ಯಾರೆಂದು ಫಿಡೆ ನಡೆಸಿದ ಸಮೀಕ್ಷೆಯಲ್ಲಿ ದಿವ್ಯಾ ಪರ ಶೇ 59 ಮತ್ತು ಹಂಪಿ ಪರ ಶೇ 41 ಮತಗಳು ಬಂದಿದ್ದವು.

'ಇದು ಭಾರತೀಯ ಚೆಸ್‌ಗೆ ದೊಡ್ಡ ಸಂಭ್ರಮ' ಎಂದು ಐದು ಬಾರಿಯ ವಿಶ್ವ ಚಾಂಪಿಯನ್ ಹಾಗೂ ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಬಣ್ಣಿಸಿದರು.

'ಭಾರತದ ಇಬ್ಬರು ಆಟಗಾರ್ತಿಯರೂ– ದಿವ್ಯಾ ಮತ್ತು ಹಂಪಿ– ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆದಿದ್ದಾರೆ. ಮೂರನೇ ಸ್ಥಾನ ಪಡೆದ ಚೀನಾದ ಝೊಂಗ್‌ಯಿ ತಾನ್ ಸಹ ಅರ್ಹತೆ ಗಳಿಸಿದ್ದಾರೆ.

'ವಿಶ್ವಕಪ್ ಗೆದ್ದ ದಿವ್ಯಾ ದೇಶಮುಖ್‌ಗೆ ಅವರಿಗೆ ಅಭಿನಂದನೆಗಳು. ಗ್ರ್ಯಾಂಡ್‌ಮಾಸ್ಟರ್ ಪಟ್ಟದ ಜೊತೆಗೆ ಕ್ಯಾಂಡಿಡೇಟ್ಸ್‌ನಲ್ಲಿ ಸ್ಥಾನ. ಉತ್ತಮ ಹಣಾಹಣಿ. ಹಂಪಿ ಸಹ ಚೆನ್ನಾಗಿಯೇ ಆಡಿದರು ಮತ್ತು ಹೋರಾಟದ ಮನೋಭಾವ ಪ್ರದರ್ಶಿಸಿದರು. ಅವರೂ ಗ್ರೇಟ್ ಚಾಂಪಿಯನ್! ಭಾರತದ ಚೆಸ್‌ಗೆ ಇದು ಸಂಭ್ರಮದ ಕ್ಷಣ. ವಿಶೇಷವಾಗಿ ಮಹಿಳಾ ಚೆಸ್‌ಗೆ' ಎಂದು ಆನಂದ್ 'ಎಕ್ಸ್' ನಲ್ಲಿ ಅಭಿನಂದಿಸಿದ್ದಾರೆ.

88ನೇ ಜಿಎಂ: ದಿವ್ಯಾ ಅವರು ದೇಶದ 88ನೇ ಗ್ರ್ಯಾಂಡ್ ಮಾಸ್ಟರ್ ಎನಿಸಿದರು. ಈ ಪಟ್ಟ ಪಡೆದ ಭಾರತದ ನಾಲ್ಕನೇ ಆಟಗಾರ್ತಿ. ಅವರ ಫೈನಲ್ ಎದುರಾಳಿಯಾಗಿದ್ದ ಹಂಪಿ (2002), ಡಿ. ಹಾರಿಕ (2011) ಮತ್ತು ವೈಶಾಲಿ ರಮೇಶ ಬಾಬು (2023) ಈ ಮೊದಲು ಗ್ರ್ಯಾಂಡ್‌ಮಾಸ್ಟರ್‌ಗಳಾಗಿದ್ದ ಆಟಗಾರ್ತಿಯರು. ಅಂದರೆ ಹಂಪಿ ಜಿಎಂ ಆದಾಗ ದಿವ್ಯಾ ಇನ್ನೂ ಜನಿಸಿರಲಿಲ್ಲ.

ದಿವ್ಯಾ ಆಟ ಧೋನಿ ರೀತಿ: ಶ್ರೀನಾಥ್



ನವದೆಹಲಿ (ಪಿಟಿಐ): 'ದಿವ್ಯಾ ಅವರ ಸಾಮರ್ಥ್ಯ ಎಂದರೆ ಮಹತ್ವದ ಸಂದರ್ಭ ಮತ್ತು ನಿರ್ಣಾಯಕ ಸಂದರ್ಭಗಳಲ್ಲಿ ಆಟದ ಮಟ್ಟ ಎತ್ತರಿಸುವುದು. ಅದು ಮಹೇಂದ್ರ ಸಿಂಗ್ ಧೋನಿ ಅವರು ಕೊನೆಯ ಓವರುಗಳಲ್ಲಿ ಪಂದ್ಯ ಗೆಲ್ಲಿಸುವ ರೀತಿ...'

–ಹೀಗೆಂದು ಬಣ್ಣಿಸಿದವರು ಅವರ ಆರಂಭದ ಕೋಚ್ ಶ್ರೀನಾಥ್ ನಾರಾಯಣನ್. ದಿವ್ಯಾ ದೇಶಮುಖ್ ಅವರ ಸಂಯಮ, ಶಾಂತಚಿತ್ತದ ಆಟವನ್ನು ಅವರು ಕ್ರಿಕೆಟ್ ದಿಗ್ಗಜ ಎಂ.ಎಸ್.ಧೋನಿ ಅವರಿಗೆ ಹೋಲಿಸಿದರು. 'ದಿವ್ಯಾ ಅವರಲ್ಲೂ ಅಂಥ ಆಟವಿದೆ. ಮಹತ್ವದ ಪಂದ್ಯಗಳ ಕೊನೆಯ ಸುತ್ತಿನಲ್ಲಿ ಅಥವಾ ನಿರ್ಣಾಯಕ ಸಂದರ್ಭಗಳಲ್ಲಿ, ಒತ್ತಡದ ಸನ್ನಿವೇಶದಲ್ಲಿ ಅವರು ಚೆನ್ನಾಗಿ ಆಡುತ್ತಾರೆ' ಎಂದು ತುಲನೆ ಮಾಡಿದರು.

'ಅಕೆ ಮೊದಲು ಆಕ್ರಮಣಕಾರಿ ಶೈಲಿಯ ಆಟವಾಡುತ್ತಿದ್ದಳು. ಆದರೆ ಕಾಲಕಳೆದಂತೆ ಆಲ್‌ರೌಂಡ್ ಆಟಕ್ಕೆ ಒತ್ತು ನೀಡಿದರು. ಅಕೆ ಮೂರೂ ಮಾದರಿಯಲ್ಲಿ (ಕ್ಲಾಸಿಕಲ್, ರ್‍ಯಾಪಿಡ್, ಬ್ಲಿಟ್ಝ್) ಉತ್ತಮ ಆಟಗಾರ್ತಿ' ಎಂದು ಚೆನ್ನೈನಿಂದ ಅವರು ಪಿಟಿಐಗೆ ತಿಳಿಸಿದರು.

ಶ್ರೀನಾಥ್ ಅವರು 2020ರವರೆಗೆ ನಾಗ್ಪುರದ ಆಟಗಾರ್ತಿಗೆ ಕೋಚ್ ಆಗಿದ್ದರು.


ರನ್ನರ್ ಅಪ್ ಕೋನೇರು ಹಂಪಿ
ಫಿಡೆ ಚಿತ್ರಗಳು



ಮಹಿಳಾ ಚೆಸ್ ವಿಶ್ವಕಪ್ ಗೆದ್ದ ದಿವ್ಯಾ ದೇಶಮುಖ್ ಅವರಿಗೆ ಅಭಿನಂದನೆಗಳು. ಅವರು ಕೇವಲ 19 ವರ್ಷ ವಯಸ್ಸಿನಲ್ಲಿಯೇ ಈ ಸಾಧನೆ ಮಾಡಿದ್ದಾರೆ. ಇದು ಭಾರತೀಯರ, ಅದರಲ್ಲೂ ನಾರಿಯರ ಪ್ರತಿಭೆಗೆ ಸಾಕ್ಷಿಯಾಗಿದೆ. ವೃತ್ತಿಜೀವನದುದ್ದಕ್ಕೂ ಅಸಾಮಾನ್ಯ ಸಾಧನೆ ಮಾಡುತ್ತಿರುವ ಕೋನೇರು ಹಂಪಿ ಅವರಿಗೂ ಅಭಿನಂದನೆಗಳು

ದ್ರೌಪದಿ ಮುರ್ಮು, ರಾಷ್ಟ್ರಪತಿ



ಭಾರತದ ಆಟಗಾರ್ತಿಯರೇ ಆಡಿದ ಐತಿಹಾಸಿಕ ಫೈನಲ್ ಪಂದ್ಯವಿದು. ತರುಣಿ ದಿವ್ಯಾ ದೇಶಮುಖ್ ಅವರು ಮಹಿಳಾ ಚೆಸ್ ವಿಶ್ವಕಪ್ ಜಯಿಸಿ, ಯುವ ಜನಾಂಗಕ್ಕೆ ಸ್ಫೂರ್ತಿಯಾಗಿದ್ದಾರೆ. ಟೂರ್ನಿಯಲ್ಲಿ ಅದ್ಭುತ ಸಾಧನೆ ತೋರಿರುವ ಕೋನೇರು ಹಂಪಿ ಅವರಿಗೆ ಕೂಡ ಶುಭ ಕಾಮನೆಗಳು

ನರೇಂದ್ರ ಮೋದಿ, ಪ್ರಧಾನಮಂತ್ರಿ

ಬ್ಯಾಡ್ಮಿಂಟನ್: ವರುಣ್, ತಿಲಕ್, ಹಾರ್ದಿಕ್ 'ಡಬಲ್' ಮುನ್ನಡೆ



ಮಂಗಳೂರು: ಎದುರಾಳಿಯ ಆಟಗಾರನ ಪ್ರಬಲ ಪೈಪೋಟಿಯನ್ನು ಮೀರಿದ ಬೆಂಗಳೂರು ನಗರ ಜಿಲ್ಲೆಯ ವರುಣ್ ಜಿ.ಪಿ, ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಅರ್ಹತಾ ಸುತ್ತಿನ ಸೀನಿಯರ್ ಮತ್ತು 19 ವರ್ಷದೊಳಗಿನವರ ವಿಭಾಗಗಳಲ್ಲಿ ಮುನ್ನಡೆ ಸಾಧಿಸಿದರು.

ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಯ ಸಹಯೋಗದಲ್ಲಿ ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆ ಉರ್ವ ಕ್ರೀಡಾ ಸಂಕೀರ್ಣದಲ್ಲಿ ಆಯೋಜಿಸಿರುವ ಟೂರ್ನಿಯ ಎರಡನೇ ದಿನವಾದ ಸೋಮವಾರ ಎರಡೂ ವಿಭಾಗಗಳ ಮೂರನೇ ಸುತ್ತಿನಲ್ಲಿ ಅವರು ಭರ್ಜರಿ ಜಯ ಸಾಧಿಸಿದರು. ಸೀನಿಯರ್ ವಿಭಾಗದಲ್ಲಿ ಬೆಂಗಳೂರಿನ ತೋಷನ್ ನಾಯಕ್ ವಿರುದ್ಧ 8-15, 15-11, 15-12ರಲ್ಲಿ ಗೆದ್ದ ಅವರು 19 ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರಿನ ತೇಜಸ್ ಎದುರು 15-10, 15-10ರ ಗೆಲುವು ದಾಖಲಿಸಿದರು.

ಬೆಂಗಳೂರಿನ ತಿಲಕ್ ಬಿ.ಶೆಟ್ಟಿ ಮತ್ತು ಹಾರ್ದಿಕ್ ಮೊಹಾಂತಿ ಕೂಡ ಎರಡೂ ವಿಭಾಗಗಳಲ್ಲಿ ಮುಂದಿನ ಹಂತಕ್ಕೆ ಲಗ್ಗೆ ಇಟ್ಟರು. ಸೀನಿಯರ್ ವಿಭಾಗದಲ್ಲಿ ತಿಲಕ್ ಶೆಟ್ಟಿ ಬೆಂಗಳೂರಿನ ರೋಹನ್ ಶ್ರೀಸಾಯ್ ವಿರುದ್ಧ 15-11, 15-12ರಲ್ಲಿ ಮತ್ತು 19 ವರ್ಷದೊಳಗಿನವರ ವಿಭಾಗದಲ್ಲಿ ಆದಿತ್ಯ ಕುರುವಿಳ ವಿರುದ್ಧ 15-8, 15-11ರಲ್ಲಿ ಗೆದ್ದರು. ಹಾರ್ದಿಕ್ ಸೀನಿಯರ್ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರದ ಪವನ್ ಅವರನ್ನು 15-9, 15-4ರಿಂದ, 19 ವರ್ಷದೊಳಗಿನವರ ವಿಭಾಗದಲ್ಲಿ ಗಣೇಶ್ ಬಾಬು ಅವರನ್ನು 15-9, 15-5ರಲ್ಲಿ ಮಣಿಸಿದರು.

ಲಕ್ಷ್ಯ, ಚಿರಾಗ್ ವಿರುದ್ಧದ ಪ್ರಕರಣ ರದ್ದು


ಲಕ್ಷ್ಯ ಸೇನ್


ಚಿರಾಗ್ ಸೇನ್

ನವದೆಹಲಿ (ಪಿಟಿಐ): ಜನನ ಪ್ರಮಾಣಪತ್ರ ತಿರುಚಿದ ಪ್ರಕರಣಕ್ಕೆ ಸಂಬಂಧಿಸಿ ಬ್ಯಾಡ್ಮಿಂಟನ್ ತಾರೆ ಲಕ್ಷ್ಯ ಸೇನ್, ಅವರ ಸೋದರ ಚಿರಾಗ್ ಸೇನ್, ಕೋಚ್ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಗೊಳಿಸಿದೆ.

ಈ ಕ್ರಿಮಿನಲ್ ಪ್ರಕರಣದ ವಿಚಾರಣೆ ಮುಂದುವರಿಸುವುದು ನ್ಯಾಯ ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಂಡಂತೆ ಎಂದು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅರವಿಂದ ಕುಮಾರ್ ಅವರನ್ನು ಒಳಗೊಂಡ ಪೀಠವು ಅಭಿಪ್ರಾಯಪಟ್ಟಿತು. ಲಕ್ಷ್ಯ ಮತ್ತು ಚಿರಾಗ್ ಸೇನ್ ಅವರ ಜನನ ಪ್ರಮಾಣ ಪತ್ರ ಫೋರ್ಜರಿ ಮಾಡಲಾಗಿದೆ ಎಂದು ದೂರಿ ಎಂ.ಜಿ.ನಾಗರಾಜ್ ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರು.

ಚೆಸ್: ಇನಿಯನ್ ಚಾಂಪಿಯನ್



ನವದೆಹಲಿ (ಪಿಟಿಐ): ಭಾರತದ ಜಿಎಂ ಪಿ.ಇನಿಯನ್ ಅವರು ಫ್ರಾನ್ಸ್‌ನ ಎಕ್ಸ್ ಎನ್ ಪ್ರಾವಿನ್ಸ್ ನಗರದಲ್ಲಿ ಸೋಮವಾರ ಮುಕ್ತಾಯಗೊಂಡ ಡೋಲ್ ಓಪನ್ ಇಂಟರ್‌ನ್ಯಾಷನಲ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರು.

ತಮಿಳುನಾಡಿನ ಈರೋಡ್‌ನ ಆಟಗಾರ ಮತ್ತು ಪೋಲೆಂಡ್‌ನ ಯಾನ್ ಮಲೆಕ್ ತಲಾ 7.5 ಪಾಯಿಂಟ್ಸ್ ಗಳಿಸಿ ಅಗ್ರ-ಸ್ಥಾನದಲ್ಲಿದ್ದರು. ಆದರೆ ಟೈ ಬ್ರೇಕರ್‌ನಲ್ಲಿ ಇನಿಯನ್‌ಗೆ ಪ್ರಶಸ್ತಿ ಒಲಿಯಿತು. ಉಜ್ಬೇಕಿಸ್ತಾನ, ಟರ್ಕಿ, ಪೋಲೆಂಡ್, ಫ್ರಾನ್ಸ್‌ನ ಐಎಂ ಆಟಗಾರರನ್ನು ಮಣಿಸಿದರು. ಅವರು ಕೊನೆಯ ನಾಲ್ಕು ಪಂದ್ಯಗಳಲ್ಲಿ ಸತತವಾಗಿ ಗೆಲುವು ಪಡೆದರು.

ದಾಖಲೆ ಉತ್ತಮಪಡಿಸಿದ ತೇಜಸ್ವಿನ್



ನವದೆಹಲಿ (ಪಿಟಿಐ): ಭಾರತದ ತೇಜಸ್ವಿನ್ ಶಂಕರ್ ಅವರು ಪೋಲೆಂಡ್‌ನಲ್ಲಿ ನಡೆದ ವೀಸ್ಲಾ ಜೇಪಿವಸ್ಕಿ ಸ್ಮರಣಾರ್ಥ ಕ್ರೀಡಾಕೂಟದ ಡೆಕಾಥ್ಲಾನ್ ಸ್ಪರ್ಧೆಯಲ್ಲಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದಾರೆ.

ತೇಜಸ್ವಿನ್, ವಿಶ್ವ ಅಥ್ಲೆಟಿಕ್ಸ್‌ನ ಟೂರ್ ಗೋಲ್ಡ್ ಮಟ್ಟದ ಈ ಸ್ಪರ್ಧೆಯಲ್ಲಿ 7,800ಕ್ಕೂ ಅಧಿಕ ಅಂಕ ಪಡೆದ ಭಾರತದ ಮೊದಲ ಅಥ್ಲೀಟ್ ಎಂಬ ಹಿರಿಮೆಗೂ ಪಾತ್ರವಾದರು. 10 ವಿಭಾಗಗಳನ್ನು ಒಳಗೊಂಡ ಸ್ಪರ್ಧೆಯಲ್ಲಿ ಅವರು ಒಟ್ಟು 7,826 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದರು.

ನಾಯಕತ್ವ ಹೊಣೆ ಸಮರ್ಥವಾಗಿ ನಿಭಾಯಿಸಿದ ಶುಭಮನ್ ಗಿಲ್

ಟೀಕಾಕಾರರ ಬಾಯಿ ಮುಚ್ಚಿಸಿದ 'ಯುವರಾಜ'

• ಸಿಡ್ನಿ ಕಿರಣ್

ಮ್ಯಾಂಚೆಸ್ಟರ್: ಶುಭಮನ್ ಗಿಲ್ ಅವರನ್ನು ಭಾರತ ಕ್ರಿಕೆಟ್ ತಂಡದ ನಾಯಕನಾಗಿ ಘೋಷಣೆ ಮಾಡುವಾಗ, ಯುವರಾಜನ ನೇಮಕದ ನಿರ್ಧಾರ ಅವಸರದ ಕ್ರಮವಾಗಿತ್ತೇ ಎಂಬ ಪ್ರಶ್ನೆಗಳು ಕೇಳಿಬಂದಿದ್ದವು. ಅವರಿಗೆ 25 ವರ್ಷ ವಯಸ್ಸು. ಜೊತೆಗೆ 'ಸೆನಾ' (ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ) ತಂಡಗಳ ವಿರುದ್ಧ ಅವರ ದಾಖಲೆಗಳು ಅಷ್ಟೇನೂ ಉತ್ತಮ ಮಟ್ಟದಲ್ಲಿರಲಿಲ್ಲ.

ಅವರಿಗೆ ಪಳಗಲು ಅವಕಾಶ ನೀಡಿ, ಅನುಭವಿ ಆಟಗಾರರಾದ ಕೆ.ಎಲ್.ರಾಹುಲ್, ಜಸ್‌ಪ್ರೀತ್ ಬೂಮ್ರಾ ಅಥವಾ ರಿಷಭ್ ಪಂತ್ ಅವರಲ್ಲಿ ಒಬ್ಬರಿಗೆ ಈ ಹೊಣೆ ವಹಿಸಬಹುದಿತ್ತಲ್ಲವೇ? ಪರಿವರ್ತನೆಯಲ್ಲಿರುವ ತಂಡದ ನಾಯಕತ್ವದ ಜೊತೆಗೆ ಭಾರತ ಇಂಗ್ಲೆಂಡ್ ನೆಲದಲ್ಲಿ ಕೇವಲ ಮೂರೇ ಸರಣಿ ಗೆದ್ದಿರುವಾಗ ಈ ಜವಾಬ್ದಾರಿ ಅವರನ್ನು ಕುಗ್ಗಿಸುವುದಿಲ್ಲವೇ? ಭಾರತ ತಂಡದ ನಾಯಕನಾಗಿ ಐದು ಟೆಸ್ಟ್‌ಗಳ ಸರಣಿಗೆ ನಾಯಕತ್ವ ವಹಿಸುವುದು ಅವರನ್ನು ಮಾನಸಿಕ ಮತ್ತು ದೈಹಿಕವಾಗಿ ದಣಿಸುವುದಿಲ್ಲವೇ?.... ಹೀಗೆ ಹಲವು ಆಯಾಮಗಳಲ್ಲಿ ಚರ್ಚೆಗಳಾಗಿದ್ದವು.

ಮೃದುಭಾಷಿ ಆದರೆ ದೃಢ ಮನಸ್ಸಿನ ಗಿಲ್ ಈ ಪ್ರಶ್ನೆಗಳಿಗೆಲ್ಲಾ ಸಮರ್ಥ ರೀತಿಯಲ್ಲೇ ಉತ್ತರ ನೀಡಿದ್ದಾರೆ. ವೈಯಕ್ತಿಕ ಆಟದ ಜೊತೆಗೆ ನಾಯಕತ್ವ ಹೊಣೆಯನ್ನೂ ನಿಭಾಯಿಸಬಲ್ಲೆ ಎಂಬುದನ್ನು ಸಾಧಿಸಿತೋರಿಸಿದ್ದಾರೆ.

ಮೊದಲಿಗೆ, ಗಿಲ್ ಅವರು ಬ್ಯಾಟಿಂಗ್‌ನಲ್ಲಿ ದೀರ್ಘ ಕಾಲದ ದಾಖಲೆಗಳನ್ನು ಮುರಿದಿದ್ದಾರೆ. ಜುಲೈ 31ರಂದು ಅಂತಿಮ ಟೆಸ್ಟ್ ಆರಂಭವಾಗಲಿದ್ದು ಅವರು ಇನ್ನೂ ಹೆಚ್ಚಿನದನ್ನು ಸಾಧಿಸುವ ಹಾದಿಯಲ್ಲಿದ್ದಾರೆ. ಆ್ಯಂಡರ್ಸನ್– ತೆಂಡೂಲ್ಕರ್ ಟ್ರೋಫಿ ಸರಣಿಗೆ ಮೊದಲು ಪಂಜಾಬ್‌ನ ಆಟಗಾರ, 'ಸೆನಾ' ದೇಶಗಳ ವಿರುದ್ಧ ಒಂದೂ ಶತಕ ಬಾರಿಸಿರಲಿಲ್ಲ. ಇಲ್ಲಿಗೆ ಬರುವ ಮೊದಲು ಅವರು ಹೊಡೆದ ಐದೂ ಶತಕಗಳು ಉಪಖಂಡದಲ್ಲಿ ದಾಖಲಾಗಿದ್ದವು. ವಿರಾಟ್ ಕೊಹ್ಲಿ ಅವರ ಪರಂಪರೆಯಲ್ಲಿ ಸಾಗುತ್ತಿರುವ ಆಟಗಾರ ಎನಿಸಿಕೊಂಡ ಗಿಲ್ ಅವರು ಆಸ್ಟ್ರೇಲಿಯಾ ವಿರುದ್ಧ 6 ಟೆಸ್ಟ್‌ಗಳಲ್ಲಿ ಕೇವಲ ಎರಡು ಅರ್ಧ ಶತಕ ಹೊಡೆದಿದ್ದು, 91 ಅವರ ಅತ್ಯಧಿಕ ಗಳಿಕೆಯಾಗಿತ್ತು. ಅವರ ವರ್ಚಸ್ಸು ಗಮನಿಸಿದರೆ ಇದು ಸಾಧಾರಣ ಪ್ರದರ್ಶನ.

ಲೀಡ್ಸ್‌ನಲ್ಲಿ ಬ್ಯಾಟಿಂಗ್‌ಗೆ ಇಳಿದಾಗ ಅವರ ಹೆಗಲ ಮೇಲಿದ್ದ ಹೊಣೆ ಸಾಮಾನ್ಯ ರೀತಿಯದಾಗಿರಲಿಲ್ಲ. ಅವರು ಆಕರ್ಷಕ 147 ರನ್ ಹೊಡೆದು ತಮ್ಮ ಮೇಲಿನ ಅನುಮಾನಗಳಿಗೆಲ್ಲಾ ತೆರೆಯೆಳೆದರು. ಅಲ್ಲಿಂದ ಅವರು ಹಿಂತಿರುಗಿ ನೋಡಿಲ್ಲ. ಡಾನ್ ಬ್ರಾಡ್ಮನ್ ರೀತಿಯ ಲಯದಲ್ಲೇ ಆಡಿ ಕ್ರಿಕೆಟ್ ಜಗತ್ತಿನ ನವತಾರೆಯ ಪಟ್ಟ ಉಳಿಸಿಕೊಂಡಿದ್ದಾರೆ. ಎರಡನೇ ಟೆಸ್ಟ್‌ನಲ್ಲಿ ಸೊಗಸಾದ 269 ಮತ್ತು ಅಧಿಕಾಯುತ 161 ರನ್ ಗಳಿಸಿದರು. ಲಾರ್ಡ್ಸ್‌ನಲ್ಲಿ ಮಾತ್ರ ಹಿನ್ನಡೆ (16 ಮತ್ತು 6) ಅನುಭವಿಸಿದರು.

ಓಲ್ಡ್ ಟ್ರಾಫರ್ಡ್ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 12 ರನ್‌ಗೆ ನಿರ್ಗಮಿಸಿದಾಗ ಒಳಕ್ಕೆ ಬರುವ ಎಸೆತಗಳು ಅವರ ದೌರ್ಬಲ್ಯ, ಅವರ ತಂತ್ರದ ಬಗ್ಗೆ ಪ್ರಶ್ನೆಗಳೆದುರಾದವು. ಆದರೆ ಮುಂದಿನ ಸರದಿಯಲ್ಲಿ 238 ಎಸೆತಗಳನ್ನು ನಿಭಾಯಿಸಿ ಕೆಚ್ಚಿನ 103 ರನ್ ಹೊಡೆಯುವ ಮೂಲಕ ಆ ಟೀಕೆಗಳಿಗೂ ತಕ್ಕ ಉತ್ತರವನ್ನು ಗಿಲ್ ನೀಡಿದ್ದಾರೆ. ಭಾರತ ಎರಡನೇ ಇನಿಂಗ್ಸ್‌ನಲ್ಲಿ ಕುಸಿತದಿಂದ ಪಾರಾಗಲು ಅವರು ರಾಹುಲ್ ಜೊತೆ ದೊಡ್ಡ ಜೊತೆಯಾಟ ಕಟ್ಟಿದರು. ಭಾರತ ಅಮೋಘ ಡ್ರಾ ಸಾಧಿಸಲು ಆ ಜೊತೆಯಾಟ ಅಡಿಪಾಯ ಹಾಕಿತು.

ನಾಯಕತ್ವದ ಬಗ್ಗೆ ಹೇಳುವುದಾದರೆ, ಅವರು ತಮ್ಮ ಇತಿಮಿತಿಯಲ್ಲಿ ಉತ್ತಮವಾಗಿ ಹೊಣೆ ನಿರ್ವಹಿಸಿದ್ದಾರೆ. ತಂಡದಲ್ಲಿ ವೇಗದ ಬೌಲಿಂಗ್ ವಿಭಾಗದಲ್ಲಿ ಉತ್ತಮ ಬೌಲರ್‌ಗಳನ್ನು ಹೊಂದಿಲ್ಲ. ಬೂಮ್ರಾ ಮೂರು ಪಂದ್ಯಗಳಿಗೆ ಲಭ್ಯರಾದರು. ಆಕಾಶ್ ದೀಪ್, ನಿತೀಶ್ ಗಾಯಾಳಾದರು. ಆದರೆ ಇರುವ ಸಂಪನ್ಮೂಲಗಳನ್ನು ಸೂಕ್ತವಾಗಿ ಬಳಸಿದರು. ಅವರ ಕೆಲವು ನಿರ್ಧಾರಗಳು– ಬ್ಯಾಟರ್ ಬದಲು ವಿಕೆಟ್ ಕೀಳಬಲ್ಲ ಕುಲದೀಪ್ ಅವರನ್ನು ಆಡಿಸಲು ಹಿಂಜರಿಕೆ– ರಕ್ಷಣಾತ್ಮಕ ಕ್ರಮವೆನಿಸಿವೆ. ಆದರೆ ತಮ್ಮ ನಿರ್ಧಾರಗಳಿಂದ ಹಿಂದೆ ಸರಿಯಲಿಲ್ಲ.

ಅವರು ಕೊಹ್ಲಿ ಅವರ ರೀತಿಯಲ್ಲಿ ಅಥವಾ ಧೋನಿ, ರೋಹಿತ್ ಶರ್ಮಾ ರೀತಿಯ ನಾಯಕರಲ್ಲ. ಅವರು ತಮ್ಮ ಕೆಲಸದಲ್ಲಿ ಏಕಾಗ್ರತೆ ಹೊಂದಿರುವವರು. ಆದರೆ ಅಗತ್ಯ ಬಿದ್ದಾಗ ಆಕ್ರಮಣಕಾರಿ ನಿರ್ಧಾರಕ್ಕೂ ಮುಂದಾಗುವವರು. ಇದು ಅವರಿಗೆ ನಾಯಕನಾಗಿ ಮೊದಲ ಸರಣಿ. ಅವರಿಗೆ ಕಲಿಯುವ ಅವಕಾಶ ಸಾಕಷ್ಟು ಇದೆ. ಆದರೂ ಯುವರಾಜ ಭರವಸೆ ಮೂಡಿಸಿದ್ದಾರೆ!.


ಶುಭಮನ್ ಗಿಲ್

ಬ್ರಾಡ್ಮನ್ ದಾಖಲೆ ಸನಿಹ ಭಾರತದ ನಾಯಕ

ನಾಯಕತ್ವ ವಹಿಸಿಕೊಂಡ ಮೊದಲ ಸರಣಿಯಲ್ಲೇ ಅತಿ ಹೆಚ್ಚು ರನ್ ಗಳಿಸಿದ ಕ್ರಿಕೆಟಿಗ ಎನಿಸಿಕೊಳ್ಳಲು ಶುಭಮನ್ ಗಿಲ್ ಅವರಿಗೆ ಇನ್ನು 89 ರನ್ ಬೇಕು. ಐದು ಪಂದ್ಯಗಳ ಸರಣಿಯಲ್ಲಿ 4 ಪಂದ್ಯಗಳ 8 ಇನಿಂಗ್ಸ್‌ಗಳಿಂದ ಅವರು 722 ರನ್ ಕಲೆ ಹಾಕಿದ್ದಾರೆ.

ಆಸ್ಟ್ರೇಲಿಯಾದ ಕ್ರಿಕೆಟ್ ದಂತಕತೆ ಡಾನ್ ಬ್ರಾಡ್ಮನ್ ಅವರು ಇಂಗ್ಲೆಂಡ್ ವಿರುದ್ಧ 1936–37ರಲ್ಲಿ ನಡೆದ ಸರಣಿಯಲ್ಲಿ 810 ರನ್ ಗಳಿಸಿದ್ದು ಈವರೆಗೆ ದಾಖಲೆಯಾಗಿದೆ.

ಇಂಗ್ಲೆಂಡ್ ವಿರುದ್ಧದ ಹಾಲಿ ಸರಣಿಯಲ್ಲಿ ಒಂದು ಪಂದ್ಯ ಬಾಕಿ ಇರುವುದರಿಂದ ಗಿಲ್ ಅವರಿಗೆ ಬ್ರಾಡ್ಮನ್ ದಾಖಲೆ ಮುರಿಯುವ ಅವಕಾಶವಿದೆ.

ಇಂಗ್ಲೆಂಡ್ ತಂಡಕ್ಕೆ ಓವರ್ಟನ್

ಲಂಡನ್ (ಪಿಟಿಐ): ಇಂಗ್ಲೆಂಡ್ ತಂಡವು ವೇಗದ ಬೌಲಿಂಗ್ ಆಲ್‌ರೌಂಡರ್ ಜೇಮಿ ಓವರ್ಟನ್ ಅವರನ್ನು ಇದೇ 31ರಂದು ಓವಲ್‌ನಲ್ಲಿ ಆರಂಭವಾಗುವ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯಕ್ಕೆ ಸೇರ್ಪಡೆ ಮಾಡಿಕೊಂಡಿದೆ. 15 ಮಂದಿಯ ತಂಡವನ್ನು ಸೋಮವಾರ ಪ್ರಕಟಿಸಿದೆ.

ಓವರ್ಟನ್ ಈ ಹಿಂದೆ 2022ರಲ್ಲಿ ತಮ್ಮ ಏಕೈಕ ಟೆಸ್ಟ್ ಪಂದ್ಯವನ್ನು 2022ರಲ್ಲಿ ನ್ಯೂಜಿಲೆಂಡ್ ವಿರುದ್ಧ ಆಡಿದ್ದರು. ಆ ಪಂದ್ಯದಲ್ಲಿ ಎರಡು ವಿಕೆಟ್ ಹಾಗೂ 97 ರನ್ ಗಳಿಸಿದ್ದರು. ಅಂತಿಮ 11ರ ತಂಡದಲ್ಲಿ ಸ್ಥಾನ ಗಿಟ್ಟಿಸಲು ಅವರು ಗಸ್ ಅಟ್ಕಿನ್ಸನ್ ಮತ್ತು ಜೋಶ್ ಟಂಗ್ ಜೊತೆ ಪೈಪೋಟಿಯಲ್ಲಿದ್ದಾರೆ. ಮೊದಲ ಎರಡು ಟೆಸ್ಟ್‌ಗಳಲ್ಲಿ ಆಡಿದ್ದ ಟಂಗ್ 11 ವಿಕೆಟ್ ಪಡೆದಿದ್ದರೂ ದುಬಾರಿಯಾಗಿದ್ದರು.

ಇಂಗ್ಲೆಂಡ್ ತಂಡ: ಬೆನ್ ಸ್ಟೋಕ್ಸ್ (ನಾಯಕ), ಜೋಫ್ರಾ ಆರ್ಚರ್, ಗಸ್ ಅಟ್ಕಿನ್ಸನ್, ಜೇಕಬ್ ಬೆಥೆಲ್, ಹ್ಯಾರಿ ಬ್ರೂಕ್, ಬ್ರೈಡನ್ ಕಾರ್ಸ್, ಜಾಕ್ ಕ್ರಾಲಿ, ಲಿಯಾಮ್ ಡಾಸನ್, ಬೆನ್ ಡಕೆಟ್, ಜೇಮಿ ಓವರ್ಟನ್, ಓಲಿ ಪೋಪ್, ಜೋ ರೂಟ್, ಜೇಮಿ ಸ್ಮಿತ್, ಜೋಶ್ ಟಂಗ್, ಕ್ರಿಸ್ ವೋಕ್ಸ್.

ಫುಟ್‌ಬಾಲ್ ಕೋಚ್ ರೇಸ್‌ನಲ್ಲಿ ಖಾಲಿದ್

ನವದೆಹಲಿ (ಪಿಟಿಐ): ಭಾರತದ ಮಾಜಿ ಆಟಗಾರ ಖಾಲಿದ್ ಜಮೀಲ್ ಅವರು ಭಾರತ ಪುರುಷರ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ.

ಆಗಸ್ಟ್ 1 ರಂದು ರಾಷ್ಟ್ರೀಯ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆ ಇಲ್ಲಿ ನಡೆಯಲಿದ್ದು, ಅಂದು ಹೊಸ ಕೋಚ್ ಘೋಷಣೆಯಾಗಲಿದೆ.

ಭಾರತದ ಮಾಜಿ ಕೋಚ್ ಸ್ಟೀಫನ್ ಕಾನ್‌ಸ್ಟಂಟೈನ್ ಕೂಡ ಸ್ಪರ್ಧೆಯಲ್ಲಿದ್ದಾರೆ.

ವಿಶ್ವ ಈಜು ಚಾಂಪಿಯನ್‌ಷಿಪ್: ಚೀನಾದ ಬಾಲಪ್ರತಿಭೆಗೆ ತಪ್ಪಿದ ಪದಕ

ಕೆನಡಾದ ಮೆಕಿಂಟೋಷ್‌ಗೆ ಎರಡನೇ ಚಿನ್ನ



ಕೆನಡಾದ ಸಮ್ಮರ್ ಮೆಕಿಂಟೋಷ್ (ಎಡ) ಚೀನಾದ ಯು ಝಿದಿ
ಎಎಫ್‌ಪಿ ಚಿತ್ರಗಳು

ಸಿಂಗಪುರ (ಎಪಿ): ಕೆನಡಾದ ಈಜು ತಾರೆ ಸಮ್ಮರ್ ಮೆಕಿಂಟೋಷ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ವರ್ಣಕ್ಕೆ ಕೊರಳೊಡ್ಡಿದರು. ಚೀನಾದ 12 ವರ್ಷದ ಯು ಝಿದಿ ಕೂದಲೆಳೆಯ ಅಂತರದಲ್ಲಿ ಪದಕ ತಪ್ಪಿಸಿಕೊಂಡರು.

18 ವರ್ಷದ ಮೆಕಿಂಟೋಷ್, ಕೂಟದ ಎರಡನೇ ದಿನವಾದ ಸೋಮವಾರ ಮಹಿಳೆಯರ 200 ಮೀಟರ್ ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ 2 ನಿಮಿಷ 06.69 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಾಂಪಿಯನ್ ಆದರು. ಇದೇ ಸ್ಪರ್ಧೆಯ ವಿಶ್ವದಾಖಲೆಯೂ (2:05.70) ಅವರ ಹೆಸರಿನಲ್ಲಿದೆ. ಅಮೆರಿಕದ ಅಲೆಕ್ಸ್ ವಾಲ್ಷ್ (2:08.58) ಮತ್ತು ಕೆನಡಾದ ಮೇರಿ ಸೋಫಿ ಹಾರ್ವೆ (2:09.15) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಚೀನಾದ ಪೋರಿ ಝಿದಿ 2 ನಿಮಿಷ 09.21 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ನಾಲ್ಕನೇ ಸ್ಥಾನ ಪಡೆದರು. ಈ ಹದಿಹರೆಯದ ತಾರೆ 400 ಮೀಟರ್ ವೈಯಕ್ತಿಕ ಮೆಡ್ಲೆ ಮತ್ತು 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲೂ ಕಣಕ್ಕೆ ಇಳಿಯುವರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮೂರು ಚಿನ್ನ ಸೇರಿದಂತೆ ನಾಲ್ಕು ಪದಕ ಗೆದ್ದಿರುವ 18 ವರ್ಷದ ಮೆಕಿಂಟೋಷ್, ಇಲ್ಲಿ ಐದು ಚಿನ್ನದ ಪದಕ ಗೆಲ್ಲುವ ಗುರಿ ಹೊಂದಿದ್ದಾರೆ. ಭಾನುವಾರ ಅವರು 400 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನದ ಸಾಧನೆ ಮೆರೆದಿದ್ದರು. ಇಲ್ಲಿ ಮುಂದಿನ ಆರು ದಿನಗಳಲ್ಲಿ ಮೆಕಿಂಟೋಷ್ ಅವರು 400 ಮೀಟರ್ ಮೆಡ್ಲೆ, 800 ಮೀಟರ್ ಫ್ರೀಸ್ಟೈಲ್ ಮತ್ತು 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಗಳಲ್ಲಿ ಪಾಬಲ್ಯ ಸಾಧಿಸುವ ವಿಶ್ವಾಸದಲ್ಲಿದ್ದಾರೆ.

ಮಹಿಳೆಯರ 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಅಮೆರಿಕದ ಗ್ರೆಚೆನ್ ವಾಲ್ಷ್ ಚಿನ್ನ ಗೆದ್ದರು. ಒಲಿಂಪಿಕ್ಸ್ ಬೆಳ್ಳಿ ವಿಜೇತ ವಾಲ್ಷ್ 54.73 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಬೆಲ್ಜಿಯಂನ ರೂಸ್ ವ್ಯಾನೋಟರ್ಡಿಜ್ಕ್ (55.84ಸೆ) ಬೆಳ್ಳಿ ಮತ್ತು ಆಸ್ಟ್ರೇಲಿಯಾದ ಅಲೆಕ್ಸಾಂಡ್ರಿಯಾ ಪರ್ಕಿನ್ಸ್ (56.33ಸೆ) ಕಂಚು ಗೆದ್ದರು.

ಪುರುಷರ 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚೀನಾದ ಕಿನ್ ಹೈಯಾಂಗ್ (58.23ಸೆ) ಅವರು ಸ್ವರ್ಣ ಸಾಧನೆ ಮಾಡಿದರು. ಪ್ಯಾರಿಸ್ ಒಲಿಂಪಿಕ್ ಚಾಂಪಿಯನ್ ಇಟಲಿಯ ನಿಕೊಲೊ ಮಾರ್ಟಿನೆಂಘಿ (58.58) ಅವರನ್ನು ಹಿಂದಿಕ್ಕಿ ತಮ್ಮ ದೇಶಕ್ಕೆ ಮೊದಲ ಚಿನ್ನ ತಂದುಕೊಟ್ಟರು. ಕಿರ್ಗಿಸ್ತಾನದ ಡೆನಿಸ್ ಪೆಟ್ರಾಶೋವ್ (58.88) ಕಂಚಿನ ಪದಕ ಜಯಿಸಿದರು.

ಫ್ರಾನ್ಸ್‌ನ ಮ್ಯಾಕ್ಸಿಮ್ ಗ್ರೌಸೆಟ್ (22.48ಸೆ) ಅವರು ಪುರುಷರ 50 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಸ್ವಿಟ್ಜರ್‌ಲ್ಯಾಂಡ್‌ನ ನೋ ಪೊಂಟಿ (22.51 ಸೆ) ಮತ್ತು ಇಟಲಿಯ ಥಾಮಸ್ ಸೆಕಾನ್ (22.67) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಸಜನ್ ಪ್ರಕಾಶ್‌ಗೆ ನಿರಾಸೆ: ಪುರುಷರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಸಜನ್ ಪ್ರಕಾಶ್ ಅವರು ನಿರಾಸೆ ಮೂಡಿಸಿದರು. 31 ವರ್ಷದ ಈಜುಪಟು ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾದರು.

ಸಜನ್ 1 ನಿಮಿಷ 51.57 ಸೆಕೆಂಡುಗಳಲ್ಲಿ ಗುರಿ ತಲುಪಿ, ತಮ್ಮ ಹೀಟ್ಸ್‌ನಲ್ಲಿ ನಾಲ್ಕನೇ ಸ್ಥಾನ ಮತ್ತು ಒಟ್ಟಾರೆಯಾಗಿ 43ನೇ ಸ್ಥಾನ ಪಡೆದರು. ಅಗ್ರ 16 ಈಜುಗಾರರು ಸೆಮಿಫೈನಲ್‌ಗೆ ಮುನ್ನಡೆದರು. ಎರಡು ಬಾರಿಯ ಒಲಿಂಪಿಯನ್ ಆಗಿರುವ ಸಜನ್, ಮಂಗಳವಾರ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.